ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 2 ಭಾನುವಾರ 2023

ಸಂಪುಟ: 43 | ಸಂಚಿಕೆ: 342 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

43

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹ 4

ಮೇಲುಕೋಟೆ ಚೆಲುವನ ವೈರಮುಡಿ ವೈಭವದ ಉತ್ಸವ

ಗೋವಿಂದ ನಾಮದೊಂದಿಗೆ ಉತ್ಸವ ಕಣ್ತುಂಬಿಕೊಂಡು ಪುನೀತರಾದ ಲಕ್ಷಾಂತರ ಭಕ್ತರು



ಮೇಲುಕೋಟೆ, ಏ.1–ಶುಭಕೃತ್ ನಾಮ ಸಂವತ್ಸರದ ವಿಶ್ವವಿಖ್ಯಾತ ವೈರಮುಡಿ ಉತ್ಸವ ಲಕ್ಷಾಂತರ ಭಕ್ತರ ಜಯಘೋಷದ ನಡುವೆ ಶನಿವಾರ ರಾತ್ರಿ ವೈಭವದಿಂದ ನೆರವೇರಿತು. ಐತಿಹಾಸಿಕ ಧಾರ್ಮಿಕ ಕ್ಷೇತ್ರ ಮೇಲುಕೋಟೆಯಲ್ಲಿ ರಾತ್ರಿ ಮಹಾ ಮಂಗಳಾರತಿ ನಂತರ ಆರಂಭವಾದ ಉತ್ಸವ ಮುಂಜಾನೆ 4 ಗಂಟೆವರೆಗೂ ವೈಭವದಿಂದ ಜರುಗಿತು. ದೇವಾಲಯದ ಸುತ್ತಲೂ ಕಿಕ್ಕಿರಿದು ತುಂಬಿದ್ದ ಲಕ್ಷಾಂತರ ಭಕ್ತವೃಂದ ಚೆಲುವ ನಾರಾಯಣನ ವೈರಮುಡಿ ಉತ್ಸವದಲ್ಲಿ ತಾವೂ ಗೋವಿಂದ ನಾಮ ಘೋಷಣೆ ಮೊಳಗಿಸುತ್ತಾ ಧನ್ಯತಾಭಾವದೊಂದಿಗೆ ದರ್ಶನ ಪಡೆದು ಪುನೀತರಾದರು.

ಮಂಡ್ಯ ನಗರದ ಜಿಲ್ಲಾ ಖಜಾನೆಯಿಂದ ಪೊಲೀಸ್ ಬಂದೋಬಸ್ತ್‌ನಲ್ಲಿ ಸಂಜೆ 6.30ಕ್ಕೆ ಮೇಲುಕೋಟೆಗೆ ರಾಜಮುಡಿ, ವೈರಮುಡಿ ತಿರುವಾಭರಣ ಪೆಟ್ಟಿಗೆಯನ್ನು ತರಲಾಯಿತು. ಬೆಳಗ್ಗೆ 7 ಗಂಟೆಗೆ ಜಿಲ್ಲಾ ಖಜಾನೆಯಿಂದ ವಿಶೇಷ ● 9ನೇ ಪುಟಕ್ಕೆ

ಇಂದು ಶ್ರೀಕಂಠೇಶ್ವರನ ಪಂಚ ಮಹಾರಥೋತ್ಸವ

ದಕ್ಷಿಣಕಾಶಿಯಲ್ಲಿ ದೊಡ್ಡಜಾತ್ರೆಗೆ ಸಕಲ ಸಿದ್ಧತೆ



ನಂಜನಗೂಡು, ಏ.1– ದಕ್ಷಿಣಕಾಶಿ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿಯವರ ಪಂಚ ಮಹಾರಥೋತ್ಸವ(ದೊಡ್ಡಜಾತ್ರೆ) ನಾಳೆ (ಏ.2) ನಡೆಯಲಿದ್ದು, ಅದ್ಧೂರಿ ದೊಡ್ಡಜಾತ್ರಾ ಮಹೋತ್ಸವಕ್ಕಾಗಿ ಸಕಲ ಸಿದ್ಧತೆ ಪೂರ್ಣಗೊಂಡಿದೆ.

ಭಾನುವಾರ ಮುಂಜಾನೆ 6ರಿಂದ 6.40ರೊಳಗೆ ಸಲ್ಲುವ ಮೀನ ಶುಭ ಲಗ್ನದಲ್ಲಿ ರಥೋತ್ಸವ ಜರುಗಲಿದೆ. ರಥದಲ್ಲಿ ವಜ್ರ, ವೈಢೂರ್ಯ ಖಚಿತ ಶ್ರೀಕಂಠೇಶ್ವರಸ್ವಾಮಿಯವರ ಮೂರ್ತಿಯನ್ನು ಪ್ರತಿಷ್ಠಾಪಿಸಿ ಹೂವಿನಿಂದ ವಿಶೇಷವಾಗಿ ಅಲಂಕರಿಸಲಾಗುತ್ತದೆ. ದೇವಾಲಯದ ಅರ್ಚಕ ವೃಂದ ಧಾರ್ಮಿಕ ವಿಧಿವಿಧಾನ, ವೇದ ಘೋಷ ಮೊಳಗಿಸಿದ ನಂತರ ಮಹಾಮಂಗಳಾರತಿ, ಈಡುಗಾಯಿ ಒಡೆದ ಬಳಿಕ ರಥೋತ್ಸವಕ್ಕೆ ಚಾಲನೆ ಸಿಗಲಿದೆ. ಈ ಪುಣ್ಯ ಕಾಲಕ್ಕೆ ಕಾಯುತ್ತಿದ್ದ ಲಕ್ಷಾಂತರ ಭಕ್ತರು ಭಾರೀ ಗಾತ್ರದ ಹಗ್ಗ ಹಿಡಿದು ಜೈ ಶ್ರೀಕಂಠ. ಜೈ ನಂಜುಂಡ, ಜೈ ಪಾರ್ವತಿದೇವಿ ಘೋಷಣೆ ಮುಗಿಲು ಮುಟ್ಟುವಂತೆ ಕೂಗುತ್ತಾ ರಥ ಎಳೆಯುತ್ತಾರೆ. ರಥ ರಾಜ ಗಾಂಭೀರ್ಯದಿಂದ ಸಾಗಲಿದ್ದು, ಭಕ್ತರು ಈ ವೈಭವ ಕಣ್ತುಂಬಿಕೊಳ್ಳುವುದೇ ಮಹಾಭಾಗ್ಯ.

ನಂಜನಗೂಡಿನ ದೊಡ್ಡಜಾತ್ರೆ ಇಡೀ ದಕ್ಷಿಣ ಭಾರತದಲ್ಲೇ ಒಂದೇ ಬಾರಿಗೆ 5 ರಥಗಳು ಸಾಗುವ ಏಕೈಕ ಕ್ಷೇತ್ರವೆಂದು ಪ್ರಸಿದ್ಧಿಯಾಗಿದೆ. ಶ್ರೀಕಂಠೇಶ್ವರಸ್ವಾಮಿ (110 ಟನ್ ತೂಕ, 90 ಅಡಿ ಎತ್ತರ) ಗೌತಮ ರಥ, ಪಾರ್ವತಿ ದೇವಿ, ಗಣೇಶ, ಸುಬ್ರಹ್ಮಣ್ಯ, ಚಂಡಿಕೇಶ್ವರಸ್ವಾಮಿ ಹೀಗೆ 5 ರಥಗಳು ರಥಬೀದಿಯಲ್ಲಿ 1.5 ಕಿಮೀ ಸಾಗಲಿವೆ. ಜಾತ್ರೆ ಪ್ರಮುಖ ಆಕರ್ಷಣೆ ಶ್ರೀಗೌತಮ ಮಹಾರಥವನ್ನು ಈ ಹಿಂದೆ ● 9ನೇ ಪುಟಕ್ಕೆ

ಹಾಸನ ಸೇರಿ ಉಳಿದ ಎಲ್ಲಾ ಕ್ಷೇತ್ರಗಳ ಜೆಡಿಎಸ್ ಅಭ್ಯರ್ಥಿಗಳ ಎರಡನೇ ಪಟ್ಟಿ ನಾಳೆ ಬಿಡುಗಡೆ

ಬೆಂಗಳೂರು, ಏ.1– ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್–ಬಿಜೆಪಿ ಅಭ್ಯರ್ಥಿಗಳ ಪಟ್ಟಿಯಂತೆ ಜೆಡಿಎಸ್ ಅಭ್ಯರ್ಥಿಗಳು ಯಾರ್‍ಯಾರು ಎಂಬುದು ಹಲವು ಕ್ಷೇತ್ರಗಳಲ್ಲಿ ಕುತೂಹಲ ಕೆರಳಿಸಿದೆ. ಜೆಡಿಎಸ್ ನಾಯಕ, ಮಾಜಿ ಸಿಎಂ ಕುಮಾರಸ್ವಾಮಿ ಅವರು ಹೇಳುವ ಪ್ರಕಾರ ಸೋಮವಾರ ಬೆಳಗ್ಗೆ ಎರಡನೇ ಪಟ್ಟಿ ಬಿಡುಗಡೆಯಾಗಲಿದೆ.

ಇಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, ಈಗಾಗಲೇ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆಯಾಗಿದೆ. ಗೊಂದಲದಲ್ಲಿರುವ ಹಾಸನ ಕ್ಷೇತ್ರ ಸೇರಿ ಉಳಿದ ಎಲ್ಲಾ ಕ್ಷೇತ್ರಗಳ ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಸೋಮವಾರ ಬೆಳಗ್ಗೆ ಬಿಡುಗಡೆ ಮಾಡುತ್ತೇವೆ. ಹಾಸನ ಕ್ಷೇತ್ರದ ಬಂಡಾಯಕ್ಕೆ ಸೊಪ್ಪು ಹಾಕುವ ಪ್ರಶ್ನೆಯೇ ಇಲ್ಲ. ನಮ್ಮ ಪಕ್ಷದಲ್ಲಿ ಕಾರ್ಯಕರ್ತರ ಭಾವನೆಗಳು ಮುಖ್ಯ, ಕಾರ್ಯಕರ್ತರಿಗೆ ಯಾವುದೇ ರೀತಿಯಲ್ಲಿ ನೋವುಂಟು ಮಾಡುವುದಿಲ್ಲ ಎಂದಿದ್ದಾರೆ.

ಇಂದಿನಿಂದ ಚಾಮರಾಜನಗರ, ಮೈಸೂರು, ಬಳ್ಳಾರಿ, ಹುಬ್ಬಳ್ಳಿ, ಧಾರವಾಡದಲ್ಲಿ ಏಪ್ರಿಲ್ 12ರವರೆಗೆ ಪ್ರಚಾರ ನಡೆಸಲಾಗುವುದು. ಏಪ್ರಿಲ್ 13ರಿಂದ ಏಪ್ರಿಲ್ 20ರವರೆಗೆ ನಾಮಪತ್ರ ಸಲ್ಲಿಕೆಗೆ ಹಲವು ಕ್ಷೇತ್ರಗಳಿಗೆ ಭೇಟಿ ನೀಡಲಾಗುವುದು. ಏ.21ರಿಂದ ಏ.24 ರವರೆಗೆ ರಾಮನಗರ, ಚನ್ನಪಟ್ಟಣ, ಕನಕಪುರದಲ್ಲಿ ಪ್ರಚಾರ ಮಾಡುತ್ತೇನೆ. ಎಲ್ಲಿಯೂ ಸಮಯ ವ್ಯರ್ಥ ಮಾಡುವುದಿಲ್ಲ. ಇನ್ನು, ಸಮೀಕ್ಷೆ ವರದಿಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ನಮ್ಮ ಗುರಿ ತಲುಪುವುದಕ್ಕೆ ಬೇಕಾದ ಕೆಲಸ ಮಾಡುತ್ತೇವೆ ಎಂದು ಹೇಳಿದರು.

ಮ್ಯಾಜಿಕ್ ಸಂಖ್ಯೆ ಮುಟ್ಟಲು ಡಿ.ಕೆ.ಶಿವಕುಮಾರ್ 'ಕೈ' ಚಳಕ

■ ಬಿಜೆಪಿಯ ಪ್ರಭಾವಿಗಳ ಸೆಳೆಯಲು ಕಾರ್ಯಾಚರಣೆ ■ ಸಚಿವ ಸ್ಥಾನದ ಜೊತೆಗೆ ಬಯಸಿದ ಕ್ಷೇತ್ರದಲ್ಲಿ ಸ್ಪರ್ಧೆಗೆ ಅವಕಾಶ





ಬೆಂಗಳೂರು, ಏ.1(ಕೆಎಂಶಿ)–ರಾಜ್ಯ ವಿಧಾನಸಭಾ ಚುನಾವಣೆಯ ಪೂರ್ವ ಸಮೀಕ್ಷೆಗಳ ವರದಿ ಬಹಿರಂಗಗೊಳ್ಳುತ್ತಿದ್ದಂತೆ ಕಾಂಗ್ರೆಸ್ ಮ್ಯಾಜಿಕ್ ಸಂಖ್ಯೆ ಮುಟ್ಟಲು ಬಿಜೆಪಿಯ ಜೇನುಗೂಡಿಗೆ ಕೈ ಹಾಕಿದೆ.

ಸಮೀಕ್ಷಾ ವರದಿಯನ್ನು ಮುಂದಿಟ್ಟುಕೊಂಡು ಆ ಪಕ್ಷದ ನಾಯಕರು ಬೊಮ್ಮಾಯಿ ಸಂಪುಟದಲ್ಲಿರುವ ಕೆಲವು ಪ್ರಭಾವಿ ಸಚಿವರು ಹಾಗೂ ಶಾಸಕರನ್ನು ಸೆಳೆಯಲು ಕಸರತ್ತು ಆರಂಭಿಸಿದ್ದಾರೆ. ಇಂತಹವರಿಗಾಗಿ ಕ್ಷೇತ್ರಗಳನ್ನು ಬಿಟ್ಟುಕೊಡುವುದರ ಜೊತೆಗೆ ಪಕ್ಷ ಅಧಿಕಾರಕ್ಕೆ ಬಂದರೆ ಸಚಿವ ಸ್ಥಾನ ಕೊಡುವ ಭರವಸೆಯನ್ನು ಮುಖಂಡರು ನೀಡಿದ್ದಾರೆ.

ಸಚಿವ ಸ್ಥಾನಕ್ಕಾಗಿ ಬಿಜೆಪಿಗೆ ಹೋಗಿದ್ದಿರಿ. ನಿಮಗೆ ಅದೇ ಅಧಿಕಾರವನ್ನು ನಾವು ನೀಡುತ್ತೇವೆ. ಹಿಂದಕ್ಕೆ ಬನ್ನಿ ಎಂದು ಕೆಲವರಿಗೆ ಮನವಿ ಮಾಡಿದರೆ, ಮತ್ತೆ ಕೆಲವರಿಗೆ ಆಪರೇಷನ್ ಕಮಲದಲ್ಲಿ ಬಿಜೆಪಿ ಮಾಡಿದ ಕಾರ್ಯತಂತ್ರವನ್ನೇ ಕಾಂಗ್ರೆಸ್ ಮಾಡುತ್ತಿದೆ. ಅಧಿಕಾರ ಹಿಡಿಯಲೇಬೇಕೆಂದು ಪಣತೊಟ್ಟಿರುವ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಇದರ ಮುಂಚೂಣಿಯಲ್ಲಿದ್ದಾರೆ. ಸಚಿವರು ಮತ್ತು ವರ್ಚಸ್ವಿ ನಾಯಕರಿಗೆ ಕ್ಷೇತ್ರಗಳನ್ನು ಕಾಯ್ದಿರಿಸುವ ಸಂಬಂಧ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ಚರ್ಚೆ ಮಾಡಿದ್ದಾರೆ. ಈಗಾಗಲೇ 124 ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಪ್ರಕಟಿಸಿರುವ ಕಾಂಗ್ರೆಸ್, ಉಳಿದ ನೂರು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಆಯ್ಕೆ ಸಂಬಂಧ ಕಳೆದ ಎರಡು ದಿನಗಳಿಂದ ನಡೆದ ಸ್ಕ್ರೀನಿಂಗ್ ಕಮಿಟಿ ಒಂದು ಘಟ್ಟ ಮುಟ್ಟಿಸಿದೆ.

ಆದರೆ ಶೇಕಡ 40 ರಷ್ಟು ಕ್ಷೇತ್ರಗಳಲ್ಲಿ ಒಮ್ಮತದ ಅಭ್ಯರ್ಥಿಗಳನ್ನು ಅಂತಿಮಗೊಳಿಸಲು ಸಾಧ್ಯವಾಗಿಲ್ಲ. ಸ್ಕ್ರೀನಿಂಗ್ ಕಮಿಟಿ ಪಟ್ಟಿಯ ಬಗ್ಗೆ ಶಿವಕುಮಾರ್‌ಗೆ ತೃಪ್ತಿ ಇಲ್ಲ. ವರಿಷ್ಠರು ಅಂತಿಮ ತೀರ್ಮಾನ ತೆಗೆದುಕೊಳ್ಳುವುದಕ್ಕೂ ಮುನ್ನ ಬದಲಾವಣೆ ಮಾಡಲು ಖರ್ಗೆಯವರ ಜೊತೆ ಚರ್ಚೆ ಮಾಡಿದ್ದಾರೆ ಎನ್ನಲಾಗಿದೆ. ನಗರದಲ್ಲೇ ಇರುವ ಖರ್ಗೆಯವರನ್ನು ಭೇಟಿ ಮಾಡಿದ ಶಿವಕುಮಾರ್, ಪಟ್ಟಿಯ ಬಗ್ಗೆ ಮಾಹಿತಿ ನೀಡಿದ್ದಲ್ಲದೆ, ಅದರಲ್ಲಿ ಕೆಲ ಬದಲಾವಣೆ ಮಾಡುವ ಬಗ್ಗೆಯು ಚರ್ಚೆ ಮಾಡಿದ್ದಾರೆ. ಅಷ್ಟೇ ಅಲ್ಲ ಈ ಕ್ಷೇತ್ರಗಳಿಗೆ ಹೊರಗಿನವರನ್ನು ಕರೆ ತಂದರೆ ಅವರಿಗೆ ಅವಕಾಶ ಮಾಡಿಕೊಡಬೇಕು.

ಇದಕ್ಕೆ ನಿಮ್ಮ ಸಹಕಾರ ಇರಲಿ. ಪಕ್ಷವನ್ನು ಪೂರ್ಣ ಪ್ರಮಾಣದಲ್ಲಿ ಅಧಿಕಾರಕ್ಕೆ ತರಬೇಕೆನ್ನುವುದೇ ನನ್ನ ಗುರಿ. ಸಮೀಕ್ಷಾ ವರದಿಯನ್ನಾಧಾರವಾಗಿಟ್ಟುಕೊಂಡು ಬಿಜೆಪಿಯಲ್ಲಿರುವ ಮುಖಂಡರು ಹಾಗೂ ಆ ಪಕ್ಷದ ಅತೃಪ್ತ ● 9ನೇ ಪುಟಕ್ಕೆ

ಮತ್ತೊಂದು 'ಮುತ್ತಿನ' ಸರದಿ!






ಬೆಂಗಳೂರು, ಏ.1–ಸಾರ್ವಜನಿಕವಾಗಿ ಮಹಿಳೆಯರು ಮುತ್ತಿಟ್ಟ ನಾಯಕರಲ್ಲಿ ಇದುವರೆಗೆ ಸಿದ್ದರಾಮಯ್ಯ ಹೆಸರು ಮಾತ್ರ ಇತ್ತು. ಆದರೆ ಈಗ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೆಸರು ಸೇರ್ಪಡೆಯಾಗಿದೆ.

ಬೆಂಗಳೂರಿನ ಯಶವಂತಪುರದಲ್ಲಿ ಇಂದು ನಡೆದ ಪಂಚರತ್ನ ಯಾತ್ರೆಯಲ್ಲಿ ಭಾಗವಹಿಸಿದ್ದ ಕುಮಾರಸ್ವಾಮಿಯವರ ಕೆನ್ನೆಗೆ ಮಹಿಳೆಯೊಬ್ಬರು ಅನಿರೀಕ್ಷಿತವಾಗಿ ಮುತ್ತಿಟ್ಟಿದ್ದಾರೆ. ಈ ಘಟನೆಯಿಂದ ಕುಮಾರಸ್ವಾಮಿ ನಾಚಿ ನೀರಾದರಾ? ಇಲ್ಲವೇ ಬೆಚ್ಚಿ ಬಿದ್ದರಾ? ಎಂಬುದು ವೀಡಿಯೋ ಕ್ಯಾಮರಾಗಳು ಅವರ ಬೆನ್ನ ಹಿಂದೆ ಇದ್ದ ಕಾರಣ ಗೊತ್ತಾಗಲಿಲ್ಲ. ಈ ಸಂಬಂಧ ಮಾಧ್ಯಮದೊಂದಿಗೆ ಮಾತನಾಡಿದ ಮಹಿಳೆ, ತಾನು ಇದೇ ಮೊದಲ ಬಾರಿಗೆ ಕುಮಾರಸ್ವಾಮಿಯವರ ಭೇಟಿ ಮಾಡಿದೆ. ಮಾತನಾಡಲು ಹೋದಾಗ ಅವರು ತಂಗಿ ಎಂದು ಕರೆದರು. ಯಾವ ಊರು? ಮಕ್ಕಳೆಷ್ಟಿದ್ದಾರೆ? ಎಂದೆಲ್ಲಾ ಆತ್ಮೀಯವಾಗಿ ವಿಚಾರಿಸಿದರು. ತಾನು ಭದ್ರಾವತಿಯವಳಾಗಿದ್ದು, ಬೆಂಗಳೂರಿನಲ್ಲಿ ವಾಸವಿದ್ದೇನೆ. ನನಗೆ ಮೂವರು ಹೆಣ್ಣು ಮಕ್ಕಳಿದ್ದಾರೆ. ವಾಸಿಸಲು ಮನೆಯಿಲ್ಲ ಎಂದಾಗ ಏನಾದರೂ ಮಾಡೋಣ ಎಂದು ಆತ್ಮೀಯವಾಗಿ ಹೇಳಿದರು. ಅವರು ತಂಗಿ ಎಂದು ಕರೆದಾಗ ಬಹಳ ಖುಷಿಯಾಯಿತು. ಹೀಗಾಗಿ ಅಣ್ಣನಿಗೆ ಮುತ್ತಿಟ್ಟಿದ್ದೇನೆ ಎಂದು ಮಹಿಳೆ ಹೇಳಿಕೊಂಡಿದ್ದಾರೆ.

ಸಿದ್ದರಾಮಯ್ಯರಿಗೆ ಕಿಸ್: 2016ರ ಜೂನ್ ತಿಂಗಳಿನಲ್ಲಿ ಕಾಂಗ್ರೆಸ್‌ನ ನೂತನ ಜಿಪಂ ಮತ್ತು ತಾಪಂ ಸದಸ್ಯರಿಗೆ ಅಭಿನಂದನಾ ಸಮಾರಂಭವನ್ನು ಬೆಂಗಳೂರಿನ ಅರಮನೆ ಮೈದಾನದಲ್ಲಿ ಏರ್ಪಡಿಸಲಾಗಿತ್ತು. ಈ ಸಭೆಯಲ್ಲಿ ಭಾಗವಹಿಸಿದ್ದ ಮಹಿಳೆಯೋರ್ವರು ಆಗ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರ ಕೆನ್ನೆಗೆ ವೇದಿಕೆ ಮೇಲೆಯೇ ಮುತ್ತಿಟ್ಟಿದ್ದರು. ಅದು ಮಾತ್ರವಲ್ಲದೆ ಸಮಾರಂಭವೊಂದರಲ್ಲಿ ವೇದಿಕೆ ಮೇಲೆ ಯುವಕನೋರ್ವ ಸಿದ್ದರಾಮಯ್ಯ ಅವರ ಕೆನ್ನೆಗೆ ಕಿಸ್ ಮಾಡಿದ್ದ. ಇತ್ತೀಚೆಗೆ ಮಂಡ್ಯದಲ್ಲೂ ಯುವಕನೊಬ್ಬ ತನ್ನ ನೆಚ್ಚಿನ ನಾಯಕ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ಮುತ್ತಿಟ್ಟಿದ್ದ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ಟೋಲ್ ದರ ಹೆಚ್ಚಳ ಮುಂದೂಡಿಕೆ

ಬೆಂಗಳೂರು, ಏ.1(ಕೆಎಂಶಿ)–ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ನ ಟೋಲ್ ದರ ಹೆಚ್ಚಳವನ್ನು ಮುಂದೂಡಲಾಗಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿನ್ನೆಯಷ್ಟೇ ಶೇಕಡ 20ರಷ್ಟು ಹೆಚ್ಚಳ ಮಾಡಿ ಆದೇಶ ಹೊರಡಿಸಿತ್ತು. ಇದಕ್ಕೆ ಸಾರ್ವಜನಿಕ ವಲಯದಲ್ಲಿ ಭಾರೀ ವಿರೋಧ ವ್ಯಕ್ತಗೊಂಡ ಹಿನ್ನೆಲೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ. ವಿಧಾನಸಭಾ ಚುನಾವಣಾ ಬೆನ್ನಲ್ಲೇ ದರ ಹೆಚ್ಚಳ ಮಾಡುವುದರಿಂದ ಆಡಳಿತಾರೂಢ ಬಿಜೆಪಿಗೆ ಭಾರೀ ಇರಿಸು–ಮುರಿಸು ಉಂಟಾಗುತ್ತದೆ ಎಂಬ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಕೇಂದ್ರದ ಮೇಲೆ ಒತ್ತಡ ತಂದು ದರ ಹೆಚ್ಚಳವನ್ನು ತಡೆ ಹಿಡಿದಿದೆ. ಕಳೆದ ಮಾರ್ಚ್ 14ರಿಂದ ಈ ಹೆದ್ದಾರಿಯಲ್ಲಿ ಟೋಲ್ ಸಂಗ್ರಹ ಪ್ರಾರಂಭವಾಗಿತ್ತು. ಕೇವಲ ಎರಡು ವಾರದಲ್ಲೇ ಶೇಕಡ 20ರಷ್ಟು ದರ ಹೆಚ್ಚಳ ಮಾಡಿ, ಪ್ರಾಧಿಕಾರ ಆದೇಶ ಹೊರಡಿಸಿತ್ತು.



ಕೇಂದ್ರದ ಬಜೆಟ್ ಎಫೆಕ್ಟ್; ಔಷಧ, ಟೋಲ್, ಗ್ಯಾಸ್ ದರ ಹೆಚ್ಚಳ

ನವದೆಹಲಿ, ಏ.1– 2023–24ನೇ ಹಣಕಾಸು ವರ್ಷ ಶನಿವಾರದಿಂದ ಆರಂಭವಾಗಿದ್ದು, ಹೀಗಾಗಿ ಆದಾಯ ತೆರಿಗೆಗೆ ಸಂಬಂಧಿಸಿದಂತೆ ಈ ಬಾರಿ ಕೇಂದ್ರದ ಬಜೆಟ್‌ನಲ್ಲಿ ಘೋಷಿಸಲಾಗಿದ್ದ ಹೊಸ ನಿಯಮಗಳು ಜಾರಿಯಾಗಿವೆ.

ಆದಾಯ ತೆರಿಗೆ ಸ್ಲ್ಯಾಬ್‌ನಲ್ಲಿ ಬದಲಾವಣೆ, ಆದಾಯ ತೆರಿಗೆ ಮಿತಿ ಏರಿಕೆ, ಕೆಲವು ಮ್ಯೂಚುವಲ್ ಫಂಡ್‌ಗಳ ಮೇಲಿನ ಲಾಭದಲ್ಲಿ ಬದಲಾವಣೆ ಸೇರಿದಂತೆ ಈ ಬಾರಿ ಹಲವು ಹೊಸ ನಿಯಮಗಳನ್ನು ಸರ್ಕಾರ ಘೋಷಿಸಿದೆ. ಹಾಗಾಗಿ ಆದಾಯ ತೆರಿಗೆ ಪಾವತಿದಾರರು ಈ ಬಾರಿ ಬಹಳಷ್ಟು ಹೊಸದನ್ನು ಅರಿತುಕೊಳ್ಳಬೇಕಿದೆ. ಚಿನ್ನಕ್ಕೆ ಹಾಲ್‌ಮಾರ್ಕ್ ನಂಬರ್ ಕಡ್ಡಾಯ ಮಾಡಲಾಗಿದ್ದು, ಫೋನ್ ವ್ಯಾಲೆಟ್‌ಗಳಿಗೆ ಅಂತರ್ಬಳಕೆ ಶುಲ್ಕ, ವಾಹನಗಳು ತುಟ್ಟಿ ಸೇರಿ ಮತ್ತಷ್ಟು ಬದಲಾವಣೆಯಾಗಲಿದೆ.

2020ರಲ್ಲಿ ಜಾರಿಗೆ ತಂದ ಹೊಸ ತೆರಿಗೆ ಪದ್ಧತಿ ಈವರೆಗೆ ಐಚ್ಛಿಕವಾಗಿತ್ತು. ಇಂದಿನಿಂದ ಡೀಫಾಲ್ಟ್ ಜಾರಿಯಾಗಿದೆ. ಇದರಡಿಯಲ್ಲಿ ತೆರಿಗೆದಾರ ಮಾಡುವ ಹೂಡಿಕೆಗಳನ್ನು ವಿನಾಯಿತಿಗೆ ಪರಿಗಣಿಸುವುದಿಲ್ಲ. ಪಿಎಫ್, ಎಲ್‌ಐಸಿ, ● 6ನೇ ಪುಟಕ್ಕೆ


ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ ಇಳಿಕೆ; ಗೃಹ ಬಳಕೆ ಸಿಲಿಂಡರ್ ಬದಲಾವಣೆಯಿಲ್ಲ



ನವದೆಹಲಿ, ಏ.1– ಈ ವರ್ಷಾರಂಭದಿಂದ ಸತತ ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿದ್ದ ಜನತೆಗೆ ಆರ್ಥಿಕ ವರ್ಷಾರಂಭದ ದಿನ ಕೊಂಚ ನಿರಾಳತೆ ಸಿಕ್ಕಿದೆ. 19 ಕೆಜಿ ವಾಣಿಜ್ಯ ದ್ರವೀಕೃತ ಪೆಟ್ರೋಲಿಯಂ ಗ್ಯಾಸ್ ಸಿಲಿಂಡರ್ ಬೆಲೆ 91 ರೂಪಾಯಿ 50 ಪೈಸೆ ಕಡಿಮೆಯಾಗಿದೆ. 19 ಕೆಜಿ ವಾಣಿಜ್ಯ ಎಲ್‌ಪಿಜಿ ಸಿಲಿಂಡರ್ ಬೆಲೆ ಈಗ 2,028 ರೂಪಾಯಿಗಳಾಗಿದೆ. ಆದರೆ, ಗೃಹಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ ಬದಲಾವಣೆಯಾಗಿಲ್ಲ. ● 6ನೇ ಪುಟಕ್ಕೆ


ಬಸ್, ರೈಲು, ವಿಮಾನ ನಿಲ್ದಾಣಗಳಲ್ಲೂ ಕಣ್ಗಾವಲು

ಅನುಮಾನಾಸ್ಪದ ವ್ಯಕ್ತಿ, ವಸ್ತುಗಳ ತಪಾಸಣೆಗೆ ಮೈಸೂರು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ









ಮೈಸೂರು, ಏ.1(ಎಂಟಿವೈ)– ಚುನಾವಣಾ ಅಕ್ರಮ ತಡೆಗಟ್ಟುವ ನಿಟ್ಟಿನಲ್ಲಿ ಬಸ್ ಹಾಗೂ ರೈಲ್ವೆ ನಿಲ್ದಾಣಗಳಲ್ಲಿ ಕಣ್ಗಾವಲು ಕೇಂದ್ರ ಸ್ಥಾಪಿಸಿ ಅನುಮಾನಾಸ್ಪದ ಚಟುವಟಿಕೆ ಮತ್ತು ವ್ಯಕ್ತಿಗಳ ಮೇಲೆ ನಿಗಾ ಇರಿಸುವಂತೆ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚಿಸಿದ್ದಾರೆ.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿಯ ಸಭಾಂಗಣದಲ್ಲಿ ಚುನಾವಣೆ ಹಿನ್ನೆಲೆಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಈಗಾಗಲೇ ರಾಜ್ಯದಲ್ಲಿ ನೀತಿ ಸಂಹಿತೆ ಜಾರಿಯಾಗಿದೆ. ಎಲ್ಲಿಯೂ ಲೋಪವಾಗದಂತೆ ಕಟ್ಟೆಚ್ಚರ ವಹಿಸಬೇಕು. ಮೈಸೂರು ನಗರ ಸೇರಿದಂತೆ ತಾಲೂಕು ಕೇಂದ್ರಗಳಲ್ಲಿರುವ ಎಲ್ಲಾ ಬಸ್ ಹಾಗೂ ರೈಲ್ವೆ ನಿಲ್ದಾಣಗಳಲ್ಲಿ ಕಟ್ಟುನಿಟ್ಟಿನ ತಪಾಸಣೆ ನಡೆಸಲು ಕ್ರಮ ಕೈಗೊಳ್ಳಬೇಕು. ಅದಕ್ಕಾಗಿ ಕಣ್ಗಾವಲು ಕೇಂದ್ರ ಆರಂಭಿಸಿ, ಅನುಮಾನಾಸ್ಪದ ವ್ಯಕ್ತಿಗಳು ಹಾಗೂ ವಸ್ತುಗಳ ಸಾಗಾಟದ ಬಗ್ಗೆ ನಿಗಾ ವಹಿಸಬೇಕು. ನೀತಿ ಸಂಹಿತೆ ಉಲ್ಲಂಘನೆ. ಚುನಾವಣಾ ಅಕ್ರಮಕ್ಕೆ ಸಂಬಂಧಪಟ್ಟ ವಸ್ತುಗಳು ಕಂಡು ಬಂದರೆ ಕೂಡಲೇ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

■ **ಜಾಹೀರಾತು ಬರಹ ತೆರವಿಗೆ ಸೂಚನೆ:** ಸಾರಿಗೆ ಸಂಸ್ಥೆ ಬಸ್‌ಗಳ ಮೇಲೆ ಸರ್ಕಾರದ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ ಮಾಹಿತಿ, ಸಚಿವರ ಭಾವಚಿತ್ರವಿರುವ ಜಾಹೀರಾತು ತೆರವುಗೊಳಿಸಬೇಕು. ನೀತಿ ಸಂಹಿತೆ ಹಿನ್ನೆಲೆಯಲ್ಲಿ ರಾಜಕಾರಣಿಗಳ ಭಾವಚಿತ್ರವಿರುವ ಫ್ಲೆಕ್ಸ್, ಬಂಟಿಂಗ್ಸ್, ಬೋರ್ಡ್ ಸೇರಿದಂತೆ ಜಾಹೀರಾತು ಫಲಕ ತೆರವುಗೊಳಿಸುವ ಪ್ರಕ್ರಿಯೆ ನಡೆಯುತ್ತಿದೆ. ಇದಕ್ಕೆ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಸ್ಪಂದಿಸಿ, ಬಸ್‌ಗಳ ಮೇಲೆ ಪ್ರಕಟಿಸಿರುವ ಸರ್ಕಾರಿ ಜಾಹೀರಾತುಗಳನ್ನು ತೆರವುಗೊಳಿಸಬೇಕು ಎಂದು ಆದೇಶಿಸಿದರು. ಚುನಾವಣಾ ನೀತಿ ಸಂಹಿತೆ ಕುರಿತಂತೆ ಸಾರಿಗೆ ಸಂಸ್ಥೆ ಬಸ್‌ಗಳ ಚಾಲಕರು, ನಿರ್ವಾಹಕರಿಗೆ ತಿಳುವಳಿಕೆ ನೀಡಬೇಕು. ಕೆಲವರು ಒಂದೆಡೆಯಿಂದ ಮತ್ತೊಂದೆಡೆಗೆ ಸಾರಿಗೆ ಬಸ್‌ಗಳಲ್ಲಿ ಕೆಲವು ವಸ್ತುಗಳನ್ನು ಪಾರ್ಸೆಲ್ ಕಳುಹಿಸುವ ಸಾಧ್ಯತೆಯೂ ಹೆಚ್ಚಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಚಾಲಕರು ಹಾಗೂ ನಿರ್ವಾಹಕರಿಗೆ ಯಾವ ವಸ್ತುಗಳನ್ನು ಸಾಗಿಸಬಾರದು ಎಂದು ಮನವರಿಕೆ ಮಾಡಿಕೊಟ್ಟರೆ ಚುನಾವಣಾ ಅಕ್ರಮ ತಡೆಗಟ್ಟಲು ಸಹಕಾರಿಯಾಗುತ್ತದೆ ಎಂದರು.

■ **ರೈಲು ಹಾಗೂ ವಿಮಾನ ನಿಲ್ದಾಣದಲ್ಲೂ ಕಟ್ಟೆಚ್ಚರ:** ಮೈಸೂರಿನ ರೈಲ್ವೆ ನಿಲ್ದಾಣ ಹಾಗೂ ವಿಮಾನ ನಿಲ್ದಾಣದಲ್ಲೂ ಕಣ್ಗಾವಲು ಕೇಂದ್ರ ಸ್ಥಾಪಿಸಿ, ಮೈಸೂರಿಗೆ ಬರುವ ಹಾಗೂ ನಿರ್ಗಮಿಸುವ ಪ್ರಯಾಣಿಕರ ಮೇಲೂ ಗಮನ ಹರಿಸಬೇಕು. ಪ್ರಯಾಣಿಕರು ಒಯ್ಯುವ ಅನುಮಾನಾಸ್ಪದ ವಸ್ತುಗಳ ಬಗ್ಗೆ ನಿಗಾ ಇಡಬೇಕು. ರೈಲುಗಳಲ್ಲಿ ಬರುವ ಪ್ರಯಾಣಿಕರನ್ನು ತಪಾಸಣೆ ಮಾಡಬೇಕು. ದಿನದ 24 ಗಂಟೆಯೂ ತಪಾಸಣಾ ಕಾರ್ಯಕ್ಕೆ ಸಿಬ್ಬಂದಿಗಳನ್ನು ನಿಯೋಜಿಸಬೇಕು. ವಿಮಾನ ನಿಲ್ದಾಣದಲ್ಲಿ ಫ್ಲೈಯಿಂಗ್ ಸ್ಕ್ವಾಡ್ ತಪಾಸಣೆ ನಡೆಸಬೇಕು ಎಂದು ಸೂಚಿಸಿದರು. ಸಭೆಯಲ್ಲಿ ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ, ಅಪರ ಜಿಲ್ಲಾಧಿಕಾರಿ ಕವಿತಾ ರಾಜಾರಾಮ್, ಉಪವಿಭಾಗಾಧಿಕಾರಿಗಳಾದ ಕಮಲಾ ಭಾಯಿ, ಸಾರಿಗೆ ಸಂಸ್ಥೆಯ ವಿಭಾಗೀಯ ನಿಯಂತ್ರಣಾಧಿಕಾರಿ ಆರ್.ಅಶೋಕ್‌ಕುಮಾರ್ ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದ್ದರು.

> **ಕರ್ತವ್ಯದೊಂದಿಗೆ ಮತದಾನವೂ ಕಡ್ಡಾಯ**
>
> ಮೈಸೂರು ಜಿಲ್ಲೆಯಲ್ಲಿ ಚುನಾವಣಾ ಕರ್ತವ್ಯಕ್ಕೆ ನಿಯೋಜಿಸಿರುವ ಎಲ್ಲಾ ಹಂತದ ಸಿಬ್ಬಂದಿ ಕರ್ತವ್ಯ ದೊಂದಿಗೆ ತಮ್ಮ ಜವಾಬ್ದಾರಿಯನ್ನು ನಿಭಾಯಿಸಬೇಕು. ಚುನಾವಣಾ ಕರ್ತವ್ಯದ ಕಾರಣ ಮತದಾನದಿಂದ ಹೊರಗುಳಿಯಬಾರದು. ಎಲ್ಲಾ ಸರ್ಕಾರಿ ನೌಕರರು ಹಾಗೂ ಕುಟುಂಬದ ಸದಸ್ಯರು ಮತದಾನದಲ್ಲಿ ಭಾಗವಹಿಸಬೇಕು. ಅಲ್ಲದೆ, ಜಿಲ್ಲೆಯಲ್ಲಿ ಮತದಾನದ ಪ್ರಮಾಣ ಶೇ.100ರಷ್ಟು ಸಾಧಿಸಲು ಸಹಕರಿಸಬೇಕು ಎಂದರು.
>
> – ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

ಮೈಸೂರು ಮಿತ್ರ ಭಾನುವಾರ 2 ಏಪ್ರಿಲ್ 2023

ಕಾಡ್ಗಿಚ್ಚು ತಡೆಗೆ ಗಂಭೀರ ಕ್ರಮ ಕೈಗೊಳ್ಳಲು ಆಗ್ರಹ



ಮೈಸೂರು,ಏ.1(ಪಿಎಂ)–ಬೇಸಿಗೆ ಹಿನ್ನೆಲೆಯಲ್ಲಿ ತಾಪಮಾನ ಹೆಚ್ಚಾಗಿದ್ದು, ಪರಿಣಾಮ ಕಾಡ್ಗಿಚ್ಚು ಹೆಚ್ಚಾಗುವ ಮೂಲಕ ಅರಣ್ಯ ಸಂಪತ್ತು ಬೆಂಕಿಗಾಹುತಿಯಾಗುತ್ತಿದೆ. ಇದನ್ನು ತಡೆಗಟ್ಟಲು ಪರಿಣಾಮಕಾರಿ ಮುನ್ನೆಚ್ಚರಿಕೆ ಕ್ರಮಗಳನ್ನು ಅರಣ್ಯ ಇಲಾಖೆ ಹಾಗೂ ಸರ್ಕಾರ ಕೈಗೊಳ್ಳಬೇಕು ಎಂದು ಹೋಟೆಲ್ ಉದ್ಯಮಿ ಶ್ವೇತಾ ಮಡಪ್ಪಾಡಿ ಒತ್ತಾಯಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಪಮಾನ ಹೆಚ್ಚಳದ ಹಿನ್ನೆಲೆಯಲ್ಲಿ ಕಾಡ್ಗಿಚ್ಚು ಸಾಮಾನ್ಯವಾಗುತ್ತಿದೆ. ಕಾಡ್ಗಿಚ್ಚು ಒಂದು ಸಹಜ ಅವಘಡ. ಆದರೆ ಅದನ್ನು ತಡೆಗಟ್ಟಬೇಕಾಗಿರುವುದು ನಮ್ಮ ಜವಾಬ್ದಾರಿ. ಇತರೆ ಅಭಿವೃದ್ಧಿ ಕಾರ್ಯಗಳಿಗೆ ನೀಡುವ ಆದ್ಯತೆಗೂ ಮೀರಿ ಅರಣ್ಯ ಸಂರಕ್ಷಣೆಗೆ ಪ್ರಾಮುಖ್ಯತೆ ನೀಡಬೇಕಿದ್ದು, ಈ ನಿಟ್ಟಿನಲ್ಲಿ ಸರ್ಕಾರ ಕಾಡ್ಗಿಚ್ಚು ತಡೆಗಟ್ಟಲು ಗಂಭೀರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಏ.7ರಂದು 'ನಮ್ ನಾಣಿ ಮದ್ವೆ ಪ್ರಸಂಗ' ಸಿನಿಮಾ ಬಿಡುಗಡೆ

ಮೈಸೂರು,ಏ.1(ಪಿಎಂ)–'ನಮ್ ನಾಣಿ ಮದ್ವೆ ಪ್ರಸಂಗ' ಕನ್ನಡ ಸಿನಿಮಾ ಏ.7ರಂದು ರಾಜ್ಯಾದ್ಯಂತ 100ಕ್ಕೂ ಹೆಚ್ಚು ಚಿತ್ರಮಂದಿರದಲ್ಲಿ ಬಿಡುಗಡೆಯಾಗಲಿದೆ ಎಂದು ಚಿತ್ರದ ನಾಯಕ ನಟ ಹಾಗೂ ನಿರ್ದೇಶಕ ಹೇಮಂತ್ ಹೆಗ್ಡೆ ತಿಳಿಸಿದರು.



ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಳ್ಳಿಯ ರೈತ ಯುವಕರಿಗೆ ಮದುವೆಗೆ ಹೆಣ್ಣು ಸಿಗುವುದಿಲ್ಲ ಎಂಬ ವಿಚಾರವನ್ನಿಟ್ಟುಕೊಂಡು ಈ ಸಿನಿಮಾ ಮಾಡಲಾಗಿದೆ. ಇದೊಂದು ಹಾಸ್ಯಮಯ ಸಿನಿಮಾವಾಗಿದೆ ಎಂದರು. ಸಿನಿಮಾ ನಾಯಕ ನಟಿ ಶ್ರುತಿ ನಂದೀಶ್, ನಟರಾದ ರೇವಣ್ಣ ಸಿದ್ದಯ್ಯ, ಮಧು ಹೆಗ್ಡೆ, ನಿರ್ಮಾಪಕ ಸಂದೀಪ್ ನಾಗರಾಜ್ ಗೋಷ್ಠಿಯಲ್ಲಿದ್ದರು.

ಏ.16ರಿಂದ ಬೇಸಿಗೆ ಶಿಬಿರ

ಮೈಸೂರು,ಏ.1(ಪಿಎಂ)– ವರ್ಣ ಮೈಸೂರು ರಂಗತಂಡದ ವತಿಯಿಂದ 7ರಿಂದ 14 ವರ್ಷದೊಳಗಿನ ಮಕ್ಕಳಿಗಾಗಿ ಏ.16ರಿಂದ ಮೇ 1ರವರೆಗೆ 'ಬಣ್ಣದ ಲೋಕದ ಚಿಣ್ಣರು' ಶೀರ್ಷಿಕೆಯಡಿ ದೇಸಿ ಸೊಗಡಿನ ಬೇಸಿಗೆ ಶಿಬಿರ ಆಯೋಜಿಸಿದೆ ಎಂದು ತಂಡದ ರಾಜೇಶ್ ಮಾಧವನ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗದ್ದಿಗೆ ಮುಖ್ಯ ರಸ್ತೆಯ ಧ್ವನ್ಯಾಲೋಕ ಆವರಣದಲ್ಲಿ ಪ್ರತಿದಿನ ಬೆಳಗ್ಗೆ 10ರಿಂದ ಸಂಜೆ 4ರವರೆಗೆ ಶಿಬಿರ ನಡೆಯಲಿದೆ. ಪ್ರತಿ ಮಗುವಿಗೆ 3 ಸಾವಿರ ರೂ. ಶುಲ್ಕ ನಿಗದಿ ಮಾಡಲಾಗಿದೆ. ಶಿಬಿರದಲ್ಲಿ ದೇಸಿ ಆಟಗಳು, ರಂಗಭೂಮಿ ಚಟುವಟಿಕೆಗಳು ಇರಲಿದ್ದು, ಹೆಸರಾಂತ ಸಂಪನ್ಮೂಲ ವ್ಯಕ್ತಿಗಳು ಮಕ್ಕಳಿಗೆ ತರಬೇತಿ ನೀಡಲಿದ್ದಾರೆ. ಹೆಚ್ಚಿನ ವಿವರಗಳಿಗೆ ಮೊ.ಸಂ. 84818 00239 ಅನ್ನು ಸಂಪರ್ಕಿಸಬಹುದು ಎಂದರು. ತಂಡದ ಸ್ವರೂಪ್, ಚಂದನ್ ಭಾರದ್ವಾಜ್, ಅಕ್ಷತಾ, ಚೌಂಡೇಶ್‌ಮೂರ್ತಿ ಗೋಷ್ಠಿಯಲ್ಲಿದ್ದರು.



ಮೈಸೂರಿನ ಸುಣ್ಣದಕೇರಿಯ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನದಲ್ಲಿರುವ ಮಹರ್ಷಿ ವಾಲ್ಮೀಕಿ ಪುತ್ಥಳಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಮಾಲಾರ್ಪಣೆ ಮಾಡಿದರು. ಈ ವೇಳೆ ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಹೆಚ್.ಪಿ.ಮಂಜುನಾಥ, ಅನಿಲ್ ಚಿಕ್ಕಮಾದು, ನಗರಪಾಲಿಕೆ ಸದಸ್ಯ ಲೋಕೇಶ್ ಪಿಯಾ, ಮುಖಂಡರಾದ ಕೆ.ಹರೀಶ್‌ಗೌಡ, ರವಿಶಂಕರ್ ಇನ್ನಿತರರು ಉಪಸ್ಥಿತರಿದ್ದರು.



ಕನ್ನೇಗೌಡನಕೊಪ್ಪಲು ಶ್ರೀ ಮರುಳೇಶ್ವರ ದೇವಸ್ಥಾನದ ಧರ್ಮದರ್ಶಿ ಸಮಿತಿ ವತಿಯಿಂದ ಮೇಯರ್ ಶಿವಕುಮಾರ್ ಅವರನ್ನು ಅಭಿನಂದಿಸಲಾಯಿತು. ಈ ವೇಳೆ ಸಮಿತಿ ಅಧ್ಯಕ್ಷ ಡಾ.ಮಾದೇವಯ್ಯ, ಖಜಾಂಚಿ ಬರಕ್ಕಿ ಮಾದೇವಪ್ಪ, ಕಾರ್ಯದರ್ಶಿ ಪ್ರೊರಂಗಯ್ಯ, ನಿರ್ದೇಶಕರಾದ ಬಿ.ಸೋಮಣ್ಣ, ಕೆ.ಶಿವಲಿಂಗು, ಲಿಂಗಪ್ಪ ಇನ್ನಿತರರಿದ್ದರು.



ಮೈಸೂರು ನಗರ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ನೂತನ ಅಧ್ಯಕ್ಷ ಎನ್.ಆರ್.ನಾಗೇಶ್, ಸವಿತಾ ಸಮಾಜದ ಅಧ್ಯಕ್ಷ ಹರೀಶ್ ರೆಡ್ಡಿ ಅವರು ಸವಿತಾ ಸಮಾಜದ ಪೀಠಾಧಿಪತಿ ಶ್ರೀಧರನಂದ ಸ್ವಾಮೀಜಿಯವರಿಂದ ಆಶೀರ್ವಾದ ಪಡೆದರು. ಈ ವೇಳೆ ತಿ.ನರಸೀಪುರ ತಾಲೂಕು ಸವಿತಾ ಸಮಾಜದ ಅಧ್ಯಕ್ಷ ನಾಗೇಂದ್ರ, ಪ್ರತಿನಿಧಿ ಮುರಳೀಧರ, ರಾಜು ರೆಡ್ಡಿ, ಚಂದ್ರಶೇಖರ್ ಇನ್ನಿತರರಿದ್ದರು.

ಗ್ರಾಮಗಳಲ್ಲಿ ಸ್ಮಶಾನ ಸೌಲಭ್ಯ, ಲಭ್ಯತೆ ಕುರಿತು ಮಾಹಿತಿ ನೀಡಲು ಸಲಹೆ

ಮೈಸೂರು,ಏ.1–ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣ ಸಂಖ್ಯೆ: W.P.No.15165/2018 ಹಾಗೂ ನ್ಯಾಯಾಂಗ ನಿಂದನಾ ಪ್ರಕರಣ CCC 343/2020ರ ಸಂಬಂಧ 16.03.2023ರಂದು ನ್ಯಾಯಾಲಯವು ನೀಡಿರುವ ನಿರ್ದೇಶನದನ್ವಯ ಪ್ರತಿ ಗ್ರಾಮಗಳಲ್ಲಿ ಸ್ಮಶಾನ ಸೌಲಭ್ಯ ಲಭ್ಯತೆ ಬಗ್ಗೆ ಸಾರ್ವಜನಿಕರು ಲಿಖಿತವಾಗಿ ಮಾಹಿತಿಯನ್ನು ಸಂಬಂಧಿಸಿದ ಸ್ಥಳೀಯ ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕರು, ತಹಶೀಲ್ದಾರ್‌ರವರಿಗೆ ಸಲ್ಲಿಸುವುದು. ಮಾಹಿತಿ ಸಲ್ಲಿಸಬಹುದಾಗಿದೆ. ತಮ್ಮ ಹೆಸರು, ತಂದೆ ಹೆಸರು, ಆಧಾರ್ ಕಾರ್ಡ್ ನಂಬರ್ ಮತ್ತು ಪೂರ್ಣ ವಿಳಾಸದೊಂದಿಗೆ ಸ್ಮಶಾನ ಪ್ರದೇಶದ ಮಾಹಿತಿ ಸಲ್ಲಿಸಬೇಕೆಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.5ರಿಂದ ಮಕ್ಕಳ ಬೇಸಿಗೆ ಶಿಬಿರ

ಮೈಸೂರು,ಏ.1–ಮೈಸೂರಿನ ಶ್ರೀರಾಂಪುರದ ಶ್ರೀ ಗುರು ಕಲಾಶಾಲೆ ವತಿಯಿಂದ ಏ.5ರಿಂದ 30ರವರೆಗೆ 5ರಿಂದ 15 ವರ್ಷದ ಮಕ್ಕಳಿಗಾಗಿ 'ಪುಟಾಣಿ ಪ್ರಪಂಚ' ಮಕ್ಕಳ ಬೇಸಿಗೆ ಶಿಬಿರವನ್ನು ಕುವೆಂಪುನಗರದ ಕಾಗಿನೆಲೆ ಕ್ಯಾಂಪಸ್ ಆವರಣದ ಶಿಶಿಲೋಕದಲ್ಲಿ ಏರ್ಪಡಿಸಲಾಗಿದೆ.

ಪ್ರತಿದಿನ ಬೆಳಗ್ಗೆ 10.30ರಿಂದ ಸಂಜೆ 4ರವರೆಗೆ ನಡೆಯುವ ಶಿಬಿರದಲ್ಲಿ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ನಾಟಕ, ಅಭಿನಯ, ಹಾಡು, ನೃತ್ಯ, ಚಿತ್ರಕಲೆ, ರಂಗಾಟ, ಮುಖವಾಡ ತಯಾರಿಕೆ, ನಿಸರ್ಗ ನಡಿಗೆ, ಪ್ರಯೋಗ ಗಣಿತ, ವಿಸ್ಮಯ ವಿಜ್ಞಾನ, ಯೋಗ, ಧ್ಯಾನ, ಪ್ರಾಣಾಯಾಮ, ಸ್ನೇಕ್ ಶೋ, ಡಾಗ್ ಶೋ ಚಟುವಟಿಕೆಗಳನ್ನು ಶಿಬಿರದ ನಿರ್ದೇಶಕ ಅರಸೀಕೆರೆ ಯೋಗಾನಂದರ ನೇತೃತ್ವದಲ್ಲಿ ಹೇಳಿಕೊಡಲಾಗುವುದು. ವಿವರಗಳಿಗೆ ಮೊ. 9980794690, 9880657458 ಸಂಪರ್ಕಿಸಬಹುದು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಏ.1–ಮೈಸೂರಿನ ಆಲ್ಫಾ ಆಸ್ಪತ್ರೆಯಲ್ಲಿ ನಾಳೆ (ಏ.2) ಬೆಳಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರದಲ್ಲಿ ಉಚಿತ ಸಮಾಲೋಚನೆ, ಪೈಲ್ಸ್, ಫಿಸ್ತುಲಾ, ಉಬ್ಬಿರುವ ರಕ್ತನಾಳದ ತಪಾಸಣೆ ಮಾಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ.8792672458, 8152001400 ಸಂಪರ್ಕಿಸಬಹುದು.

ಉಚಿತ ಯೋಗ ಶಿಬಿರ

ಮೈಸೂರು, ಏ.1–ಮೈಸೂರಿನ ಬೆಳಕು ಫೌಂಡೇಷನ್ ವತಿಯಿಂದ 45 ದಿನಗಳ ಉಚಿತ ಯೋಗ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಆಸನಗಳು, ಪ್ರಾಣಾಯಾಮ, ಮುದ್ರೆಗಳು, ಧ್ಯಾನ, ಆಹಾರ ಪದ್ಧತಿ ಹಾಗೂ ಯೋಗ ಚಿಕಿತ್ಸೆಯನ್ನು ಕಲಿಸಲಾಗುವುದು. ಶಿಬಿರವು ಏ.7ರಿಂದ ಬೆಳಗ್ಗೆ 10ರಿಂದ 11ರವರೆಗೆ ಶಿವರಾಂಪೇಟೆಯ ಚಂದ್ರಮೌಳೇಶ್ವರ ಪ್ರಾರ್ಥನಾ ಮಂದಿರದಲ್ಲಿ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ಮೊ.9242772919, 9980569117 ಸಂಪರ್ಕಿಸಬಹುದು.

ಮೈಸೂರಲ್ಲಿ ಚುನಾವಣಾ ಬಂದೋಬಸ್ತ್‌ಗೆ ಇಂದು ಪ್ಯಾರಾಮಿಲಿಟರಿ ಪಡೆ ಆಗಮನ

ನಗರ ಪೊಲೀಸ್ ಆಯುಕ್ತರಿಂದಲೂ ರಾತ್ರಿ ಗಸ್ತು ಪರಿಶೀಲನೆ





ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಶುಕ್ರವಾರ ರಾತ್ರಿ ಮೈಸೂರು ನಗರದಲ್ಲಿ ಗಸ್ತು ನಡೆಸಿ ಚೆಕ್‌ಪೋಸ್ಟ್‌ಗಳಲ್ಲಿ ದಾಖಲೆಗಳು ಹಾಗೂ ಪೊಲೀಸರ ಕಾರ್ಯವೈಖರಿ ಖುದ್ದು ಪರಿಶೀಲಿಸಿದರು.

ಮೈಸೂರು, ಏ. 1(ಆರ್‌ಕೆ)– ವಿಧಾನ ಸಭಾ ಚುನಾವಣೆ ಘೋಷಣೆಯಾಗಿ ಮಾದರಿ ನೀತಿ ಸಂಹಿತೆ ಜಾರಿಯಾದ ಬೆನ್ನಲ್ಲೇ ಬಂದೋಬಸ್ತ್‌ಗಾಗಿ ನಾಳೆ (ಏ. 2) ಮೈಸೂರಿಗೆ ಪ್ಯಾರಾ ಮಿಲಿಟರಿ ಪಡೆಯ 2 ತುಕಡಿಗಳು ಆಗಮಿಸಲಿವೆ.

ಈಗಾಗಲೇ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ನೇತೃತ್ವದಲ್ಲಿ ನಗರದಾದ್ಯಂತ ಭಾರೀ ಕಟ್ಟೆಚ್ಚರ ವಹಿಸಲಾಗಿದ್ದು, ಜಿಲ್ಲೆಯಲ್ಲೂ ಎಸ್ಪಿ ಸೀಮಾ ಲಾಟ್ಕರ್ ಮೇಲ್ವಿಚಾರಣೆಯಲ್ಲಿ ಭಾರೀ ಭದ್ರತಾ ವ್ಯವಸ್ಥೆ ಮಾಡಲಾಗಿದೆ. ಚುನಾವಣಾ ನೀತಿ ಸಂಹಿತೆ ಜಾರಿಯಾಗುತ್ತಿದ್ದಂತೆಯೇ ಅಕ್ರಮಗಳನ್ನು ತಡೆಗಟ್ಟಲು ಕೇಂದ್ರದಿಂದ ಅರೆ ಮಿಲಿಟರಿ ಪಡೆಯನ್ನು ಕರೆಸಿಕೊಳ್ಳಲಾಗುತ್ತಿದೆ.

90 ಸಿಬ್ಬಂದಿಗಳನ್ನೊಳಗೊಂಡ ಎರಡು ಅರೆಮಿಲಿಟರಿ ಪಡೆ ತುಕಡಿಗಳಲ್ಲಿ ಒಂದು ಭಾನುವಾರ ಮೈಸೂರಿಗೆ ಬರಲಿದ್ದು, ಸೋಮವಾರ (ಏ.3) ಮತ್ತೊಂದು ತುಕಡಿ ಆಗಮಿಸಿದೆ. ಅವರಿಗೆ ಮೈಸೂರು ನಗರದಲ್ಲಿ ವಾಸ್ತವ್ಯ ಹಾಗೂ ಊಟೋಪಚಾರದ ವ್ಯವಸ್ಥೆ ಮಾಡಲಾಗುತ್ತಿದೆ. ಮೈಸೂರು ನಗರದಲ್ಲಿರುವ ಸಿವಿಲ್, ಟ್ರಾಫಿಕ್, ಸಿಎಆರ್, ಕೆಎಸ್‌ಆರ್‌ಪಿ, ಕಮಾಂಡೋ ಪಡೆ ಪೊಲೀಸರ ಜೊತೆಗೆ ಶಸ್ತ್ರಸಜ್ಜಿತ ಪ್ಯಾರಾಮಿಲಿಟರಿ ಪಡೆ ಸಿಬ್ಬಂದಿಯನ್ನು ಚುನಾವಣಾ ಬಂದೋಬಸ್ತ್‌ಗೆ ಬಳಸಿಕೊಳ್ಳಲಾಗುವುದು. ಚೆಕ್‌ಪೋಸ್ಟ್‌ಗಳು, ನಾಮಪತ್ರ ಸಲ್ಲಿಕೆ ಪ್ರಕ್ರಿಯೆ, ರಾಜಕೀಯ ಬಹಿರಂಗ ಸಭೆಗಳು, ಸೂಕ್ಷ್ಮ ಪ್ರದೇಶಗಳಿಗೆ ಅರೆಮಿಲಿಟರಿ ಪಡೆ ಸಿಬ್ಬಂದಿಗಳನ್ನು ನಿಯೋಜಿಸಲಾಗುತ್ತಿದೆ. ಅದೇ ರೀತಿ ಏ.3ರ ನಂತರ ಮೈಸೂರು ಜಿಲ್ಲೆಗೂ ಪ್ಯಾರಾ ಮಿಲಿಟರಿ ಪಡೆ ಐದು ತುಕಡಿಗಳು ಆಗಮಿಸುತ್ತಿದ್ದು, ಅವರಿಗೆ ಎಸ್ಪಿ ಸೀಮಾ ಲಾಟ್ಕರ್ ಸ್ಥಳ ನಿಯೋಜನೆ ಮಾಡುವರು.

ಜಿಲ್ಲಾ ಗಡಿ, ರಾಜ್ಯ ಗಡಿ ಭಾಗಗಳ ಚೆಕ್‌ಪೋಸ್ಟ್‌ಗಳು, ತಾಲೂಕು ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳ ಚೆಕ್‌ಪೋಸ್ಟ್‌ಗಳಿಗೆ ಅರೆಮಿಲಿಟರಿ ಪಡೆ ಸಿಬ್ಬಂದಿಗಳನ್ನು ನಿಯೋಜಿಸಿ ದಿನದ 24 ಗಂಟೆಯೂ ವಾಹನಗಳ ತಪಾಸಣೆ ಮೂಲಕ ಚುನಾವಣಾ ಅಕ್ರಮಗಳನ್ನು ತಡೆಯಲು ಜಿಲ್ಲಾ ಪೊಲೀಸರು ಕಾರ್ಯೋನ್ಮುಖರಾಗಿದ್ದಾರೆ.

ರಾತ್ರಿ ಗಸ್ತು ಕಾರ್ಯಾಚರಣೆ: ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುತ್ತಿರುವ ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಶುಕ್ರವಾರ ರಾತ್ರಿ 11ರಿಂದ ಮುಂಜಾನೆ 5.30 ಗಂಟೆವರೆಗೆ ಕಾರ್ಯಾಚರಣೆ ನಡೆಸಿ ಚೆಕ್‌ಪೋಸ್ಟ್‌ಗಳಲ್ಲಿ ವಾಹನ ತಪಾಸಣೆ ಮಾಡುತ್ತಿರುವ ಪೊಲೀಸರ ಕಾರ್ಯವೈಖರಿ ಪರಿಶೀಲಿಸಿದರು. ಡಿಸಿಪಿ ಎಂ. ಮುತ್ತುರಾಜ್, ಎಸ್.ಜಾಹ್ನವಿ, ಎಸಿಪಿಗಳಾದ ಶಾಂತಮಲ್ಲಪ್ಪ, ಅಶ್ವಥನಾರಾಯಣ, ಗಜೇಂದ್ರ ಪ್ರಸಾದ್, ಎಸ್.ಇ.ಗಂಗಾಧರಸ್ವಾಮಿ, ಸಂದೇಶ್‌ಕುಮಾರ್, ಪರಶುರಾಮಪ್ಪ, ಎಲ್ಲಾ ಠಾಣೆಗಳ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್‌ಗಳೂ ಸಹ ಆಯುಕ್ತರೊಂದಿಗೆ ಶುಕ್ರವಾರ ರಾತ್ರಿ ಗಸ್ತು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಅಬಕಾರಿ ಅಕ್ರಮ ಚಟುವಟಿಕೆಗಳ ನಿಯಂತ್ರಣಾ ಕೊಠಡಿ ಸ್ಥಾಪನೆ

ಮೈಸೂರು,ಏ.1–ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ, ಚುನಾವಣೆಯನ್ನು ಮುಕ್ತ ಹಾಗೂ ನಿಷ್ಪಕ್ಷಪಾತವಾಗಿ ನಡೆಸುವ ಉದ್ದೇಶದಿಂದ ಅಕ್ರಮ ಮದ್ಯ ತಯಾರಿಕೆ, ಶೇಖರಣೆ, ಸಾಗಾಣಿಕೆ, ವಿತರಣೆ ಇನ್ನಿತರೆ ಅಬಕಾರಿ ಅಕ್ರಮ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರಿಂದ ಸ್ವೀಕೃತವಾಗುವ ದೂರು ಮತ್ತು ಮಾಹಿತಿಗಳನ್ನು ಸ್ವೀಕರಿಸಲು ಹಾಗೂ ಅಗತ್ಯ ಕ್ರಮ ಕೈಗೊಳ್ಳಲು ಅನುವಾಗುವಂತೆ ಅಬಕಾರಿ ಇಲಾಖಾ ಕಚೇರಿಗಳಲ್ಲಿ ಹಗಲು ಮತ್ತು ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು (24X7) ಈ ನಿಯಂತ್ರಣಾ ಕೊಠಡಿಗಳನ್ನು ಸ್ಥಾಪಿಸಲಾಗಿದೆ.

ಅಬಕಾರಿ ಕಚೇರಿಗಳ ದೂರವಾಣಿ ಸಂಖ್ಯೆ: ಮೈಸೂರು ನಗರ ಡೆಪ್ಯೂಟಿ ಕಮಿಷನರ್ ಆಫ್ ಎಕ್ಸೈಸ್‌ರವರ ಕಚೇರಿ ದೂ.ಸಂ: 0821–2541863, 1800–4255–989, ಮೈಸೂರು ಉಪವಿಭಾಗ ಅಬಕಾರಿ ಉಪ ಅಧೀಕ್ಷಕರ ಕಚೇರಿ ದೂ.ಸಂ: 0821–2524060, 9449597182, 9008433666, ಮೈಸೂರು ನಗರ ಅಬಕಾರಿ ನಿರೀಕ್ಷಕರು ಹಾಗೂ ಜಿಲ್ಲಾ ವಿಚಕ್ಷಣಾ ದಳ ಡೆಪ್ಯೂಟಿ ಕಮಿಷನರ್ ಆಫ್ ಎಕ್ಸೈಸ್‌ನವರ ಕಚೇರಿ ದೂ.ಸಂ: 0821–2541863, 7019593576, ಮೈಸೂರು ವಲಯ–1 ಅಬಕಾರಿ ನಿರೀಕ್ಷಕರ ಕಚೇರಿ ದೂ.ಸಂ: 0821–2438269, 9449130867, ಮೈಸೂರು ವಲಯ–2 ಅಬಕಾರಿ ನಿರೀಕ್ಷಕರ ಕಚೇರಿ ದೂ.ಸಂ: 0821–2418274, 9449721835, ಮೈಸೂರು ವಲಯ–3 ಅಬಕಾರಿ ನಿರೀಕ್ಷಕರ ಕಚೇರಿ ದೂ.ಸಂ: 0821–2414035, 8904257177, ಮೈಸೂರು ವಲಯ–4 ಅಬಕಾರಿ ನಿರೀಕ್ಷಕರ ಕಚೇರಿ ದೂ.ಸಂ: 0821–2446670, 8105369659 ಅನ್ನು ಸಂಪರ್ಕಿಸಿ ತಕ್ಷಣದಿಂದ ಆರಂಭಗೊಂಡು ಚುನಾವಣೆ ಪ್ರಕ್ರಿಯೆ ಮುಗಿಯುವವರೆಗೂ ಅಬಕಾರಿ ಅಕ್ರಮಗಳಿಗೆ ಸಂಬಂಧಪಟ್ಟಂತೆ ಯಾವುದೇ ದೂರು ಮತ್ತು ಮಾಹಿತಿಗಳನ್ನು ಟೋಲ್ ಫ್ರೀ ದೂರವಾಣಿ ಸಂಖ್ಯೆಗೆ ಕರೆ ಮಾಡಿ ತಿಳಿಸಬಹುದಾಗಿದೆ ಎಂದು ಅಬಕಾರಿ ಇಲಾಖೆಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೋಜಿಗಾಗಿ ಪ್ರಾಣಿ 'ಹಿಂಸೆ' ಮೈಸೂರಲ್ಲಿ ಅಭಿಯಾನ



ಮೈಸೂರು, ಏ.1(ಎಂಕೆ)– ಜಾಹಿರಾತುಗಳಲ್ಲಿ ಬಳಸುವ ಪ್ರಾಣಿಗಳನ್ನು ಹಿಂಸಿಸಲಾಗುತ್ತಿದ್ದು, ನೋಡುಗರಿಗೆ ಮಾತ್ರ ಅವುಗಳು ಸಹಜವಾಗಿರುವಂತೆ ತೋರಿಸಿ ಮೋಸ ಮಾಡಲಾಗುತ್ತಿದೆ ಎಂದು ವೀಗನ್ ಪ್ರಾಣಿ ಹಕ್ಕುಗಳ ಕಾರ್ಯಕರ್ತರು ಮೈಸೂರಿನಲ್ಲಿ ಜಾಗೃತಿ ಅಭಿಯಾನ ನಡೆಸಿದರು.


ನಗರದ ಚಿಕ್ಕಗಡಿಯಾರದ ಎದುರು ಜಮಾಯಿಸಿದ ಕಾರ್ಯಕರ್ತರು, ಜಾಗೃತಿ ಬಿತ್ತಿ ಫಲಕಗಳನ್ನು ಹಿಡಿದು ಜಾಹಿರಾತಿನಲ್ಲಿ ಪ್ರಾಣಿಗಳನ್ನು ತೋರಿಸುವುದನ್ನೇ ಸತ್ಯವೆಂದು ತಿಳಿದು ಮೋಸ ಹೋಗದಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಿದರು.

ಏಪ್ರಿಲ್ ತಿಂಗಳ ಮೊದಲ ದಿನದಂದು ಮೂರ್ಖರನ್ನಾಗಿಸುವಂತೆ ಪ್ರಾಣಿಗಳ ಹಿಂಸಿಸುವ ಉದ್ಯಮಗಳಿಗೆ ಮಾರು ಹೋಗಬೇಡಿ. ಮಾಂಸ, ಮೊಟ್ಟೆ, ಡೈರಿ ಮತ್ತು ಜೇನು ಉದ್ಯಮದಲ್ಲಿ ಪ್ರಾಣಿಗಳನ್ನು ಹಿಂಸಿಸುವ ವಿಷಯಗಳ ಬಗ್ಗೆ ಹೆಚ್ಚಿನ ಜನರಿಗೆ ತಿಳಿದಿಲ್ಲ. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಪ್ರಾಣಿಗಳ ಹಿಂಸೆಯ ಬಗ್ಗೆ ತಿಳಿಸುವ ಪ್ರಯತ್ನ ಇದಾಗಿದೆ ಎಂದರು. ಜಾಗೃತಿ ಅಭಿಯಾನದಲ್ಲಿ ವೀಗನ್ ಪ್ರಾಣಿ ಹಕ್ಕುಗಳ ಕಾರ್ಯಕರ್ತರಾದ ವರುಣ್ ಗಣೇಶ್, ಸಿಂಚನ, ರಾಗಿಣಿ, ವರುಣ್ ರಾಘವೇಂದ್ರ, ಅಭಿಷೇಕ್ ಮತ್ತಿತರರಿದ್ದರು.

ಜೂ.24ರಂದು ರಾಷ್ಟ್ರೀಯ ಲೋಕ್ ಅದಾಲತ್

ಮೈಸೂರು,ಏ.1–ಮುಂದಿನ ಜೂನ್ 24ರಂದು ರಾಜ್ಯಾದ್ಯಂತ ರಾಷ್ಟ್ರೀಯ ಲೋಕ ಅದಾಲತ್ ಹಮ್ಮಿಕೊಳ್ಳಲಾಗಿದ್ದು, ಸದರಿ ಲೋಕ ಅದಾಲತ್‌ನಲ್ಲಿ ಸಾರ್ವಜನಿಕರು ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಮತ್ತು ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಇಚ್ಛಿಸಿದ್ದಲ್ಲಿ ಮುಂಚಿತವಾಗಿ ಸಂಬಂಧಪಟ್ಟ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ತಾಲೂಕು ಕಾನೂನು ಸೇವೆಗಳ ಸಮಿತಿಗಳನ್ನು ಸಂಪರ್ಕಿಸಿ, ಮಾಹಿತಿ ಪಡೆದುಕೊಳ್ಳಬಹುದು. ಲೋಕ್ ಅದಾಲತ್‌ನಲ್ಲಿ ರಾಜಿಯಾಗಬಲ್ಲ ಅಪರಾಧಿಕ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಉದ್ಯೋಗದಲ್ಲಿ ಪುನರ್ ಸ್ಥಾಪಿಸಲ್ಪಡುವ ಪ್ರಕರಣಗಳು, ಕೈಗಾರಿಕಾ ಕಾರ್ಮಿಕರ ವೇತನಕ್ಕೆ ಸಂಬಂಧಿಸಿದ ಕ್ಲೇಮುಗಳು, ಜಿಲ್ಲಾ ಗ್ರಾಹಕರ ವೇದಿಕೆಯಲ್ಲಿನ ಪ್ರಕರಣಗಳು, ಖಾಯಂ ಜನತಾ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳು, ಚೆಕ್ಕು ಅಮಾನ್ಯದ ಪ್ರಕರಣಗಳು, ಮೋಟಾರು ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣಗಳು, ಕಾರ್ಮಿಕ ವಿವಾದಗಳು, ವಿದ್ಯುತ್ ಹಾಗೂ ನೀರಿನ ಶುಲ್ಕಗಳು, ಭೂಸ್ವಾಧೀನ ಪ್ರಕರಣಗಳು, ವೇತನ ಮತ್ತು ಭತ್ಯೆಗಳಿಗೆ ಸಂಬಂಧಿಸಿದ ಸೇವಾ ಪಿಂಚಣಿ ಪ್ರಕರಣಗಳು, ಸಾರ್ವಜನಿಕ ಉಪಯುಕ್ತತೆ ಸೇವೆಗಳ ಸಂಬಂಧಿತ ಪ್ರಕರಣಗಳು, ರಾಜಿಯಾಗಬಲ್ಲ ಸಿವಿಲ್ ಮತ್ತು ಇತರೆ ಪ್ರಕರಣಗಳನ್ನು ರಾಜೀ ಮೂಲಕ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ. ಮಾಹಿತಿಗಾಗಿ www.kslsa. kar.nic.in ವೆಬ್‌ಸೈಟ್ ಅಥವಾ ನಿಮ್ಮ ಹತ್ತಿರದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ತಾಲೂಕು ಕಾನೂನು ಸೇವೆಗಳ ಸಮಿತಿಗಳ ಸದಸ್ಯ ಕಾರ್ಯದರ್ಶಿಯನ್ನು (ಸಹಾಯವಾಣಿ ಸಂಖ್ಯೆ: 1800–425–90900/1800–425–0131) ಸಂಪರ್ಕಿಸಿ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

2.4.2023 ಭಾನುವಾರ, ಮಳೆ ನಕ್ಷತ್ರ: ರೇವತಿ, 31.03.2023 ರಿಂದ 13.04.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ದ್ವಾದಶಿ, ನಕ್ಷತ್ರ: ಮಖ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

- **ಮೈಸೂರು ಜಿಮ್‌ಖಾನ :** ಕ್ರಿಕೆಟ್ ಕೋಚಿಂಗ್ ಶಿಬಿರ, ಸ್ಥಳ: ರೈಲ್ವೆ ಮೈದಾನ, ಬೆಳಗ್ಗೆ 8.30ಕ್ಕೆ.
- **ಅಭ್ಯುದಯ ಮಹಿಳಾ ಸಮಾಜ:** ಜಿಲ್ಲಾ ಮಟ್ಟದ ಭಜನಾ ಸ್ಪರ್ಧೆ, ಉದ್ಘಾಟನೆ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮುಖ್ಯ ಅತಿಥಿಗಳು: ಪಾಲಿಕೆ ಸದಸ್ಯೆ ಶಾರದಮ್ಮ ಈಶ್ವರ್, ಅಧ್ಯಕ್ಷತೆ: ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಉಪಸ್ಥಿತರು: ಸಮಾಜದ ಗೌರವಾಧ್ಯಕ್ಷೆ ಸೀತಾಲಕ್ಷ್ಮಿ, ಅಧ್ಯಕ್ಷೆ ಶಾಂತಿ ಧರ್ಮರಾಜನ್, ಕಾರ್ಯದರ್ಶಿ ನಾಗವಲ್ಲಿ, ಸ್ಥಳ: ಅಭ್ಯುದಯ ಮಹಿಳಾ ಸಮಾಜ ಸಭಾಂಗಣ, ಜೆ.ಪಿ.ನಗರ, ಬೆಳಗ್ಗೆ 10ಕ್ಕೆ.
- **ಆಲ್ಫಾ ಆಸ್ಪತ್ರೆ :** ಉಚಿತ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಲ್ಫಾ ಆಸ್ಪತ್ರೆ, ಬನ್ನಿಮಂಟಪ, ಸುಭಾಷ್‌ನಗರ, ಬೆಳಗ್ಗೆ 10 ರಿಂದ.
- **ಬಸವ ಸಮಿತಿ :** ಶರಣ ಸಂಗಮ–280, ಬಸವರಾಜು ದೊಡ್ಡಟ್ಟಿ ಅವರಿಂದ ದಾಸೋಹ ಚಕ್ರವರ್ತಿ ಶ್ರೀ ಗುರುಮಲ್ಲೇಶ್ವರರು ಕುರಿತು ಉಪನ್ಯಾಸ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ.
- **ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ:** ವೀರಶೈವ ಲಿಂಗಾಯತ ವಧು–ವರರ ಸಮಾವೇಶ, ಸಾನ್ನಿಧ್ಯ: ಶ್ರೀ ಫಲಹಾರ ಪ್ರಭುದೇವ ಸ್ವಾಮಿಗಳು, ಉದ್ಘಾಟನೆ: ಸಾಹಿತಿ ಬನ್ನೂರು ಕೆ.ರಾಜು, ಅಧ್ಯಕ್ಷತೆ: ಮೈಸೂರು ಜಿಲ್ಲಾ ಸರ್ಕಾರಿ ನೌಕರರ ಸಂಘದ ಹಿರಿಯ ಉಪಾಧ್ಯಕ್ಷ ಮಾಲಂಗಿ ಸುರೇಶ್, ಉಪಸ್ಥಿತರು: ಎಸ್.ನಾಗರಾಜು, ಜಿ.ಎಸ್. ಮಹದೇವಪ್ರಸಾದ್, ಮಾದೇಶ್, ಸ್ಥಳ: ವಿದ್ಯಾಭಾರತಿ ಕಲ್ಯಾಣ ಮಂಟಪ, ಗನ್‌ಹೌಸ್ ಹತ್ತಿರ, ಮಧ್ಯಾಹ್ನ 12.30ಕ್ಕೆ.
- **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಶಿವಕಾಂತಾನಂದ ಅವರಿಂದ ಭಕ್ತಿಯ ಮಹಿಮೆ ಕುರಿತು ಉಪನ್ಯಾಸ, ಸ್ಥಳ: ಶ್ರೀರಾಮಕೃಷ್ಣ ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.
- **ಅದಮ್ಯ ರಂಗಶಾಲೆ :** ರಂಗ ತರಬೇತಿ ಶಿಬಿರದ ಸಮಾರೋಪ ಹಾಗೂ ನಾಟಕ ಪ್ರದರ್ಶನ, ಅಧ್ಯಕ್ಷತೆ: ಸಾಹಿತಿ ಪ್ರೊ.ಎಂ.ಕೃಷ್ಣೇಗೌಡ, ಪ್ರಮಾಣ ಪತ್ರ ವಿತರಣೆ: ಪೊಲೀಸ್ ಸಹಾಯಕ ಆಯುಕ್ತ ಶಾಂತಮಲ್ಲಪ್ಪ, ಮುಖ್ಯ ಅತಿಥಿಗಳು : ವಿಕೇರ್ ಸಂಸ್ಥಾಪಕ ಅಧ್ಯಕ್ಷೆ ಡಾ. ಕುಮುದಿನಿ ಅಚ್ಚಿ, ಸ್ಥಳ: ಶ್ರೀ ಕುವೆಂಪು ರಂಗಮಂದಿರ, ಶ್ರೀ ವಿವೇಕಾನಂದ ಪದವಿಪೂರ್ವ ಕಾಲೇಜು, ಜಯಲಕ್ಷ್ಮಿಪುರಂ, ಸಂಜೆ 6ಕ್ಕೆ.
- **ವೀರು ಥಿಯೇಟರ್ ಟ್ರಸ್ಟ್ :** ಮಹಾಜನ ಪ್ರಥಮ ದರ್ಜೆ ಕಾಲೇಜು ಸಾರಂತ (ಸಾಂಸ್ಕೃತಿಕ ರಂಗ ತಂಡ)ದಿಂದ 'ಮಿಡಲ್ ಕ್ಲಾಸ್ ಸಂಸಾರ' ನಾಟಕ ಪ್ರದರ್ಶನ, ನಿರ್ದೇಶನ: ಪಿ. ಶ್ರೇಯಸ್, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಬದುಕು ಮಣ್ಣಿನೊಂದಿಗೆ–ಬಾನುಲಿ ಸರಣಿ, ಲೇಖನ ಮತ್ತು ಪ್ರಸ್ತುತಿ–ಎ.ಪಿ. ಚಂದ್ರಶೇಖರ್, 6.45 ಅರಿವಿನ ಶಿಖರ, ಗಾಯನ–ಸದಾಶ್ವ ಪಾಟೀಲ್, ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ– ಡಾ.ಹೆಚ್.ಎಂ.ಕಲಾಶ್ರೀ, 9.40 ನಮ್ಮ ಆರೋಗ್ಯ "ವಿಶ್ವ ಆಟಿಸಂ ಸಪ್ತಾಹದ ಸಂದರ್ಭದಲ್ಲಿ ಆಟಿಸಂ ಸ್ಪೆಕ್ಟ್ರಂ ಡಿಸಾರ್ಡರ್–ನಿರ್ವಹಣೆ ಮತ್ತು ಪರಿಹಾರ ಕುರಿತು ಡಾ.ಜಯಶ್ರೀ ಸಿ. ಶಾನ್‌ಬಾಳ್ ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ, 10.30 ಮಕ್ಕಳ ಮಂಟಪ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ವಿದ್ಯಾಭೂಷಣ, 12.45 ಜನಪದ ಸಂಗೀತ–ಚಾಮುಮ್ಮ ಮತ್ತು ತಂಡ, 1.00 ರಂಗಗೀತೆಗಳು–ಜಗಜ್ಯೋತಿ ಬಸವೇಶ್ವರ ನಾಟಕದ ಹಾಡುಗಳು, 1.20 ಭಾವಗೀತೆಗಳು–ದೀಪಾ ಸತ್ಯನಾರಾಯಣ, 3.45 ಯಕ್ಷಗಾನ ತಾಳ ಮದ್ದಲೆ, ಪ್ರಸಂಗ–ಭಕ್ತ ಅಂಬರೀಶ, ಪ್ರಸ್ತುತಿ–ಕೂಡ್ಲುವಿನ ಕುತ್ಯಾಲ ಶ್ರೀ ಗೋಪಾಲಕೃಷ್ಣ ಯಕ್ಷಗಾನ ತರಬೇತಿ ಕೇಂದ್ರದ ಕಲಾವಿದರು, 6.50 ಕೃಷಿರಂಗ–ಪಶುರಂಗ, ಪ್ರಾಯೋಜಕರು–ಪಶುಪಾಲನೆ ಮತ್ತು ಪಶು ವೈದ್ಯಕೀಯ ಸೇವೆಗಳ ಇಲಾಖೆ, ಮೈಸೂರು, 8.00 ವಿಶಿಷ್ಟ ವ್ಯಕ್ತಿ ವಿಶೇಷ ಯತ್ನ–ಬಾನುಲಿ ಸರಣಿ ಚಾಮರಾಜನಗರದ ದೀನಬಂಧು ಟ್ರಸ್ಟ್‌ನ ಪ್ರೊ. ಜಿ.ಎಸ್.ಜಯದೇವ್ ಅವರೊಂದಿಗೆ ಸಂವಾದ ನಡೆಸಿಕೊಡುತ್ತಾರೆ– ದಿವಾಕರ ಹೆಗಡೆ, 9.15 ರಂಗಗೀತೆಗಳು–ಸಾಹುಕಾರ ನಾಟಕದ ಹಾಡುಗಳು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ


ನಗರದಲ್ಲಿ ವಿವಿಧೆಡೆ ಶ್ರೀರಾಮೋತ್ಸವ



- **ಶ್ರೀರಾಮ ಭಕ್ತವೃಂದ ಸೇವಾ ಟ್ರಸ್ಟ್ :** ಶ್ರೀ ರಾಮನವಮಿ, ಬೆಳಗ್ಗೆ 8 ರಿಂದ ಅಭಿಷೇಕ, ದೇವತಾ ಕಾರ್ಯಗಳು, ಅಲಂಕಾರ, ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ, ನಾಮ ರಾಮಾಯಣಂ ಪಾರಾಯಣ, ಭಜನಾ ಕಾರ್ಯ ಕ್ರಮ, ಬೆಳಗ್ಗೆ 11.30ಕ್ಕೆ ದೇವಸ್ಥಾನದ ಪ್ರಾಂಗಣದಲ್ಲಿ ಶ್ರೀರಾಮ ದೇವರಿಗೆ ರಥೋತ್ಸವ, ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ, ಸ್ಥಳ: ಟ್ರಸ್ಟ್ ಆವರಣ, ಜೆ.ಪಿ.ನಗರ.
- **ಶ್ರೀ ಕಾಶೀಮಠದ ಶ್ರೀರಾಮ ಮಂದಿರ :** ಶ್ರೀರಾಮ ನವಮಿ, ಅಶ್ವಿನ್ ಪ್ರಭು ಅವರಿಂದ ಭಜನೆ, ಸ್ಥಳ: ಶ್ರೀ ಕಾಶೀಮಠದ ಶ್ರೀರಾಮ ಮಂದಿರ, ಶ್ರೀರಾಮಪೇಟೆ ಸಂಜೆ 6.15 ರಿಂದ.
- **ಶ್ರೀ ರಾಮ ಸೇವಾ ಮಂಡಲಿ:** 70ನೇ ವರ್ಷದ ಶ್ರೀ ರಾಮೋತ್ಸವ, ಸಂಜೆ 6.30ಕ್ಕೆ ವಿದ್ವಾನ್ ಸುಚೇತನ್ ರಂಗಸ್ವಾಮಿ ಅವರಿಂದ ಶಾಸ್ತ್ರೀಯ ಗಾಯನ, ವಿದ್ವಾನ್ ಸುಮಂತ್ ಮಂಜುನಾಥ್–ಪಿಟೀಲು, ವಿದ್ವಾನ್ ರಾಧೇಶ್–ಮೃದಂಗ, ವಿದ್ವಾನ್ ಶಮಿತ್‌ಗೌಡ–ಘಟಂ, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.
- **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟೆಬಲ್ ಟ್ರಸ್ಟ್ :** ಸಂಗೀತೋತ್ಸವ, ವಿದ್ವಾನ್ ಅಶ್ವಥ್ ನಾರಾಯಣ್ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ವಿಶ್ವೇಷ್ ಚಂದ್ರಶೇಖರ್–ಪಿಟೀಲು, ವಿದ್ವಾನ್ ಕೆ.ವಿ. ಪ್ರಸಾದ್ –ಮೃದಂಗ, ವಿದ್ವಾನ್ ರಾಮಾನುಜಂ–ಘಟಂ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30 ರಿಂದ.
- **ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ :** 107ನೇ ರಾಮನವಮಿ ವಾರ್ಷಿಕ ಪರಂಪರೆಯ ಸಂಗೀತೋತ್ಸವ, ಬೆಳಿಗ್ಗೆ 10 ಗಂಟೆಗೆ ಶ್ರೀ ಪುರಂದರದಾಸರ ಮತ್ತು ಶ್ರೀ ತ್ಯಾಗರಾಜ ಸ್ವಾಮಿಗಳ ಆರಾಧನೆ, ಸಂಜೆ 6.15ಕ್ಕೆ ಚೆನ್ನೈನ ವಿದುಷಿ ಗಾಯತ್ರಿ ವೆಂಕಟ್ ರಾಘವನ್ ಅವರಿಂದ ಗಾಯನ, ವಿದ್ವಾನ್ ಮೈಸೂರು ಶ್ರೀಕಾಂತ್–ವಯೋಲಿನ್, ವಿದ್ವಾನ್ ಬಿಸಿ ಮಂಜುನಾಥ್–ಮೃದಂಗ, ವಿದ್ವಾನ್ ಶ್ರೀನಿಧಿ–ಘಟಂ, ಸ್ಥಳ: ಶ್ರೀ ಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 6.15ಕ್ಕೆ.
- **ಶ್ರೀರಾಮ ಮಂದಿರ:** ಶ್ರೀರಾಮ ನವಮಿ, ಗಾಯಕರಾದ ಪುರುಷೋತ್ತಮ್ ಮತ್ತು ಹಂಸಿನಿ ಎಸ್.ಕುಮಾರ್ ಅವರಿಂದ ಭಕ್ತಿಗೀತೆಗಳ ಕಾರ್ಯಕ್ರಮ, ಸ್ಥಳ: ಶ್ರೀರಾಮ ಮಂದಿರ, ಜಯನಗರ, ಸಂಜೆ 6.30ರಿಂದ.

ಆರೋಗ್ಯ, ಶೈಕ್ಷಣಿಕ ಧಾಮ 'ಚಾಮರಾಜ' ಕದನ ಕುತೂಹಲ

●ಎಸ್.ಬಿ.ದೇವರಾಜ



ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ರಚನೆಯಾದಾಗಿನಿಂದ ಈವರೆಗೂ ಚುನಾವಣೆಗಳಲ್ಲಿ ಒಕ್ಕಲಿಗ ಸಮುದಾಯದವರೇ ಶಾಸಕರಾಗಿ ಆಯ್ಕೆಯಾಗಿರುವುದು ವಿಶೇಷ. ಜನತಾ ಪರಿವಾರ, ಬಿಜೆಪಿ ಹಾಗೂ ಕಾಂಗ್ರೆಸ್ ಪಕ್ಷಗಳ ಅಭ್ಯರ್ಥಿಗಳೂ ಆಯ್ಕೆಯಾಗಿದ್ದು, ಅದರಲ್ಲಿ ಬಿಜೆಪಿ ಮೇಲುಗೈ ಸಾಧಿಸಿಕೊಂಡು ಬಂದಿದೆ. ಚಾಮರಾಜ ವಿಧಾನಸಭಾ ಕ್ಷೇತ್ರ 1978ರಲ್ಲಿ ರಚನೆಯಾಗಿದ್ದು ಈವರೆಗೆ 10 ಸಾರ್ವತ್ರಿಕ ಚುನಾವಣೆ ಹಾಗೂ ಎರಡು ಉಪಚುನಾವಣೆಗಳು ನಡೆದಿವೆ. ನಗರ ಪ್ರದೇಶದಲ್ಲಿದ್ದರೂ ಗ್ರಾಮೀಣ ಸೊಗಡು ಉಳಿಸಿಕೊಂಡಿರುವ ಪ್ರದೇಶಗಳು, ಹೈಟೆಕ್ ಆಗಿ ಅಭಿವೃದ್ಧಿ ಹೊಂದಿರುವ ಬಡಾವಣೆಗಳು, ಸ್ಲಂಗಳು ಹೀಗೆ ಭೌಗೋಳಿಕವಾಗಿಯೂ ವಿಶೇಷವಾಗಿದೆ. ಈ ಕ್ಷೇತ್ರದಲ್ಲಿ ಒಕ್ಕಲಿಗರ ಸಂಖ್ಯೆ ಹೆಚ್ಚಾಗಿದ್ದು, ಬ್ರಾಹ್ಮಣರು, ವೀರಶೈವ ಲಿಂಗಾಯತರು, ಪರಿಶಿಷ್ಟರು, ಕುರುಬರು, ಮುಸ್ಲಿಮರು, ಕ್ರಿಶ್ಚಿಯನ್ನರು, ವಿಶ್ವಕರ್ಮ, ಹೀಗೆ ಎಲ್ಲಾ ಧರ್ಮ ಹಾಗೂ ಜಾತಿಯ ಮತದಾರರೂ ಇದ್ದಾರೆ. ಆದರೆ ಒಕ್ಕಲಿಗರ ಪ್ರಾಬಲ್ಯ ಹೆಚ್ಚಾಗಿರುವುದರಿಂದ ಎಲ್ಲಾ ರಾಜಕೀಯ ಪಕ್ಷಗಳೂ ಅದೇ ಸಮುದಾಯದವರನ್ನೇ ಕಣಕ್ಕಿಳಿಸುವ ಪರಿಪಾಠ ಮುಂದುವರೆಸಿಕೊಂಡು ಬಂದಿವೆ. ಒಂದೇ ಸಮುದಾಯದವರು ಸೆಣಸಾಡುವುದರಿಂದ ಗೆಲುವಿಗೆ ಕಸರತ್ತು ನಡೆಸಬೇಕಿರುವುದು ಅಭ್ಯರ್ಥಿಗಳಿಗೆ ಅನಿವಾರ್ಯ.

ಭಾರೀ ಪೈಪೋಟಿ ನಡೆದಿತ್ತು: 2018ರ ಸಾರ್ವತ್ರಿಕ ಚುನಾವಣೆಯಲ್ಲಿ ಚಾಮರಾಜ ಕ್ಷೇತ್ರದಲ್ಲಿ ಭಾರೀ ಪೈಪೋಟಿ ನಡೆದಿತ್ತು. ಆಗ ಶಾಸಕರಾಗಿದ್ದ ವಾಸು ಮತ್ತೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಜೆಡಿಎಸ್, ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್.ರಂಗಪ್ಪ ಅವರಿಗೆ ಟಿಕೆಟ್ ನೀಡಿತ್ತು. ಪರಿಣಾಮ ಪ್ರಬಲ ಜೆಡಿಎಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಕೆ.ಹರೀಶ್‌ಗೌಡರು ಬಂಡಾಯವೆದ್ದು, ಪಕ್ಷೇತರರಾಗಿ ಸ್ಪರ್ಧಿಸಿದ್ದರು. ಇನ್ನು ಪಾಲಿಕೆ ಸದಸ್ಯರಾಗಿ, ಮುಡಾ ಅಧ್ಯಕ್ಷರಾಗಿ ಕೆಲಸ ಮಾಡಿದ್ದ ಎಲ್.ನಾಗೇಂದ್ರ ಅವರನ್ನು ಬಿಜೆಪಿ ಅಂತಿಮ ಕ್ಷಣದಲ್ಲಿ ಸ್ಪರ್ಧೆಗಿಳಿಸಿತ್ತು. ನಾಲ್ವರ ಸೆಣಸಾಟದಲ್ಲಿ ಅಂತಿಮವಾಗಿ ಬಿಜೆಪಿ ಅಭ್ಯರ್ಥಿ ಎಲ್.ನಾಗೇಂದ್ರ 51,683 ಮತಗಳನ್ನು ಪಡೆದು ಕಾಂಗ್ರೆಸ್ ಅಭ್ಯರ್ಥಿ ವಾಸು(36,747 ಮತ) ವಿರುದ್ಧ 14,936 ಮತಗಳ ಅಂತರದ ಗೆಲುವು ದಾಖಲಿಸಿದರು. ಜೆಡಿಎಸ್ ಅಭ್ಯರ್ಥಿ ಪ್ರೊ.ಕೆ.ಎಸ್.ರಂಗಪ್ಪ 27,284 ಹಾಗೂ ಪಕ್ಷೇತರ ಅಭ್ಯರ್ಥಿಯಾಗಿದ್ದ ಕೆ.ಹರೀಶ್ ಗೌಡ 21,282 ಮತ ಪಡೆದುಕೊಂಡರು.

ಘಟಾನುಘಟಿಗಳ ಅಖಾಡವಿದು: ಚಾಮರಾಜ ವಿಧಾನಸಭಾ ಕ್ಷೇತ್ರ ಘಟಾನುಘಟಿಗಳ ಅಖಾಡವೆಂದೇ ಪ್ರಸಿದ್ಧವಾಗಿದೆ. ಮೈಸೂರು ತಾಲೂಕು ಕ್ಷೇತ್ರದಿಂದ ಶಾಸಕರಾಗಿ ಎಸ್.ನಿಜಲಿಂಗಪ್ಪ ಹಾಗೂ ವೀರೇಂದ್ರ ಪಾಟೀಲ್ ಸಂಪುಟದಲ್ಲಿ ಸಚಿವರಾಗಿ ಕೆಲಸ ಮಾಡಿದ್ದ ಕೆ.ಪುಟ್ಟಸ್ವಾಮಿ, 1978ರಲ್ಲಿ ಚಾಮರಾಜ ಕ್ಷೇತ್ರದ ಮೊದಲ ಚುನಾವಣೆಯಲ್ಲಿ ಸ್ಪರ್ಧಿಸಿ ಆಯ್ಕೆಯಾದರು. ಈ ಮೂಲಕ ಚಾಮುಂಡೇಶ್ವರಿ ಹಾಗೂ ಚಾಮರಾಜ ಕ್ಷೇತ್ರಗಳ ಪ್ರಥಮ ಶಾಸಕ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ಆದರೆ ಚಾಮರಾಜ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾದ ಕೆಲವು ತಿಂಗಳಲ್ಲಿ ಕೆ.ಪುಟ್ಟಸ್ವಾಮಿ ಅವರು ನಿಧನರಾದ ಹಿನ್ನೆಲೆಯಲ್ಲಿ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ಬಿ.ಎನ್.ಕೆಂಗೇಗೌಡ ಶಾಸಕರಾಗಿ ಆಯ್ಕೆಯಾದರು. 1983ರಲ್ಲಿ ಜನತಾಪಕ್ಷದ ಕೆಂಪೀರೇಗೌಡ, 1985ರಲ್ಲಿ ಅದೇ ಪಕ್ಷದ ಎಚ್.ಕೆಂಪೇಗೌಡ ಗೆದ್ದರು. ಆದರೆ ಕೆಂಪೇಗೌಡರ ನಿಧನದಿಂದ 1986ರಲ್ಲಿ ಉಪ ಚುನಾವಣೆ ನಡೆದಾಗ ಅದೇ ಪಕ್ಷದ ಪ್ರೊ.ಪಿ.ಎಂ.ಚಿಕ್ಕಬೋರಯ್ಯನವರು ಶಾಸಕರಾದರು. ನಂತರದಲ್ಲಿ ಕಾಂಗ್ರೆಸ್‌ನಿಂದ ಕೆ.ಹರ್ಷಕುಮಾರ್ ಗೌಡ, ಬಿಜೆಪಿಯಿಂದ ಹೆಚ್.ಎಸ್.ಶಂಕರಲಿಂಗೇಗೌಡ, ಕಾಂಗ್ರೆಸ್‌ನ ವಾಸು ಹಾಗೂ ಬಿಜೆಪಿಯ ಎಲ್.ನಾಗೇಂದ್ರ ಶಾಸಕರಾಗಿ ಆಯ್ಕೆಯಾಗಿದ್ದಾರೆ.

ವರ್ಷ	ಗೆದ್ದವರು	ಪಕ್ಷ	ಪಡೆದ ಮತ
1978	ಕೆ.ಪುಟ್ಟಸ್ವಾಮಿ	ಜನತಾ ಪಕ್ಷ	24,524
1978(ಉ.ಚು)	ಬಿ.ಎನ್.ಕೆಂಗೇಗೌಡ	ಕಾಂಗ್ರೆಸ್(ಐ)	20,234
1983	ಹೆಚ್.ಕೆಂಪೇಗೌಡ	ಜನತಾ ಪಕ್ಷ	23,967
1985	ಕೆ.ಕೆಂಪೀರೇಗೌಡ	ಜನತಾ ಪಕ್ಷ	32,077
1986(ಉ.ಚು)	ಪಿ.ಎಂ.ಚಿಕ್ಕಬೋರಯ್ಯ	ಜನತಾ ಪಕ್ಷ	25,583
1989	ಕೆ.ಹರ್ಷಕುಮಾರ್ ಗೌಡ	ಕಾಂಗ್ರೆಸ್	31,514
1994	ಹೆಚ್.ಎಸ್.ಶಂಕರಲಿಂಗೇಗೌಡ	ಬಿಜೆಪಿ	32,620
1999	ಹೆಚ್.ಎಸ್.ಶಂಕರಲಿಂಗೇಗೌಡ	ಬಿಜೆಪಿ	48,733
2004	ಹೆಚ್.ಎಸ್.ಶಂಕರಲಿಂಗೇಗೌಡ	ಬಿಜೆಪಿ	38,193
2008	ಹೆಚ್.ಎಸ್.ಶಂಕರಲಿಂಗೇಗೌಡ	ಬಿಜೆಪಿ	44,243
2013	ವಾಸು	ಕಾಂಗ್ರೆಸ್	41,930
2018	ಎಲ್.ನಾಗೇಂದ್ರ	ಬಿಜೆಪಿ	51,683

ಎಲ್ಲಾ ಪಕ್ಷದಲ್ಲೂ ಆಕಾಂಕ್ಷಿಗಳ ದೊಡ್ಡ ಪಟ್ಟಿ

2023ರ ಚುನಾವಣೆಗೆ ಅಖಾಡ ಸಿದ್ಧವಾಗಿದೆ. ಆದರೆ ಈವರೆಗೆ ಚಾಮರಾಜ ಕ್ಷೇತ್ರದಲ್ಲಿ ಯಾವ ಪಕ್ಷದ ಅಭ್ಯರ್ಥಿಯನ್ನೂ ಘೋಷಿಸಿಲ್ಲ. ಪುನರಾಯ್ಕೆ ಬಯಸಿರುವ ಹಾಲಿ ಶಾಸಕ ಎಲ್.ನಾಗೇಂದ್ರ, ಬಿಜೆಪಿ ಮಾಜಿ ನಗರಾಧ್ಯಕ್ಷ ಡಾ.ಮಂಜುನಾಥ್, ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ದಿವಂಗತ ಹೆಚ್.ಎಸ್.ಶಂಕರಲಿಂಗೇಗೌಡರ ಪುತ್ರ ಪಾಲಿಕೆ ಮಾಜಿ ಸದಸ್ಯ ನಂದೀಶ್ ಪ್ರೀತಂ, ಮುಖಂಡ ಜಯಪ್ರಕಾಶ್, ಮುಡಾ ಮಾಜಿ ಅಧ್ಯಕ್ಷ ಸಿ.ಬಸವೇಗೌಡ ಮತ್ತಿತರರು ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಪ್ರೊ. ಕೆ.ಎಸ್.ರಂಗಪ್ಪ ಚುನಾವಣಾ ರಾಜಕಾರಣದಲ್ಲಿ ಆಸಕ್ತಿ ತೋರುತ್ತಿಲ್ಲ. ಜೆಡಿಎಸ್ ಟಿಕೆಟ್‌ಗಾಗಿ ನಗರ ಪಾಲಿಕೆ ಸದಸ್ಯ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಕೆ.ವಿ.ಶ್ರೀಧರ್, ನಗರಪಾಲಿಕೆ ಮಾಜಿ ಸದಸ್ಯ ಸಿ.ಮಹದೇಶ್, ಪಾಲಿಕೆ ಸದಸ್ಯರಾದ ಎಸ್‌ಬಿಎಂ ಮಂಜು, ಪ್ರೇಮಾ ಶಂಕರೇಗೌಡ ಮತ್ತಿತರರು ಪ್ರಯತ್ನ ನಡೆಸಿದ್ದಾರೆ. ಆದರೆ ಕ್ಷೇತ್ರದ ಮಾಜಿ ಶಾಸಕರಾದ ದಿವಂಗತ ಹೆಚ್.ಕೆಂಪೇಗೌಡರ ಪುತ್ರ ಉದ್ಯಮಿ ರಮೇಶ್‌ಗೆ ಜೆಡಿಎಸ್ ಟಿಕೆಟ್ ಖಚಿತ ಎಂದು ಹೇಳಲಾಗುತ್ತಿದೆ. ಇನ್ನು ಮಾಜಿ ಶಾಸಕ ವಾಸು ಹಾಗೂ ಕಳೆದ ಬಾರಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಜಿತರಾಗಿದ್ದ ಕೆ.ಹರೀಶ್ ಗೌಡ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಆಮ್ ಆದ್ಮಿ ಪಕ್ಷದ ಮಾಳವಿಕಾ ಗುಬ್ಬಿವಾಣಿ ಮತ್ತೊಮ್ಮೆ ಸ್ಪರ್ಧಿಸುವ ಸಾಧ್ಯತೆ ಹೆಚ್ಚಿದೆ.

2023ರ ಮತದಾರರ ವಿವರ

ಪುರುಷರು	1,19,701
ಮಹಿಳೆಯರು	1,23,030
ಇತರೆ	29
ಒಟ್ಟು	2,42,760
ಇವರಲ್ಲಿ	
ವಿಕಲಚೇತನರು	2374
80+ ಹಿರಿಯರು	9833
ಮತಗಟ್ಟೆಗಳು	244
2018ರ ಮತ ಚಲಾವಣೆ	
ಒಟ್ಟು ಮತ	235647
ಚಲಾವಣೆ	139455
ಶೇಕಡ	59.17

ಶೈಕ್ಷಣಿಕ, ಆರೋಗ್ಯ ಕೇಂದ್ರಗಳ ವಲಯವಿದು...

ಚಾಮರಾಜ ವಿಧಾನಸಭಾ ಕ್ಷೇತ್ರ ಶೈಕ್ಷಣಿಕ ಹಾಗೂ ಆರೋಗ್ಯ ಕೇಂದ್ರಗಳ ತಾಣವಾಗಿದೆ. ರಾಜ್ಯದ ಮತ್ಯಾವ ಕ್ಷೇತ್ರದಲ್ಲೂ ಈ ವಿಶೇಷ ಕಾಣುವುದು ಕಷ್ಟಸಾಧ್ಯ. ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮಹಾರಾಜ, ಯುವರಾಜ, ಮಹಾರಾಣಿ ಕಾಲೇಜು, ಚರಕ ಸರ್ಕಾರಿ ಆಯುರ್ವೇದ ಸ್ನಾತಕೋತ್ತರ ಕಾಲೇಜು ಸೇರಿದಂತೆ ಸರ್ಕಾರಿ ಹಾಗೂ ಪ್ರತಿಷ್ಠಿತ ಖಾಸಗಿ ಶಿಕ್ಷಣ ಸಂಸ್ಥೆಗಳು ಈ ಕ್ಷೇತ್ರದಲ್ಲಿವೆ. ಕೆ.ಆರ್.ಆಸ್ಪತ್ರೆ, ಆಯುರ್ವೇದ ಆಸ್ಪತ್ರೆ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಇಎಸ್‌ಐ ಆಸ್ಪತ್ರೆ, ಪಿಕೆಟಿಬಿ, ಜಯದೇವ ಹೃದ್ರೋಗ ಆಸ್ಪತ್ರೆ, ನೂತನ ಜಿಲ್ಲಾಸ್ಪತ್ರೆ, ಸೂಪರ್‌ಸ್ಪೆಷಾಲಿಟಿ ಆಸ್ಪತ್ರೆ, ಟ್ರಾಮಾ ಕೇರ್ ಸೆಂಟರ್, ಪಂಚಕರ್ಮ ಆಸ್ಪತ್ರೆ ಸೇರಿದಂತೆ ಹಲವು ಸರ್ಕಾರಿ ಹಾಗೂ ಖಾಸಗಿ ಸುಸಜ್ಜಿತ ಆಸ್ಪತ್ರೆಗಳಿವೆ. ಅಲ್ಲದೆ ರೈಲ್ವೆ ನಿಲ್ದಾಣ, ಸಿಎಫ್‌ಟಿಆರ್ ಸೇರಿದಂತೆ ಹಲವು ಸಂಸ್ಥೆಗಳನ್ನೂ ಚಾಮರಾಜ ಕ್ಷೇತ್ರ ಒಳಗೊಂಡಿದೆ.

ವಿಶೇಷಗಳಿಗೆ ಸಾಕ್ಷಿ: 1989ರ ವೇಳೆಗೆ ಜನತಾ ಪಕ್ಷ ಇಬ್ಭಾಗವಾದಾಗ ಮಾಜಿ ಸಚಿವ ಕೆ.ಪುಟ್ಟಸ್ವಾಮಿ ಅವರ ಪುತ್ರ ಹಾಗೂ ಮೈಸೂರು ಪಾಲಿಕೆ ಪ್ರಥಮ ಮೇಯರ್ ಪಿ.ವಿಶ್ವನಾಥ್, ಸಮಾಜವಾದಿ ಜನತಾ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದರು. ಬಂಡಾಯ ಅಭ್ಯರ್ಥಿಯಾಗಿ ಹೆಚ್.ಎಸ್.ಶಂಕರಲಿಂಗೇಗೌಡರು ಹಾಗೂ ಜನತಾದಳದ ಅಭ್ಯರ್ಥಿಯಾಗಿ ಸಿ.ಬಸವೇಗೌಡ ಸ್ಪರ್ಧಿಸಿದ್ದರು. ಪರಿಣಾಮ ಜನತಾ ಪರಿವಾರದ ಮತ ವಿಭಜನೆಯಿಂದ ಕಾಂಗ್ರೆಸ್‌ನ ಕೆ.ಹರ್ಷಕುಮಾರ್ ಗೌಡ ಶಾಸಕರಾಗಿ ಆಯ್ಕೆಯಾದರು. 1994ರ ಚುನಾವಣೆಯಲ್ಲಿ ಜನತಾದಳದ ಅಧಿಕೃತ ಅಭ್ಯರ್ಥಿ ಸಿ.ಬಸವೇಗೌಡ, ಬಂಡಾಯ ಅಭ್ಯರ್ಥಿ ಡಿ.ಮಾದೇಗೌಡರ ಹಣಾಹಣಿ ನಡುವೆ ಬಿಜೆಪಿ ಅಭ್ಯರ್ಥಿ ಹೆಚ್.ಎಸ್.ಶಂಕರಲಿಂಗೇಗೌಡರು ಗೆಲುವು ಪಡೆದರು. 1999ರಲ್ಲಿ ಕಾಂಗ್ರೆಸ್‌ನಿಂದ ವಾಸು, ಜೆಡಿಎಸ್‌ನಿಂದ ಡಿ.ಧ್ರುವಕುಮಾರ್, ಬಿಜೆಪಿಯಿಂದ ಶಂಕರಲಿಂಗೇಗೌಡರು ಸ್ಪರ್ಧಿಸಿದ್ದರು. 2004ರಲ್ಲಿ ವಾಸು ಅವರಿಗೆ ಕಾಂಗ್ರೆಸ್ ಟಿಕೆಟ್ ತಪ್ಪಿ ಸಂದೇಶ್ ನಾಗರಾಜ್, ಜೆಡಿಎಸ್‌ನಿಂದ ಕೆಂಪೀರೇಗೌಡರ ಪುತ್ರ ಕೆ.ಉಮಾಶಂಕರ್ ಹಾಗೂ ಬಿಜೆಪಿಯಿಂದ ಶಂಕರಲಿಂಗೇಗೌಡ ಅಖಾಡಕ್ಕಿಳಿದಿದ್ದರು. 2008ರಲ್ಲಿ ಕಾಂಗ್ರೆಸ್‌ನಿಂದ ವಾಸು, ಜೆಡಿಎಸ್‌ನಿಂದ ಎಂ.ಪ್ರತಾಪ್, ಬಿಜೆಪಿಯಿಂದ ಶಂಕರಲಿಂಗೇಗೌಡ ಸ್ಪರ್ಧಿಸಿದ್ದರು. ಈ ಮೂರು ಚುನಾವಣೆಗಳಲ್ಲೂ ಬಿಜೆಪಿ ಅಭ್ಯರ್ಥಿ ಶಂಕರಲಿಂಗೇಗೌಡರು ಆಯ್ಕೆಯಾದರು. ಇದರೊಂದಿಗೆ ಅವರು ಸತತ ನಾಲ್ಕು ಬಾರಿ ಶಾಸಕರಾಗುವ ಮೂಲಕ ಕ್ಷೇತ್ರದ ರಾಜಕೀಯ ಇತಿಹಾಸದಲ್ಲಿ ದಾಖಲೆ ಬರೆದರು.

ಸತತ ಗೆಲುವಿಗೆ ಬ್ರೇಕ್: ನಾಲ್ಕು ಬಾರಿ ಶಾಸಕರಾಗಿದ್ದ ಶಂಕರಲಿಂಗೇಗೌಡರಿಗೆ ಸಚಿವ ಸ್ಥಾನ ಮಾತ್ರ ಒಲಿದಿರಲಿಲ್ಲ. 2006ರ ಜೆಡಿಎಸ್–ಬಿಜೆಪಿ ಸಮ್ಮಿಶ್ರ ಸರ್ಕಾರದಲ್ಲೂ ನಿರಾಶೆಯಾಗಿತ್ತು. 2008ರಲ್ಲಿ ದಕ್ಷಿಣ ಭಾರತದಲ್ಲೇ ಪ್ರಥಮವಾಗಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚನೆಯಾದಾಗಲೂ ಶಂಕರಲಿಂಗೇಗೌಡರಿಗೆ ಸಚಿವ ಸ್ಥಾನ ನೀಡಲಿಲ್ಲ. ಇದರಿಂದ ಹತಾಶರಾದ ಅವರು ನಂತರ ಜೆಡಿಎಸ್‌ಗೆ ಸೇರ್ಪಡೆಯಾಗಿ 2013ರ ಚುನಾವಣೆಯಲ್ಲಿ ಆ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದರಾದರೂ ಐದನೇ ಗೆಲುವು ಸಾಧ್ಯವಾಗಲಿಲ್ಲ. ಆ ಚುನಾವಣೆಯಲ್ಲಿ ಎರಡು ಬಾರಿ ಸೋತಿದ್ದ ವಾಸುಗೆ ಗೆಲುವಾಯಿತು. ಇವರನ್ನು 2018ರಲ್ಲಿ ಬಿಜೆಪಿ ನಾಗೇಂದ್ರ ಮಣಿಸಿದರು.

ಪರಪ್ಪನ ಅಗ್ರಹಾರ ಜೈಲು ಪಾಲಾದ ಮಾಡಾಳ್

ಬೆಂಗಳೂರು: ಲಂಚ ಪ್ರಕರಣದ ಪ್ರಮುಖ ಆರೋಪಿ, ಕಳೆದ ವಾರ ಬಂಧನಕ್ಕೊಳಗಾಗಿದ್ದ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಏ.11ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶ ನೀಡಿದೆ. ವಿರೂಪಾಕ್ಷಪ್ಪ ಅವರನ್ನು ಮಾ.28ರಂದು ನ್ಯಾಯಾಲಯವು ಲೋಕಾಯುಕ್ತ ವಶಕ್ಕೆ ಒಪ್ಪಿಸಿ ಆದೇಶ ನೀಡಿತ್ತು. ಲೋಕಾಯುಕ್ತ ಕಸ್ಟಡಿ ಅಂತ್ಯಗೊಂಡ ಹಿನ್ನೆಲೆಯಲ್ಲಿ ಅವರನ್ನು ಶನಿವಾರ ಕೋರ್ಟ್‌ಗೆ ಹಾಜರುಪಡಿಸಲಾಗಿದೆ. ಇದೇ ವೇಳೆ ನ್ಯಾಯಾಲಯವು ಅವರನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸುವಂತೆ ಆದೇಶ ನೀಡಿದೆ. ಏಪ್ರಿಲ್ 6ರಂದು ಜಾಮೀನು ಅರ್ಜಿ ವಿಚಾರಣೆ ನಡೆಸುವುದಾಗಿ ನ್ಯಾಯಾಲಯ ತಿಳಿಸಿದೆ. ಜತೆಗೆ, ಅದೇ ದಿನ ಆಕ್ಷೇಪಣೆ ಅರ್ಜಿ ಸಲ್ಲಿಸುವಂತೆ ಲೋಕಾಯುಕ್ತ ಪೊಲೀಸರಿಗೆ ಸೂಚಿಸಿದೆ.



ಪರಪ್ಪನ ಅಗ್ರಹಾರ ಜೈಲಿಗೆ ಶಿಫ್ಟ್: ವಿರೂಪಾಕ್ಷಪ್ಪ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಲಯ ಆದೇಶ ನೀಡಿದ ಬೆನ್ನಲ್ಲೇ ತಮಗಿರುವ ಆರೋಗ್ಯ ಸಮಸ್ಯೆಗಳ ಬಗ್ಗೆ ವಿರೂಪಾಕ್ಷಪ್ಪ ಅಧಿಕಾರಿಗಳ ಬಳಿ ಮಾಹಿತಿ ನೀಡಿದ್ದಾರೆ. ಈ ಮಧ್ಯೆ, ಅವರನ್ನು ಲೋಕಾಯುಕ್ತ ಪೊಲೀಸರು ಪರಪ್ಪನ ಅಗ್ರಹಾರಕ್ಕೆ ಕರೆದೊಯ್ದಿದ್ದಾರೆ.

ನನ್ನ ವರ್ಚಸ್ಸು ಹಾಳುಗೆಡವಲು ಸುಪಾರಿ ನೀಡಲಾಗಿದೆ



ಭೋಪಾಲ್: ನನ್ನ ವರ್ಚಸ್ಸನ್ನು ಹಾಳು ಮಾಡುವ ಸಲುವಾಗಿ ಕೆಲವರು ದೇಶದ ಒಳಗೆ ಮತ್ತು ಹೊರಗಿನ ಜನರೊಂದಿಗೆ ಶಾಮೀಲಾಗಿದ್ದಾರೆ ಹಾಗೂ ಇದಕ್ಕಾಗಿ ಕೆಲವರಿಗೆ ಸುಪಾರಿಯನ್ನೂ ನೀಡಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಇಂದಿಲ್ಲಿ ಆರೋಪಿಸಿದ್ದಾರೆ.

ಇಲ್ಲಿನ ರಾಣಿ ಕಮಲಾಪತಿ ರೈಲ್ವೆ ನಿಲ್ದಾಣದಲ್ಲಿ ಭೋಪಾಲ್–ದೆಹಲಿ ಮಾರ್ಗದ ವಂದೇಭಾರತ್ ಎಕ್ಸ್‌ಪ್ರೆಸ್ ರೈಲು ಸಂಚಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಹಿಂದಿದ್ದ ಸರ್ಕಾರಗಳು ವೋಟ್ ಬ್ಯಾಂಕ್ ಓಲೈಕೆಯಲ್ಲಿ ನಿರತವಾಗಿದ್ದವು. ಆದರೆ, ನಾವು ಜನರನ್ನು ಸಂತೃಪ್ತಗೊಳಿಸಲು ಕಾರ್ಯನಿರತವಾಗಿದ್ದೇವೆ ಎಂದರು. ಅಂದಿನ ಸರ್ಕಾರಗಳು ಒಂದೇ ಕುಟುಂಬವನ್ನು ದೇಶದ ಮೊದಲ ಕುಟುಂಬವೆಂದು ಪರಿಗಣಿಸಿವೆ. ಆದರೆ, ಬಡ ಮತ್ತು ಮಧ್ಯಮ ವರ್ಗವನ್ನು ಕಡೆಗಣಿಸಿವೆ. ರೈಲ್ವೆಯು ಇದಕ್ಕೆ ಜೀವಂತ ಉದಾಹರಣೆಯಾಗಿದೆ ಎಂದೂ ಹೇಳಿದ್ದಾರೆ.

ಏಪ್ರಿಲ್–ಜೂನ್ ಅವಧಿಯಲ್ಲಿ ಸಾಮಾನ್ಯಕ್ಕಿಂತ ಗರಿಷ್ಠ ತಾಪಮಾನ: ಕಾಡಲಿದೆ ಬಿಸಿಲ ಧಗೆ

ನವದೆಹಲಿ, ಏ.1– ವಾಯುವ್ಯ ಮತ್ತು ಪರ್ಯಾಯ ದ್ವೀಪ ಪ್ರದೇಶಗಳನ್ನು ಹೊರತುಪಡಿಸಿದರೆ ಭಾರತದ ಬಹುತೇಕ ಎಲ್ಲಾ ಪ್ರದೇಶಗಳನ್ನೂ ಏಪ್ರಿಲ್–ಜೂನ್‌ವರೆಗೆ ಬಿಸಿಲ ಧಗೆ ಸುಡಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಏಪ್ರಿಲ್– ಜೂನ್ ಅವಧಿಯಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಗರಿಷ್ಠ ತಾಪಮಾನ ವರದಿಯಾಗುವ ನಿರೀಕ್ಷೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಈ ಅವಧಿಯಲ್ಲಿ ಭಾರತದ ಮಧ್ಯಭಾಗ, ಪೂರ್ವ ಭಾಗಗಳಲ್ಲಿ ಹೆಚ್ಚಿನ ತಾಪಮಾನ ಹಾಗೂ ಉಷ್ಣಹವೆ ದಾಖಲಾಗಲಿದೆ. ಪ್ರಮುಖವಾಗಿ ಬಿಹಾರ, ಜಾರ್ಖಂಡ್, ಉತ್ತರ ಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ, ಚತ್ತೀಸ್‌ಗಢ, ಮಹಾರಾಷ್ಟ್ರ, ಗುಜರಾತ್, ಪಂಜಾಬ್, ಹರ್ಯಾಣಗಳನ್ನು ಉಷ್ಣಹವೆ ಹೆಚ್ಚು ಬಾಧಿಸಲಿದೆ ಎಂದು ಐಎಂಡಿ ನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ಹೇಳಿದ್ದಾರೆ.

ಏಪ್ರಿಲ್‌ನಲ್ಲಿ ಸಾಮಾನ್ಯವಾದ ಮಳೆಯಾಗಲಿದೆ ಎಂದು ಐಎಂಡಿ ಹೇಳಿದೆ. ಈ ಅವಧಿಯಲ್ಲಿ ಪೂರ್ವ ಹಾಗೂ ಈಶಾನ್ಯ ಭಾರತಗಳಲ್ಲಿ ವಾಡಿಕೆಗಿಂತಲೂ ಕಡಿಮೆ ಮಳೆಯಾಗಲಿದೆ ಎಂದು ಐಎಂಡಿ ಹೇಳಿದೆ.

ಮಾದರಿ ನೀತಿ ಸಂಹಿತೆ ಜಾರಿಯಾದರೂ ಸಚಿವರ ಪಿಎ, ಕಾರ್ಯದರ್ಶಿಗಳಿಂದ ಸರ್ಕಾರಿ ಸೌಲಭ್ಯಗಳ ಬಳಕೆ

ಬೆಂಗಳೂರು,ಏ.1–ರಾಜ್ಯ ವಿಧಾನಸಭೆಗೆ ಚುನಾವಣೆ ಘೋಷಣೆಯಾದ ನಂತರ ಮಾದರಿ ನೀತಿ ಸಂಹಿತೆ ಮಾ.29ರಂದು ಜಾರಿಗೆ ಬಂದಿದ್ದು, ಮುಖ್ಯಮಂತ್ರಿ ಹಾಗೂ ಸಚಿವರು ತಮ್ಮ ವಾಹನಗಳನ್ನು ಹಿಂತಿರುಗಿಸಿ ತಮ್ಮ ಖಾಸಗಿ ವಾಹನಗಳನ್ನು ಬಳಸುತ್ತಿದ್ದಾರೆ.

ಸರ್ಕಾರಿ ಅತಿಥಿ ಗೃಹ ಬಳಸುತ್ತಿದ್ದವರು ಸ್ಥಳಾಂತರಗೊಂಡಿದ್ದು, ಇನ್ನೂ ಹಲವು ಸಚಿವರ ಪರ್ಸನಲ್ ಸೆಕ್ರೆಟರಿಗಳು ಹಾಗೂ ವಿವಿಧ ಸಚಿವರಿಗೆ ವಿಶೇಷ ಕರ್ತವ್ಯದಲ್ಲಿರುವ ಅಧಿಕಾರಿಗಳು ಈ ಅಧಿಕೃತ ವಾಹನಗಳನ್ನು ಬಳಸುತ್ತಿದ್ದಾರೆ. ಈ ವಾಹನಗಳು ನೇರವಾಗಿ ಇಲಾಖೆಗಳಿಂದ ಅಲ್ಲ, ಮಂಡಳಿಗಳು ಮತ್ತು ನಿಗಮಗಳಿಂದ ಬಂದಿದ್ದರಿಂದ ಅವರು ಇನ್ನೂ ಬಳಕೆ ಮಾಡುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಈ ಬಗ್ಗೆ ಮುಖ್ಯ ಕಾರ್ಯ ದರ್ಶಿಗೆ ತಿಳಿಸುತ್ತೇನೆ ಎಂದು ಚುನಾವಣಾ ಆಯೋಗದ ಮುಖ್ಯ ಚುನಾವಣಾಧಿಕಾರಿ ಮನೋಜ್‌ಕುಮಾರ್ ಮೀನಾ ಹೇಳಿದ್ದಾರೆ. ಕೆಲವು ಸಚಿವರೊಂದಿಗೆ ಕೆಲಸ ಮಾಡುವ ಖಾಸಗಿ ಸಹಾಯಕರು ಬುಧವಾರ, ಗುರುವಾರ ಮತ್ತು ಶುಕ್ರವಾರದವರೆಗೆ ಮಂಡಳಿಗಳು ಮತ್ತು ನಿಗಮಗಳ ವಾಹನಗಳನ್ನು ಬಳಸುತ್ತಿದ್ದಾರೆ ಇದು ಸರ್ಕಾರಿ ಯಂತ್ರದ ದುರುಪಯೋಗಕ್ಕೆ ಕಾರಣವಾಗುವುದಿಲ್ಲವೇ ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಾಹನಗಳ ದುರ್ಬಳಕೆಯಾಗದಂತೆ ಚುನಾವಣಾ ಆಯೋಗ ಮತ್ತು ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು ಮತ್ತು ಮಾದರಿ ನೀತಿ ಸಂಹಿತೆಯನ್ನು ಅಕ್ಷರಶಃ ಪಾಲಿಸಬೇಕು ಎಂದು ಹೇಳಿದ್ದಾರೆ.

ಕಳೆದ ಚುನಾವಣೆಯಲ್ಲಿ ಕಡಿಮೆ ಮತದಾನವಾದ ಮತಗಟ್ಟೆಗಳಿಗೆ ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ವಸ್ತ್ರದ್ ಭೇಟಿ

ಮೈಸೂರು, ಏ.1(ಎಸ್‌ಬಿಡಿ)– ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಡಿಮೆ ಮತದಾನವಾಗಿರುವ ಜಿಲ್ಲೆಯ ಕೆಲ ಮತಗಟ್ಟೆಗಳಿಗೆ ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್.ವಸ್ತ್ರದ್ ಶನಿವಾರ ಭೇಟಿ ನೀಡಿ, ಪರಿಶೀಲಿಸಿದರು.



ಕಳೆದ ಚುನಾವಣೆಯಲ್ಲಿ ಕಡಿಮೆ ಮತದಾನವಾಗಿರುವ ಮತಗಟ್ಟೆಗಳಿಗೆ ರಾಜ್ಯ ಸ್ವೀಪ್ ನೋಡಲ್ ಅಧಿಕಾರಿ ಪಿ.ಎಸ್.ವಸ್ತ್ರದ್ ಭೇಟಿ ನೀಡಿ, ಪರಿಶೀಲಿಸಿದರು.

ಮೈಸೂರಿನ ಬನ್ನಿಮಂಟಪ ಹುಡ್ಕೊ ಬಡಾವಣೆ ಹಾಗೂ ಜ್ಯೋತಿನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಾಗೂ ಬೇಸ್ ಕಾಲೇಜಿಗೆ ಮತಗಟ್ಟೆಗಳಿಗೆ ಭೇಟಿ ನೀಡಿದ್ದರು. ನಂತರ ತಾಲೂಕಿನ ಜಯಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸೋಲಿಗರ ಕಾಲೋನಿಗೆ ಭೇಟಿ ನೀಡಿ, ಮತಗಟ್ಟೆ ಕೇಂದ್ರದ ಕಟ್ಟಡದ ಸ್ಥಿತಿ, ಅಲ್ಲಿನ ಕುಡಿಯುವ ನೀರು, ಶೌಚಾಲಯ, ವಿದ್ಯುತ್ ವ್ಯವಸ್ಥೆ ಪರಿಶೀಲಿಸಿದರಲ್ಲದೆ, ಮತದಾರರಿಗೆ ನೆರಳಿನ ಸೌಕರ್ಯ, ರ್‍ಯಾಂಪ್ ವ್ಯವಸ್ಥೆ ಇನ್ನಿತರ ಸಿದ್ಧತೆ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದರು.


ಕಳೆದ 2018ರ ವಿಧಾನಸಭಾ ಚುನಾವಣೆಯಲ್ಲಿ ಕಡಿಮೆ ಮತದಾನವಾಗಿರುವ ಮತಗಟ್ಟೆಗಳಲ್ಲಿ ಮತದಾನ ಹೆಚ್ಚಿಸುವ ನಿಟ್ಟಿನಲ್ಲಿ ಕೈಗೊಂಡಿರುವ ಸ್ವೀಪ್ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆದು, 2023ರ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಮತದಾರರಿಗೆ ಪರಿಣಾಮಕಾರಿಯಾಗಿ ಜಾಗೃತಿ ಮೂಡಿಸಬೇಕು ಎಂದು ಸೂಚನೆ ನೀಡಿದರು. ಸೋಲಿಗರ ಕಾಲೋನಿ ನಿವಾಸಿಗಳೊಂದಿಗೆ ಮಾತನಾಡಿದ ಅವರು, 18 ವರ್ಷ ಮೇಲ್ಪಟ್ಟ ಪ್ರತಿಯೊಬ್ಬರೂ ಕಡ್ಡಾಯವಾಗಿ ಮತ ಚಲಾಯಿಸಬೇಕು. ಮತದಾನದ ಬಗ್ಗೆ ಯಾವುದೇ ರೀತಿಯ ಗೊಂದಲಗಳಿದ್ದರೂ ಸ್ಥಳೀಯ ಅಧಿಕಾರಿಗಳನ್ನು ಸಂಪರ್ಕಿಸಿ ಪರಿಹರಿಸಿಕೊಳ್ಳಬೇಕು. ಇಲ್ಲವೇ '1950'ಗೆ ಕರೆ ಮಾಡಿ ಮತಚಲಾವಣೆ ಸಂಬಂಧ ಸ್ಪಷ್ಟನೆ ಪಡೆಯಬಹುದು ಎಂದು ಸಲಹೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ(ಸಿಇಓ) ಕೆ.ಎಂ.ಗಾಯಿತ್ರಿ, ಉಪ ಕಾರ್ಯದರ್ಶಿ(ಅಭಿವೃದ್ಧಿ) ಡಾ.ಎಂ.ಕೃಷ್ಣರಾಜು, ಸಹಾಯಕ ನಿರ್ದೇಶಕ ವಿಶ್ವನಾಥ್, ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ(ಇಓ) ಎಚ್.ಡಿ.ಗಿರೀಶ್, ಸಹಾಯಕ ನಿರ್ದೇಶಕ ಕೆ.ಎಂ.ರಘುನಾಥ್, ಪಿಡಿಓ ಬಸವಣ್ಣ ಮತ್ತಿತರರ ಅಧಿಕಾರಿಗಳು ಹಾಜರಿದ್ದರು.

ದಾಖಲೆಯಿಲ್ಲದ 28.46 ಲಕ್ಷ ನಗದು, ಅಪಾರ ಮದ್ಯ ವಶ

ಮೈಸೂರು, ಏ.1(ಎಸ್‌ಬಿಡಿ)– ದಿನೇ ದಿನೇ ಚುನಾವಣಾ ಕಾವು ಹೆಚ್ಚುತ್ತಿದ್ದು, ಮೈಸೂರು ಜಿಲ್ಲೆಯಲ್ಲೂ ಹಣ ಹಾಗೂ ಮದ್ಯ ಸಾಗಾಟ ಜೋರಾಗಿದೆ.

ಹೀಗೆ ಸೂಕ್ತ ದಾಖಲೆಯಿಲ್ಲದ 28,46,665 ರೂ. ಹಣವನ್ನು ಸ್ಥಿರ ಕಣ್ಗಾವಲು ತಂಡ(ಎಸ್‌ಎಸ್‌ಟಿ) ಭಾನುವಾರ ವಶಪಡಿಸಿಕೊಂಡು ವಿಚಾರಣೆ ಮುಂದುವರೆಸಿದೆ. ಅಬಕಾರಿ ಹಾಗೂ ಪೊಲೀಸರು ಸುಮಾರು 54 ಸಾವಿರ ಬೆಲೆಯ 142 ಲೀಟರ್ ಮದ್ಯ ವಶಪಡಿಸಿಕೊಂಡಿದ್ದಾರೆ. ಈವರೆಗೆ ಜಿಲ್ಲೆಯಲ್ಲಿ 31,80,165 ರೂ. ಹಣ ಹಾಗೂ 1.25 ಕೋಟಿ ರೂ. ಮೌಲ್ಯದ 23673 ಲೀಟರ್ ಅಪಾರ ಪ್ರಮಾಣದ ಮದ್ಯ ವಶಪಡಿಸಿಕೊಳ್ಳಲಾಗಿದೆ. 162 ಫ್ಲೈಯಿಂಗ್ ಸ್ಕ್ವಾಡ್(ಎಫ್‌ಎಸ್), 149 ಎಸ್‌ಎಸ್‌ಟಿ, ಪೊಲೀಸ್ ಹಾಗೂ ಅಬಕಾರಿ ತಂಡಗಳ ಮೂಲಕ ಕಟ್ಟುನಿಟ್ಟಿನ ತಪಾಸಣೆ ಮುಂದುವರೆದಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದ್ದಾರೆ.

ಎನ್.ಆರ್.ಕ್ಷೇತ್ರ ಇದುವರೆಗೂ 'ಸೇಠ್' ಕೋಟೆ



●ಮೋಹನ್ ಕಾಯಕ

ನರಸಿಂಹರಾಜ(ಎನ್.ಆರ್)ವಿಧಾನಸಭಾ ಕ್ಷೇತ್ರದಲ್ಲಿ ಒಮ್ಮೆ ಮಾತ್ರ ಬಿಜೆಪಿ ಗೆದ್ದಿದ್ದು, ಇದುವರೆಗೂ ಈ ಕ್ಷೇತ್ರ 'ಸೇಠ್' ಕೋಟೆಯಾಗಿದೆ...!

ಮೊದಲ ಸಾರ್ವತ್ರಿಕ ಚುನಾವಣೆ ನಡೆದ 1952ರಿಂದಲೂ ಅಸ್ತಿತ್ವದಲ್ಲಿರುವ ನರಸಿಂಹರಾಜ ಕ್ಷೇತ್ರವನ್ನು ಆರಂಭದಲ್ಲಿ ಮೈಸೂರು ಉತ್ತರ ಕ್ಷೇತ್ರ ಎಂದು ಕರೆಯಲಾಗುತ್ತಿತ್ತು. ಮುಸ್ಲಿಂ ಮತದಾರರೇ ಹೆಚ್ಚಾಗಿರುವ ಕ್ಷೇತ್ರ. ಅಲ್ಲದೆ ಒಂದು ಉಪಚುನಾವಣೆ ಸೇರಿದಂತೆ ನಡೆದಿರುವ 16 ಚುನಾವಣೆಗಳಲ್ಲಿ 13 ಬಾರಿ ಮುಸ್ಲಿಮ್ ಅಭ್ಯರ್ಥಿಗಳೇ ಪ್ರಾಬಲ್ಯ ಸಾಧಿಸಿದ್ದಾರೆ.

ಮೊದಲ ಚುನಾವಣೆಯಲ್ಲಿ ಕಾಂಗ್ರೆಸ್‌ನ ಟಿ.ಮರಿಯಪ್ಪ ಆಯ್ಕೆಯಾದರೆ, ಪಕ್ಷೇತರ ಅಭ್ಯರ್ಥಿಯಾಗಿದ್ದ ಮಹಮದ್ ಷರೀಫ್ ಪ್ರಬಲ ಪೈಪೋಟಿ ನೀಡಿದ್ದರು. 1957ರಲ್ಲಿ ಪಕ್ಷೇತರ ಅಭ್ಯರ್ಥಿ ಎ.ಮಹಮದ್ ಸೇಠ್ ಆಯ್ಕೆಯಾದರೆ, ಕಾಂಗ್ರೆಸ್‌ನ ಅಹಮದ್ ಅಲಿಖಾನ್ ಪ್ರಬಲ ಪೈಪೋಟಿ ನೀಡಿದ್ದರು. ಪಿಎಸ್ಪಿ(ಪ್ರಜಾ ಸಮಾಜವಾದಿ ಪಕ್ಷ)ಯ ಬಿ.ಕೆ.ಪುಟ್ಟಯ್ಯ, ಸಿಪಿಐ(ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ)ನ ಎಂ.ಎನ್.ಉಗ್ರಪ್ಪ ಕಣದಲ್ಲಿದ್ದರು. 1962ರಲ್ಲಿ ಪಿಎಸ್ಪಿಯ ಬಿ.ಕೆ.ಪುಟ್ಟಯ್ಯ, ಪಕ್ಷೇತರ ಅಭ್ಯರ್ಥಿ ಮಹಮದ್ ಸೇಠ್ ಅವರನ್ನು ಸೋಲಿಸಿದ್ದರು.

ಹೆಸರು ಬದಲಾವಣೆ: 1967ರ ವೇಳೆಗೆ ಮೈಸೂರು ಉತ್ತರ ಕ್ಷೇತ್ರ ಎಂಬುದರ ಬದಲು ನರಸಿಂಹರಾಜ ಕ್ಷೇತ್ರ ಎಂದು ಹೆಸರು ಬದಲಾಯಿಸಲಾಯಿತು. ಅದೇ ವರ್ಷ ನಡೆದ ಚುನಾವಣೆಯಲ್ಲಿ ಎಸ್‌ಎಸ್‌ಪಿ (ಸಂಯುಕ್ತ ಸಮಾಜವಾದಿ ಪಕ್ಷ) ಅಭ್ಯರ್ಥಿಯಾಗಿ ಕಣಕ್ಕಿಳಿದ ಅಜೀಜ್ ಸೇಠ್, ಪಿಎಸ್ಪಿಯ ಬಿ.ಕೆ.ಪುಟ್ಟಯ್ಯ ಅವರನ್ನು ಸೋಲಿಸಿ, ಮೊದಲ ಬಾರಿಗೆ ವಿಧಾನಸಭೆಗೆ ಆಯ್ಕೆಯಾದರು. 1972ರಲ್ಲಿ ಕಾಂಗ್ರೆಸ್‌ನಿಂದ ಹಾಗೂ 1978ರಲ್ಲಿ ಇಂದಿರಾ ಕಾಂಗ್ರೆಸ್‌ನಿಂದ ಕಣಕ್ಕಿಳಿದ ಅಜೀಜ್ ಸೇಠ್ ಸತತ ಮೂರನೇ ಗೆಲುವು ಸಾಧಿಸಿದರು. ನಂತರ ಕಾಂಗ್ರೆಸ್ ಬಿಟ್ಟು ಜನತಾಪಕ್ಷದ ಅಭ್ಯರ್ಥಿಯಾದ ಅಜೀಜ್‌ಸೇಠ್ 1983ರ ಚುನಾವಣೆಯಲ್ಲೂ ಗೆದ್ದು ಸತತ 4ನೇ ಬಾರಿಗೆ ಶಾಸಕರಾದರು.

1984ರಲ್ಲಿ ಧಾರವಾಡ ದಕ್ಷಿಣದಿಂದ ಕಾಂಗ್ರೆಸ್ ಅಭ್ಯರ್ಥಿಯಾಗಿ ಲೋಕಸಭೆಗೆ ಆಯ್ಕೆಯಾದ ಅಜೀಜ್ ಸೇಠ್, 1985ರಲ್ಲಿ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಲಿಲ್ಲ. ಆದರೂ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಮುಕ್ತಾರುನ್ನೀಸಾ ಬೇಗಂ, ಬಿಜೆಪಿಯ ಇ.ಮಾರುತಿರಾವ್ ಪವಾರ್ ಅವರನ್ನು ಸೋಲಿಸಿ, ಆಯ್ಕೆಯಾದರು. 1989ರ ವೇಳೆಗೆ ರಾಜ್ಯ ರಾಜಕಾರಣಕ್ಕೆ ವಾಪಸ್ಸಾದ ಅಜೀಜ್‌ಸೇಠ್ ಕಾಂಗ್ರೆಸ್ ಅಭ್ಯರ್ಥಿಯಾಗಿ 5ನೇ ಬಾರಿಗೆ ವಿಧಾನಸಭೆ ಪ್ರವೇಶಿಸಿದರು.

1994ರಲ್ಲಿ ಅಜೀಜ್ ಸೇಠ್ ಸಕಾಲದಲ್ಲಿ 'ಬಿ' ಫಾರಂ ಸಲ್ಲಿಸದೇ ಕಾಂಗ್ರೆಸ್ ಬೆಂಬಲಿತ ಪಕ್ಷೇತರರಾಗಿ ಏರೋಪ್ಲೇನ್ ಚಿಹ್ನೆಯಡಿ ಸ್ಪರ್ಧಿಸಿ, ಬಿಜೆಪಿಯ ಇ.ಮಾರುತಿರಾವ್ ಪವಾರ್ ಎದುರು ಸೋತರು. ಈ ಮೂಲಕ ಎನ್.ಆರ್ ಕ್ಷೇತ್ರದಲ್ಲಿ ಬಿಜೆಪಿ ತನ್ನ ಮೊದಲ ಗೆಲುವು ದಾಖಲಿಸಿತ್ತು. 1999ರಲ್ಲಿ ಮತ್ತೆ ಕಾಂಗ್ರೆಸ್ ಅಭ್ಯರ್ಥಿಯಾದ ಅಜೀಜ್ ಸೇಠ್ ಗೆದ್ದು, 6ನೇ ಬಾರಿ ವಿಧಾನಸಭೆ ಪ್ರವೇಶಿಸಿದರು. ಆದರೆ ಅವರ ನಿಧನದಿಂದಾಗಿ 2002ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಅಜೀಜ್ ಸೇಠ್ ಪುತ್ರ ತನ್ವೀರ್ ಸೇಠ್ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದು, ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದರು. ನಂತರ 2004, 2008, 2013 ಮತ್ತು 2018ರಲ್ಲಿ ಸತತ ಗೆಲುವು ಸಾಧಿಸಿರುವ ತನ್ವೀರ್ ಸೇಠ್, 5ನೇ ಬಾರಿ ಶಾಸಕರಾಗಿದ್ದಾರೆ. ಅಲ್ಲದೆ 2023ರ ಚುನಾವಣೆಯಲ್ಲೂ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತಿದ್ದಾರೆ.

ಎನ್.ಆರ್ ಕ್ಷೇತ್ರದಿಂದ ಆಯ್ಕೆಯಾದವರು...

1952–	ಟಿ.ಮರಿಯಪ್ಪ(ಕಾಂಗ್ರೆಸ್)
1957–	ಮಹಮದ್ ಸೇಠ್(ಪಕ್ಷೇತರ)
1962–	ಬಿ.ಕೆ.ಪುಟ್ಟಯ್ಯ(ಪಿಎಸ್ಪಿ)
1967–	ಅಜೀಜ್ ಸೇಠ್(ಎಸ್‌ಎಸ್‌ಪಿ)
1972–	ಅಜೀಜ್ ಸೇಠ್(ಕಾಂಗ್ರೆಸ್)
1978–	ಅಜೀಜ್ ಸೇಠ್(ಇಂದಿರಾ ಕಾಂಗ್ರೆಸ್)
1983–	ಅಜೀಜ್ ಸೇಠ್(ಜನತಾಪಕ್ಷ)
1985–	ಮುಕ್ತಾರುನ್ನೀಸಾ ಬೇಗಂ(ಕಾಂಗ್ರೆಸ್)
1989–	ಅಜೀಜ್ ಸೇಠ್(ಕಾಂಗ್ರೆಸ್)
1994–	ಇ.ಮಾರುತಿರಾವ್ ಪವಾರ್(ಬಿಜೆಪಿ)
1999–	ಅಜೀಜ್ ಸೇಠ್(ಕಾಂಗ್ರೆಸ್)
2002– ಉಪಚುನಾವಣೆಯಲ್ಲಿ ತನ್ವೀರ್ ಸೇಠ್(ಕಾಂಗ್ರೆಸ್)	
2004, 2008, 2013, 2018– ತನ್ವೀರ್ ಸೇಠ್(ಕಾಂಗ್ರೆಸ್)	

ವಿವಿಧ ಪಕ್ಷಗಳ ಟಿಕೆಟ್ ಆಕಾಂಕ್ಷಿಗಳು

ಬಿಜೆಪಿ
ಎಸ್.ಸತೀಶ್(ಸಂದೇಶ್‌ಸ್ವಾಮಿ)
ಹೆಚ್.ಜಿ.ಗಿರಿಧರ್,
ಸತೀಶ್

ಜೆಡಿಎಸ್
ಸಿಎಂ ಇಬ್ರಾಹಿಂ
ಅಬ್ದುಲ್ ಅಜೀಜ್
ಶಾಹೀದ್ ಖಾದರ್

ಕಾಂಗ್ರೆಸ್
ತನ್ವೀರ್ ಸೇಠ್ (ಪ್ರಕಟಿತ)

282 ಮತಗಟ್ಟೆಗಳಿರುವ ನರಸಿಂಹರಾಜ ಕ್ಷೇತ್ರದಲ್ಲಿ 2,83,903(2023ರ ಮಾ.29ರವರೆಗೆ) ಮತದಾರರಿದ್ದು, 1,37,738 ಪುರುಷರು, 1,46,119 ಮಹಿಳಾ ಮತದಾರರಿದ್ದಾರೆ. ಅವರಲ್ಲಿ ವಿಕಲಚೇತನ ಮತದಾರರು 2,374 ಮಂದಿ ಇದ್ದರೆ, 80 ವರ್ಷ ಮೇಲ್ಪಟ್ಟವರು 6,368 ಹಾಗೂ ಹೊಸದಾಗಿ ನೋಂದಣಿಯಾದ 4,944 ಮಂದಿ ಯುವ ಮತದಾರರಿದ್ದಾರೆ.

ಕಾಂಗ್ರೆಸ್ ಮೇಲುಗೈ: ನರಸಿಂಹರಾಜ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿದೆ. 16 ವಿಧಾನಸಭಾ ಚುನಾವಣೆಗಳಲ್ಲಿ 11 ಬಾರಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಿದರೆ, ಬಿಜೆಪಿ, ಪಿಎಸ್ಪಿ, ಎಸ್‌ಎಸ್‌ಪಿ, ಜನತಾ ಪಕ್ಷ ತಲಾ 1 ಬಾರಿ ಜಯ ಪಡೆದಿವೆ. 1 ಬಾರಿ ಪಕ್ಷೇತರ ಅಭ್ಯರ್ಥಿಯೂ ಗೆಲುವು ಪಡೆದಿದ್ದಾರೆ. ಅಜೀಜ್ ಸೇಠ್ 6 ಬಾರಿ ಶಾಸಕರಾಗಿ ಆಯ್ಕೆಯಾದರೆ, ಅವರ ಪುತ್ರ ತನ್ವೀರ್ ಸೇಠ್ 5 ಬಾರಿ ವಿಧಾನಸಭೆ ಪ್ರವೇಶ ಮಾಡಿರುವುದು ವಿಶೇಷವಾಗಿದೆ.

2013ರ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ತನ್ವೀರ್ ಸೇಠ್ 38,037 ಮತಗಳ ಪಡೆದರೆ, ಎಸ್‌ಡಿಪಿಐನ ಅಬ್ದುಲ್ ಮಜೀದ್ 29,667 ಮತ ಪಡೆದು ಪ್ರಬಲ ಪೈಪೋಟಿ ನೀಡಿದ್ದರು. 2018ರ ಚುನಾವಣೆಯಲ್ಲಿ ಕಾಂಗ್ರೆಸ್‌ನ ಅಭ್ಯರ್ಥಿ ತನ್ವೀರ್ ಸೇಠ್ 62,268 ಮತ ಪಡೆದು ಜಯ ಪಡೆದರೆ, ಬಿಜೆಪಿಯ ಎಸ್.ಸತೀಶ್(ಸಂದೇಶ್‌ಸ್ವಾಮಿ) 44,141 ಮತ, ಎಸ್‌ಡಿಪಿಐನ ಅಬ್ದುಲ್ ಮಜೀದ್ 33,284 ಮತಗಳನ್ನು ಪಡೆಯುವ ಮೂಲಕ ಪೈಪೋಟಿ ನೀಡಿದ್ದರು.

ನಗರ ವ್ಯಾಪ್ತಿಯ ದೊಡ್ಡ ಕ್ಷೇತ್ರ: ಮೈಸೂರು ನಗರ ವ್ಯಾಪ್ತಿಯಲ್ಲಿ ಹೆಚ್ಚಿನ ಸಂಖ್ಯೆಯ ಮತದಾರರನ್ನು ಹೊಂದಿರುವ ನರಸಿಂಹರಾಜ ಕ್ಷೇತ್ರವು ವಾರ್ಡ್ ನಂ.8(ಬನ್ನಿಮಂಟಪ) 9(ಕೆಸರೆ) 10(ರಾಜೀವ ನಗರ), 11(ಶಾಂತಿನಗರ), 12(ಶಾಂತಿನಗರ), 13(ಉದಯಗಿರಿ), 14(ಸತ್ಯನಗರ), 15(ರಾಜೇಂದ್ರನಗರ), 16(ಸುಭಾಷ್‌ನಗರ), 17(ಬನ್ನಿಮಂಟಪ), 27(ವೀರನಗೆರೆ), 28(ಗಾಂಧಿನಗರ), 29(ಎನ್.ಆರ್.ಮೊಹಲ್ಲಾ), 30(ಕ್ಯಾತಮಾರನಹಳ್ಳಿ), 31(ಗೌಸಿಯಾನಗರ), 32(ಗೌಸಿಯಾನಗರ ಎ ಬ್ಲಾಕ್), 33(ಅಜೀಜ್‌ಸೇಠ್ ನಗರ), 34(ಕಲ್ಯಾಣಗಿರಿ), 35(ಸಾತಗಳ್ಳಿ), 36(ಯರಗನಹಳ್ಳಿ), 37(ರಾಘವೇಂದ್ರನಗರ), 38(ಗಿರಿಯಾಭೋವಿಪಾಳ್ಯ), 39(ಗಾಯತ್ರಿಪುರಂ 1ನೇ ಹಂತ) ಸೇರಿ 21 ವಾರ್ಡ್‌ಗಳನ್ನು ಒಳಗೊಂಡಿದೆ.

ನಕ್ಕರೆ ಅದೇ ಸ್ವರ್ಗ

ಸುಬ್ಬಕ್ಕ : ಪ್ರತಿನಿತ್ಯ ನಮ್ಮ ಮನೆಗೆ ಬರ್ತಿಯಲ್ಲಾ, ಈ ಏರಿಯಾದಲ್ಲಿ ಬೇರೆ ಮನೆಗಳು ಇಲ್ವಾ?

ಭಿಕ್ಷುಕ : ನನಗೂ ವಯಸ್ಸಾಯ್ತು ತಾಯಿ. ಎಲ್ಲೆಂದರಲ್ಲಿ ಸಿಕ್ಕಿದ್ದನ್ನು ತಿಂದು ಆರೋಗ್ಯ ಕೆಡಿಸಿಕೊಳ್ಳಬಾರದು ಮತ್ತು ಒಂದೇ ರೀತಿಯ ಆಹಾರ ತೆಗೆದುಕೊಳ್ಳಿ ಎಂದು ಡಾಕ್ಟರ್ ಹೇಳಿದ್ದಾರೆ!

ಮೈಸೂರು ಮಿತ್ರ

ಭಾನುವಾರ, 2 ಏಪ್ರಿಲ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಕನ್ನಡಿ ಸ್ವಚ್ಛವಾಗಿದ್ದಲ್ಲಿ ಪ್ರತಿಬಿಂಬ ಸುಂದರವಾಗಿ ಕಾಣುತ್ತದೆ. ಮನಸ್ಸು ಸ್ವಚ್ಛವಾಗಿದ್ದಲ್ಲಿ ಜಗತ್ತು ಸುಂದರವಾಗಿ ಕಾಣುತ್ತದೆ. –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಧರ್ಮಕ್ಕೆ ದತ್ತಿ ಕೊಟ್ಟರೆ ಹಿತ್ತಲಿಗೆ ಹೋಗಿ ಮೊಳ ಹಾಕಿದರಂತೆ

ನಿಮ್ಮ ಪತ್ರಗಳು

ವರುಣಾ ಕ್ಷೇತ್ರದಿಂದ ಲೋಕಸಭಾ ಸದಸ್ಯ ಪ್ರತಾಪ್ ಸಿಂಹ ಸ್ಪರ್ಧಿಸಲಿ!

ಮಾನ್ಯರೆ,

ಮೈಸೂರಿನ ವರುಣಾ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಆಯ್ಕೆ ಪ್ರಕ್ರಿಯೆ ದಿನದಿಂದ ದಿನಕ್ಕೆ ಜಟಿಲವಾಗುತ್ತಿದೆ. ಬಿ.ವೈ.ವಿಜಯೇಂದ್ರ ಸ್ಪರ್ಧಿಸುವುದು ಅನುಮಾನವಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಸೋಲಿಸಬೇಕಾದರೆ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ವರುಣಾದಲ್ಲಿ ಕಟ್ಟಿಹಾಕಬೇಕು. ಅವರಿಗೆ ಎದುರಾಗಿ ಪ್ರಬಲ ಸ್ಪರ್ಧಿಯೊಬ್ಬರನ್ನು ನಿಲ್ಲಿಸಬೇಕು. ಈ ಹಿನ್ನೆಲೆಯಲ್ಲಿ ಮೈಸೂರು ಲೋಕಸಭಾ ಸದಸ್ಯ ಪ್ರತಾಪ್ ಸಿಂಹ ಅವರನ್ನು ಬಿಜೆಪಿ ತನ್ನ ಅಭ್ಯರ್ಥಿಯಾಗಿ ಕಣಕ್ಕಿಳಿಸಬೇಕು.

ಸಿದ್ದರಾಮಯ್ಯ ವಿರುದ್ಧ ಸದಾ ಕಿಡಿಕಾರುವ ಪ್ರತಾಪ್ ಸಿಂಹ ಈ ನಿಟ್ಟಿನಲ್ಲಿ ಯೋಚಿಸಬೇಕು. ಏಕೆಂದರೆ, ಎಲ್ಲೋ ಕುಳಿತು ಸಿದ್ದರಾಮಯ್ಯ ವಿರುದ್ಧ ಟೀಕೆ ಮಾಡುವ ಬದಲಿಗೆ, ಅವರ ವಿರುದ್ಧ ಸ್ಪರ್ಧಿಸಿ, ಸೋಲಿಸಿದರೆ, ಅವರ ಮಾತಿಗೆ ಬೆಲೆ ಬರುತ್ತದೆ. ಇಂತಹ ಒಂದು ಸ್ಪರ್ಧೆ, ಹಿಂದುತ್ವ ಹಾಗೂ ಸಾಮಾಜಿಕ ನ್ಯಾಯ ಕಲ್ಪನೆಯ ನಡುವಣ ಹೋರಾಟ ಎಂದು ಕೂಡ ಕರೆಯಲ್ಪಡಬಹುದು. ಪ್ರತಾಪ್ ಸಿಂಹ ಮತ್ತು ಸಿದ್ದರಾಮಯ್ಯ ಎರಡು ಸಿದ್ಧಾಂತಗಳ ಪ್ರತಿನಿಧಿಗಳು. ಹಾಗಾಗಿ ಇದು ವ್ಯಕ್ತಿಗಳ ನಡುವಣ ಸ್ಪರ್ಧೆಯಾಗುವುದಿಲ್ಲ.–**ಸಿಂಚನ ಅಧಿಕಾರಿ ಎಸ್, ವಿಜಯನಗರ ಮೈಸೂರು**

ನಮ್ಮ ನಂದಿನಿ ನಮ್ಮ ಕೈ ಬಿಡುತ್ತಿದೆಯೇ?

ಮಾನ್ಯರೆ,

ಉತ್ತರ ಭಾರತದ ರಾಜಕಾರಣಿಗಳಿಗೆ ಏನಾಗಿದೆಯೂ ತಿಳಿಯುತ್ತಿಲ್ಲ. ದಕ್ಷಿಣ ಭಾರತದ ರಾಜ್ಯಗಳಿಗೆ ಹಿಂದಿಯನ್ನು ಅನವಶ್ಯಕವಾಗಿ ಹೇರುವ ಹುನ್ನಾರ ಕೇಂದ್ರ ಗೃಹ ಮತ್ತು ಸಹಕಾರ ಸಚಿವರಾದ ಅಮಿತ್ ಶಾ ಅವರಿಗೆ ಯಾಕೆ ಎಂಬುದು ಅರ್ಥವಾಗುತ್ತಿಲ್ಲ. ಕೆಲವು ದಿನಗಳ ಹಿಂದೆ KMF ಅನ್ನು AMULನೊಂದಿಗೆ ವಿಲೀನ ಮಾಡುವ ಮಾತನಾಡಿದ್ದ ಅಮಿತ್ ಶಾ ಅವರು ತೀವ್ರ ಪ್ರತಿರೋಧಕ್ಕೆ ಒಳಗಾಗಿದ್ದ ಸಂಗತಿ ಎಲ್ಲರಿಗೂ ತಿಳಿದಿದೆ. ಈಗ ಮತ್ತೊಮ್ಮೆ ನಂದಿನಿಯ ಪ್ರೋಬಯೋಟಿಕ್ ಮೊಸರು ಪ್ಯಾಕೆಟ್ ಮೇಲೆ ಹಿಂದಿಯ "ದಹಿ" ಎಂದು ಕಡ್ಡಾಯವಾಗಿ ಮುದ್ರಿಸುವ ಆದೇಶವನ್ನು ಭಾರತೀಯ ಆಹಾರ ಸುರಕ್ಷತೆ, ಗುಣಮಟ್ಟ ಪ್ರಾಧಿಕಾರವು KMFಗೆ ನೀಡಿರುವುದು ಖಂಡನಾರ್ಹ. ಗುಜರಾತ್‌ನ ಅಮುಲ್ ಮೊದಲಿದ್ದಷ್ಟು ಉತ್ತಮ ಸ್ಥಿತಿಯಲ್ಲಿ ಇಲ್ಲದ ಕಾರಣ ನಮ್ಮ ನಂದಿನಿಯನ್ನು ವಿಲೀನ ಮಾಡುವ ಪ್ರಯತ್ನ ಕೆಟ್ಟ ಆಲೋಚನೆ. ಬಲವಂತವಾಗಿ ಹಿಂದಿ ಹೇರಿಕೆಗೆ ಜವಾಬ್ದಾರಿಯಾಗಿರುವವರನ್ನು ಶಾಶ್ವತವಾಗಿಯೇ ದಕ್ಷಿಣದಿಂದ ನಿಷೇಧಿಸಲಾಗುವುದು ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಕಟುವಾಗಿ ಟೀಕಿಸಿರುವುದು ಶ್ಲಾಘನೀಯ. ಮಾಜಿ ಮುಖ್ಯಮಂತ್ರಿ ಎಚ್. ಡಿ.ಕುಮಾರಸ್ವಾಮಿ ಅವರು ನಂದಿನಿ ಕನ್ನಡಿಗರ ಸ್ವಾಭಿಮಾನವೇ ಹೊರತು ಅಮುಲ್‌ಗೆ ಅಡಿಯಾಳಲ್ಲ ಹಾಗೂ ಕರ್ನಾಟಕ ಭಾರತ ಗಣರಾಜ್ಯದ ಒಂದು ಭಾಗ್ಯವೇ ಹೊರತು ಗುಜರಾತಿನ ವಸಾಹತುವಲ್ಲ. ಇದನ್ನು ಒಪ್ಪಲು ಸಾಧ್ಯವಿಲ್ಲ ಎಂದು ಹೇಳಿರುವುದು ಸ್ವಾಗತಾರ್ಹ. "ದಹಿ" ಆದೇಶ ವಾಪಸ್ ಆಗಲು ನಮ್ಮ ರಾಜ್ಯದ ಕಾಂಗ್ರೆಸ್, ಜೆಡಿಎಸ್ ಪಕ್ಷ ಹಾಗೂ ಹಲವಾರು ಕನ್ನಡ ಸಂಘಟನೆಗಳ ಪ್ರತಿರೋಧವೇ ಕಾರಣ. ನಾವು ಸುಮ್ಮನಿರದೆ ಧ್ವನಿ ಎತ್ತಿದರೆ ಎಲ್ಲವೂ ಸಾಧ್ಯ. ಹಿಂದಿ ಹೇರಿಕೆ ನಿಲ್ಲಲಿ. –**ಬೆಸಗರಹಳ್ಳಿ ರವಿ ಪ್ರಸಾದ್, ಕೆ.ಸಿ.ನಗರ, ಮೈಸೂರು.**

ಎಲ್‌ಇಡಿ ವಿದ್ಯುತ್ ಕಂಬ ಅಳವಡಿಸಿ



ಮಾನ್ಯರೆ,

ನಂಜನಗೂಡು ತಾಲೂಕಿನ ಕಾಡಂಚಿನಲ್ಲಿರುವ ಬಳ್ಳೂರು ಹುಂಡಿ ಗ್ರಾಮದ ಮುಂಭಾಗ ವಿದ್ಯುತ್ ಕಂಬದ ಅವಶ್ಯಕತೆ ಇದೆ. ಮೊದಲೇ ಕಾಡಂಚಿನ ಗ್ರಾಮವಾದ ಇಲ್ಲಿ ರಾತ್ರಿ ಹೊತ್ತು ಕತ್ತಲೆ ಇರುವ ಕಾರಣ ಗ್ರಾಮದ ಮುಂಭಾಗಕ್ಕೆ ಕಾಡುಪ್ರಾಣಿಗಳು ಬರುತ್ತವೆ. ರಾತ್ರಿ ಹೊತ್ತು ಸರಿಯಾಗಿ ದಾರಿ ದೀಪಗಳಿಲ್ಲದ ಕಾರಣ ಜನರು ಓಡಾಡಲು ತೊಂದರೆಯಾಗುತ್ತಿದೆ. ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳು ಗ್ರಾಮದ ದ್ವಾರದಲ್ಲಿ ಒಂದು ದೊಡ್ಡದಾದ ಎಲ್‌ಇಡಿ ದ್ವೀಪದ ಕಂಬವನ್ನು ಅಳವಡಿಸಬೇಕೆಂದು ಮನವಿ. – **ಮಹಾಂತೇಶ್ ಬಸಪ್ಪ, ಬಳ್ಳೂರುಹುಂಡಿ, ನಂಜನಗೂಡು ತಾ.**



ಕಾರ್ಕಳ ಆನಂದ ಭಟ್
ಫ್ಲಾಟ್ ನಂ. 204, 3ನೇ ಮಹಡಿ, ಏಕದಂತ
ಅಪಾರ್ಟ್‌ಮೆಂಟ್, ಪೆರ್ವಜೆ ರಸ್ತೆ, ಕಾರ್ಕಳ–574 104
ಮೊ. 7676554198

ದಿಕ್ಕುದೆಸೆ

ಜಾಗತಿಕ ಮಟ್ಟದಲ್ಲಿ ಭಾರತದ ಪ್ರಾಬಲ್ಯ

ಕೊರೊನಾ ಮಹಾಮಾರಿ ಮತ್ತು ರಷ್ಯಾ–ಯುಕ್ರೇನ್ ಯುದ್ಧವು ಜಾಗತಿಕ ಮಟ್ಟದಲ್ಲಿ ಅತ್ಯಂತ ವೇಗವಾಗಿ ರಾಜಕೀಯ ಸಮೀಕರಣಗಳನ್ನು ಬದಲಾಯಿಸುತ್ತಿವೆ. ಅಮೇರಿಕ ವಿಶ್ವಕ್ಕೆ ದೊಡ್ಡಣ್ಣನೆಂಬ ದರ್ಪದಿಂದ ಅನೇಕ ದೇಶಗಳ ಆರ್ಥಿಕತೆ ನಾಶಪಡಿಸುವ, ಸರಕಾರಗಳನ್ನು ಅಸ್ಥಿರಗೊಳಿಸುವುದರಿಂದ, ಚೀನಾದ ನಿರಂಕುಶ ವಿಸ್ತರಣಾವಾದಿ ಮನೋಭಾವದಿಂದ ರಷ್ಯಾದ ಯುದ್ಧ ಕೋರತನದಿಂದ ಯುರೋಪಿಯನ್ ದೇಶಗಳ ಅವಕಾಶವಾದಿತನದಿಂದ ಹೈರಾಣಾಗಿರುವ ಜಗತ್ತು ಇವುಗಳಿಂದ ಬಿಡುಗಡೆ ಹೊಂದಲು ಭಾರತದತ್ತ ಆಶಾಭಾವನೆಯಿಂದ ನೋಡುತ್ತಿವೆ. ಜಗತ್ತಿನ ಅಪೇಕ್ಷೆಯಂತೆ ಭಾರತವು ದೇಶದ ಮತ್ತು ಜಾಗತಿಕ ಹಿತ ದೃಷ್ಟಿಯಿಂದ ತನ್ನ ರಾಜಕೀಯ ದಾಳಗಳನ್ನು ಉರುಳಿಸುತ್ತಿದೆ.

ರಷ್ಯಾ–ಯುಕ್ರೇನ್ ಯುದ್ಧ ಮುಗಿಯುವ ಲಕ್ಷಣಗಳು ಕಾಣುತ್ತಾ ಇಲ್ಲ. ಯುರೋಪಿಯನ್ ದೇಶಗಳು ಹಾಗೂ ಅಮೇರಿಕವು ರಷ್ಯಾ ಮಂಡಿಯೂರುವಂತೆ ಮಾಡಲು ವ್ಯೂಹಾತ್ಮಕವಾಗಿ ಅನೇಕ ಆರ್ಥಿಕ ದಿಗ್ಬಂಧನ ಹೇರಿವೆ. ಆದರೆ ರಷ್ಯಾ ಜಗ್ಗದೆ ಯುಕ್ರೇನ್ ಮೇಲೆ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸಿದೆ. ರಷ್ಯಾದ ಮಾದರಿಯಲ್ಲಿ ಕಳೆದ ಐದು ದಶಕಗಳಿಂದ ಆರ್ಥಿಕ ದಿಗ್ಬಂಧನಗಳಿಂದ ಬಳಲಿರುವ ಶಿಯಾ ಬಹುಸಂಖ್ಯಾತ ಇರಾನ್ ಕೂಡ ಈಗ ರಷ್ಯಾವನ್ನು ಬೆಂಬಲಿಸುತ್ತಿದೆ. ಎರಡೂ ದೇಶಗಳು ಆರ್ಥಿಕ ದಿಗ್ಬಂಧನದ ಹೊಡೆತದಿಂದ ಹೊರ ಬರಲು ಭಾರತದಿಂದ ನೆರವಿನ ನಿರೀಕ್ಷೆಯಲ್ಲಿವೆ. ವಿಶೇಷವೆಂದರೆ ಅಮೇರಿಕದ ಎಚ್ಚರಿಕೆ ನಿರ್ಲಕ್ಷಿಸಿ ಭಾರತ ಸಕಾರಾತ್ಮಕವಾಗಿ ಸ್ಪಂದಿಸುತ್ತಿದೆ.

ಯುಕ್ರೇನ್ ಯುದ್ಧವು ಭಾರತ–ರಷ್ಯಾ–ಇರಾನ್ ಪರಸ್ಪರ ಸಹಕರಿಸುವ ಹೊಸ ರಾಜಕೀಯ ಸಮೀಕರಣಕ್ಕೆ ಅವಕಾಶ ತೆರೆದಿದೆ. ಜಾಗತಿಕ ಮಟ್ಟದಲ್ಲಿ ಹೊಸ ಮೈತ್ರಿಕೂಟ ಅಸ್ತಿತ್ವಕ್ಕೆ ಬರುವ ಸಂಭಾವ್ಯತೆ ಹೆಚ್ಚಿಸಿದೆ. ಆರ್ಥಿಕ ನಿರ್ಬಂಧಗಳನ್ನು ಪರಿಣಾಮ ಹೀನಗೊಳಿಸುವ ಮತ್ತು ಯುರೋಪ್ ಮೇಲಿನ ಅವಲಂಬನೆ ಕನಿಷ್ಠಕ್ಕೆ ತರುವ ತಂತ್ರಗಾರಿಕೆಗೆ ಅನುಗುಣವಾಗಿ ರಷ್ಯಾ–ಇರಾನ್ ಒಂದು ಹೊಸ ಶಿಪ್ಪಿಂಗ್ ಕಾರಿಡಾರ್ ನಿರ್ಮಾಣಕ್ಕೆ ಗಮನಹರಿಸಿವೆ. ಎರಡೂ ದೇಶಗಳು ಈ ಯೋಜನೆಯಲ್ಲಿ ಭಾರತದ ಪಾಲುದಾರಿಕೆಯನ್ನು ಬಯಸುತ್ತಿರುವುದು ವಿಶೇಷವಾಗಿದೆ. ಅಮೇರಿಕ ನೇತೃತ್ವದ ದೇಶಗಳು ಮತ್ತು ಅದರ ಆಪ್ತ ರಾಷ್ಟ್ರಗಳ ನಡುವೆ ಪೂರೈಕೆ ಸರಪಳಿಯನ್ನು ಸುಗಮಗೊಳಿಸುವ ಅಮೇರಿಕದ ತಂತ್ರಗಾರಿಕೆಗೆ ಪ್ರತಿಯಾಗಿ ರಷ್ಯನ್ ಕೂಟ ಈ ಕಾರಿಡಾರ್ ನಿರ್ಮಿಸುತ್ತಿದೆ. ಯುರೋಪ್ ದೇಶಗಳು ರಷ್ಯಾ–ಇರಾನ್ ಮೇಲೆ ಹೇರಿರುವ ಆರ್ಥಿಕ ನಿರ್ಬಂಧದ ವಿಷಯದಲ್ಲಿ ಭಾರತವು ಜಾಣ್ಮೆಯಿಂದ ಅಂತರವನ್ನು ಕಾಯ್ದುಕೊಂಡಿದೆ.



❝ಅಮೇರಿಕವು ಜಗತ್ತಿನ ದೇಶಗಳಿಗೆ ಇರಾನ್‌ನಿಂದ ಏನನ್ನೂ ಖರೀದಿಸದಂತೆ ಹಾಕಿರುವ ಒತ್ತಡದಿಂದ ಭಾರತವು 2019 ರಿಂದ ಇರಾನ್‌ನಿಂದ ನೇರವಾಗಿ ತೈಲ ಖರೀದಿ ಸ್ಥಗಿತಗೊಳಿಸಿ ಅನಧಿಕೃತವಾಗಿ ಖರೀದಿಸುತ್ತಿದೆ. ಇದರಿಂದಾಗಿ ರಷ್ಯಾವು ವಿಶ್ವದ ಅತೀ ದೊಡ್ಡ ಆರ್ಥಿಕತೆಯ ಸಾಲಿನಲ್ಲಿ ಒಂಭತ್ತನೇ ಸ್ಥಾನದಲ್ಲಿ ಸ್ಥಿರವಾಗಿದ್ದು, ಇರಾನ್ ಹನ್ನೊಂದನೇ ರ್‍ಯಾಂಕ್‌ನಿಂದ ಕೆಳಕ್ಕೆ ಇಳಿದಿಲ್ಲ. ಭಾರತವು ಪೆಟ್ರೋಲಿಯಂ ಬೆಲೆಗಳಲ್ಲಿ ಏರಿಕೆಯನ್ನು ತಡೆಗಟ್ಟಿ ಹಣದುಬ್ಬರ ನಿಯಂತ್ರಿಸಿ ಆರ್ಥಿಕತೆಯನ್ನು ಸದೃಢಗೊಳಿಸಿದೆ. ಅಮೇರಿಕದ ನಿರ್ಬಂಧಗಳ ಪರಿಣಾಮಗಳಿಂದ ಹೊರ ಬರಲು ಯತ್ನಿಸುತ್ತಿರುವ ರಷ್ಯಾ ಹಾಗೂ ಇರಾನ್ ದೇಶಗಳಿಗೆ ಭಾರತದ ಮಾರುಕಟ್ಟೆಯ ಗಾತ್ರ ಮತ್ತು ವ್ಯವಹಾರದ ಪರಿಮಾಣ ಸಹಜವಾಗಿ ಆಕರ್ಷಿಸಿದೆ. ಆದರೆ ಭಾರತವು ಈ ದೇಶಗಳೊಂದಿಗೆ ಪಾಲುದಾರಿಕೆ ವಿಷಯವನ್ನು ಮುಕ್ತವಾಗಿರಿಸಿದೆ.

ಭಾರತ–ರಷ್ಯಾ–ಇರಾನ್ ಮಧ್ಯೆ ತೈಲ ಸಹಕಾರ: ಮೂರು ದೇಶಗಳ ಮಧ್ಯೆ ಹೆಚ್ಚುತ್ತಿರುವ ಸಹಕಾರವು ಆರ್ಥಿಕ ಚೇತರಿಕೆಗೆ ಬಲ ನೀಡಿದೆ. ರಷ್ಯಾ ಭಾರೀ ರಿಯಾಯ್ತಿ ದರದಲ್ಲಿ ಕಚ್ಚಾ ತೈಲವನ್ನು ಭಾರತಕ್ಕೆ ಪೂರೈಸು ತ್ತಿರುವುದರಿಂದ ಎರಡೂ ದೇಶಗಳಿಗೆ ಲಾಭವಾಗಿದೆ. ಅಮೇರಿಕವು ಜಗತ್ತಿನ ದೇಶಗಳಿಗೆ ಇರಾನ್‌ನಿಂದ ಏನನ್ನೂ ಖರೀದಿಸದಂತೆ ಹಾಕಿರುವ ಒತ್ತಡದಿಂದ ಭಾರತವು 2019ರಿಂದ ಇರಾನ್‌ನಿಂದ ನೇರವಾಗಿ ತೈಲ ಖರೀದಿ ಸ್ಥಗಿತಗೊಳಿಸಿ ಅನಧಿಕೃತವಾಗಿ ಖರೀದಿಸುತ್ತಿದೆ. ಇದರಿಂದಾಗಿ ರಷ್ಯಾವು ವಿಶ್ವದ ಅತೀ ದೊಡ್ಡ ಆರ್ಥಿಕತೆಯ ಸಾಲಿನಲ್ಲಿ ಒಂಭತ್ತನೇ ಸ್ಥಾನದಲ್ಲಿ ಸ್ಥಿರವಾಗಿದ್ದು, ಇರಾನ್ ಹನ್ನೊಂದನೇ ರ್‍ಯಾಂಕ್‌ನಿಂದ ಕೆಳಕ್ಕೆ ಇಳಿದಿಲ್ಲ. ಭಾರತವು ಪೆಟ್ರೋಲಿಯಂ ಬೆಲೆಗಳಲ್ಲಿ ಏರಿಕೆಯನ್ನು ತಡೆಗಟ್ಟಿ ಹಣದುಬ್ಬರ ನಿಯಂತ್ರಿಸಿ ಆರ್ಥಿಕತೆಯನ್ನು ಸದೃಢಗೊಳಿಸಿದೆ. ಅಮೇರಿಕದ ನಿರ್ಬಂಧಗಳ ಪರಿಣಾಮಗಳಿಂದ ಹೊರ ಬರಲು ಯತ್ನಿಸುತ್ತಿರುವ ರಷ್ಯಾ ಹಾಗೂ ಇರಾನ್ ದೇಶಗಳಿಗೆ ಭಾರತದ ಮಾರುಕಟ್ಟೆಯ ಗಾತ್ರ ಮತ್ತು ವ್ಯವ ಹಾರದ ಪರಿಮಾಣ ಸಹಜವಾಗಿ ಆಕರ್ಷಿಸಿದೆ. ಆದರೆ ಭಾರತವು ಈ ದೇಶಗಳೊಂದಿಗೆ ಪಾಲುದಾರಿಕೆ ವಿಷಯವನ್ನು ಮುಕ್ತವಾಗಿರಿಸಿದೆ.

ಇರಾನ್ ಆರಂಭಿಸಿರುವ 3300 ಕಿ.ಮೀ. ಉದ್ದದ ರೈಲ್ವೆ ಸಂಪರ್ಕ ಜಾಲದ ಯೋಜನೆ ಇರಾನ್‌ನಲ್ಲಿ ಸಂಪರ್ಕ ಕ್ರಾಂತಿ ಮಾಡಲಿದೆ. ಇರಾನ್ ಕೈಗೊಂಡಿರುವ ರೈಲ್ವೆ ಯೋಜನೆಗಳು ಪೂರ್ಣಗೊಂಡಾಗ ದೇಶದ ಸಾರಿಗೆ ಸಂಪರ್ಕದ ಪ್ರಮಾಣ ಶೇ.20ರಷ್ಟು ವೃದ್ಧಿಯಾಗಲಿದೆ. ಇರಾನ್ ದೇಶವು ಏಷ್ಯಾ, ರಷ್ಯಾ ಮತ್ತು ಯುರೋಪಿಯನ್ ದೇಶಗಳಿಗೆ ಸಂಪರ್ಕ ಕಲ್ಪಿಸುವ ಸಾರಿಗೆ ಹಬ್ ಆಗಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದೆ. ಉತ್ತರ –ದಕ್ಷಿಣ ಅಂತರರಾಷ್ಟ್ರೀಯ ಹೆದ್ದಾರಿ ಕಾರಿಡಾರ್ ಯೋಜನೆಗೆ 2002ರಲ್ಲಿ ಭಾರತ, ರಷ್ಯಾ ಹಾಗೂ ಇರಾನ್ ಸಹಿ ಹಾಕಿವೆ. ಈ ಯೋಜನೆ ಪೂರ್ಣಗೊಂಡಾಗ ಸೂಯೆಜ್ ಕಾಲುವೆಗೆ ಪರ್ಯಾಯವಾಗಿ ಇರಾನ್ ಮೂಲಕ ಭಾರತ–ರಷ್ಯಾ–ಅಜರ್‌ಬೈಜಾನ್ ಮಧ್ಯೆ ಸಂಪರ್ಕ ಕಲ್ಪಿಸಲಿದೆ. ಈ ಯೋಜನೆ ನಾಲ್ಕೂ ದೇಶಗಳ ಆರ್ಥಿಕ ವಿಕಾಸಕ್ಕೆ ಅವಕಾಶ ತೆರೆಯಲಿದೆ.

ಕಳೆದೆರಡು ದಶಕಗಳಿಂದ ದ್ವಿಪಕ್ಷೀಯ ವಾಣಿಜ್ಯ ವ್ಯವಹಾರ ನಡೆಸು ತ್ತಿರುವ ರಷ್ಯಾ, ಇರಾನ್‌ಗಳೊಂದಿಗೆ ಭಾರತವು ತೃತೀಯ ದೇಶವಾಗಿ ಪ್ರವೇಶಿಸಲಿದ್ದು, ಯಾವ ರೀತಿಯ ಪರಿಣಾಮ ಬೀರಲಿದೆ ಎಂಬುದು ಕುತೂಹಲ ಕಾರಿಯಾಗಿದೆ. ರಷ್ಯಾ–ಯುಕ್ರೇನ್ ಯುದ್ಧಕ್ಕೆ ಸಂಬಂಧ ಪಟ್ಟಂತೆ ಭಾರತದ ತಟಸ್ಥ ಧೋರಣೆ ಹಾಗೂ ರಷ್ಯಾ–ಇರಾನ್ ನಿರ್ಮಿಸುತ್ತಿರುವ ಶಿಪ್ಪಿಂಗ್ ಕಾರಿಡಾರ್ ಯುರೋಪ್ ದೇಶಗಳು ಹೇರಿರುವ ನಿರ್ಬಂಧಗಳನ್ನು ಪರಿಣಾಮ ಹೀನಗೊಳಿಸಲಿದೆ. ಆದ್ದರಿಂದ ಈ ಕಾರಿಡಾರ್ ಯೋಜನೆಗೆ ಅಮೇರಿಕ ಅಡ್ಡಿಪಡಿಸುವ ಸಾಧ್ಯತೆಗಳಿವೆ.

ಯುಕ್ರೇನ್–ರಷ್ಯಾ ಯುದ್ಧಕ್ಕೆ ಸಂಬಂಧಿಸಿದಂತೆ ಭಾರತದ ತಾಟಸ್ಥ್ಯ ರಷ್ಯಾವನ್ನು ಸಂತಸಗೊಳಿಸಲಿದೆ ಹಾಗೂ ರಷ್ಯಾ ಸಹಾಯದಿಂದ ಚೀನಾವನ್ನು ನಿಯಂತ್ರಿಸಬಹುದೆಂದು ಭಾರತ ಭಾವಿಸಿದೆ. ಅಮೇರಿಕದ ಆಕ್ರೋಶವನ್ನು ಲೆಕ್ಕಿಸದೆ ಇರಾನ್ ದೇಶವು ಯುಕ್ರೇನ್ ವಿರುದ್ಧದ ಯುದ್ಧದಲ್ಲಿ ರಷ್ಯಾಕ್ಕೆ ಡ್ರೋಣ್‌ಗಳನ್ನು ಪೂರೈಸುತ್ತಿದೆ ಹಾಗೂ ರಷ್ಯಾದಿಂದ ಪ್ರತಿ ದಿನ ಒಂಭತ್ತು ಮಿ.ಕ್ಯೂ. ಮೀಟರ್ ನೈಸರ್ಗಿಕ ಅನಿಲವನ್ನು ಅಜರ್ ಬೈಜಾನ್ ಮೂಲಕ ಆಮದು ಮಾಡಿಕೊಳ್ಳುತ್ತಿದೆ. ಭಾರತಕ್ಕೆ ಅನುಕೂಲವೆಂದರೆ ಇರಾನಿನ ಚಬಾಹಾರ್ ಬಂದರಿನ ದಕ್ಷಿಣ ಭಾಗವು ಸಂಪೂರ್ಣ ಕಾರಿಡಾರ್‌ಗೆ ಸಂಪರ್ಕ ಕಲ್ಪಿಸುತ್ತದೆ. ಇರಾನ್–ರಷ್ಯಾ ಅಭಿಪ್ರಾಯದಂತೆ ಈ ಕಾರಿಡಾರ್ ಆರ್ಥಿಕ ಮತ್ತು ವ್ಯೂಹಾತ್ಮಕವಾಗಿ ಭಾರತಕ್ಕೆ ಲಾಭದಾಯಕವಾಗಲಿದೆ. ಈ ಕಾರಿಡಾರ್ ನೈಸರ್ಗಿಕ ಸಂಪತ್ತಿನಿಂದ ಸಮೃದ್ಧವಾಗಿರುವ ಮಧ್ಯ ಏಷ್ಯಾದಲ್ಲಿ ಭಾರತಕ್ಕೆ ಭಾರೀ ಪ್ರಮಾಣದಲ್ಲಿ ಆರ್ಥಿಕ ಚಟುವಟಿಕೆಗಳಿಗೆ ಅವಕಾಶ ನೀಡಲಿದೆ. ಆರಂಭದಿಂದಲೂ ಭಾರತ ಹಾಗೂ ಅಮೇರಿಕ, ಚೀನಾದ ಬೆಲ್ಟ್ ಎಂಡ್ ರೋಡ್ ಇನಿಷೆಟಿವ್ (BRI)ಯೋಜನೆಯನ್ನು ವಿರೋಧಿಸುತ್ತಿವೆ. ಈ ಪರಿಪೇಕ್ಷದಲ್ಲಿ ರಷ್ಯಾ–ಇರಾನ್ ವಾಣಿಜ್ಯ ಕಾರಿಡಾರ್ ಭಾರತಕ್ಕೆ ಚೀನಾದ BRIಗೆ ಪರ್ಯಾಯ ಸಂಪರ್ಕ ಹೆದ್ದಾರಿಯ ಅವಕಾಶ ನೀಡಲಿದೆ. ಭಾರತದ ಯೋಚನೆಯಂತೆ ಕಳೆದ ಒಂದು ವರ್ಷದಲ್ಲಿ ಅಮೇರಿಕದ ಡಾಲರ್ ಮೇಲಿನ ಅವಲಂಬನೆಯಿಂದ ಹೊರ ಬರಲು ಯೆನ್–ರೂಬಲ್‌ನಲ್ಲಿ ವ್ಯವಹರಿಸಲು ಆರಂಭಿಸಿವೆ. ಈಗಾಗಲೇ ವಿಶ್ವದ ಹದಿನೆಂಟು ದೇಶಗಳು ಭಾರತದೊಂದಿಗೆ ರೂಪಾಯಿಯಲ್ಲಿ ವ್ಯವಹರಿಸಲು ಸಮ್ಮತಿಸಿವೆ. ಇದು ಜಗತ್ತಿನಲ್ಲಿ ಡಾಲರ್ ಪ್ರಭುತ್ವ ಕೊನೆ ಗಾಣಿಸುವ ಸಂಕೇತ ನೀಡುತ್ತಿದೆ.

ರಷ್ಯಾಕ್ಕೆ ಪಾಠ ಕಲಿಸಬೇಕೆಂಬ ಅಮೇರಿಕಾ ಹಾಗೂ ಯುರೋಪಿಯನ್ ದೇಶಗಳ ಒತ್ತಡವನ್ನು ಭಾರತ ಪ್ರತಿರೋಧಿಸಿದೆ. ಅದೇ ರೀತಿ ಇರಾನ್‌ನಲ್ಲಿ ನಡೆಯುತ್ತಿರುವ ಹಿಜಾಬ್ ವಿರೋಧಿ ಆಂದೋಲನದ ಬಗ್ಗೆ ಮೌನ ಕಾಯ್ದುಕೊಂಡಿದೆ. ಈ ಕಾರಣದಿಂದ ಎರಡೂ ದೇಶ 'ಳು ಭಾರತಕ್ಕೆ ಮಹತ್ವ ನೀಡಿವೆ.

ಈ ರೀತಿ ಭಾರತವು ಪ್ರಸ್ತುತ ಜಾಗತಿಕ ಮಟ್ಟದಲ್ಲಿ ವಿಶ್ವಾಸಾರ್ಹತೆ, ಸಾಮರ್ಥ್ಯಗಳನ್ನು ತೋರುವ ರೀತಿಯಲ್ಲಿ ತಂತ್ರಗಾರಿಕೆ ಮಾಡುತ್ತಿದೆ. ರಷ್ಯಾ–ಇರಾನ್‌ಗಳ ಸ್ನೇಹಗಳಿಸಿ ಚೀನಾವನ್ನು ಮೆತ್ತಗಾಗಿಸಿದೆ. ಸೌದಿ–ಅರೇಬಿಯಾದ ವಿಶ್ವಾಸಗಳಿಸಿ ಟರ್ಕಿ, ಪಾಕಿಸ್ತಾನದಂತಹ ಭಯೋತ್ಪಾದನೆ ಬೆಂಬಲಿಸುವ ದೇಶಗಳ ಬಾಯಿ ಮುಚ್ಚಿಸಿದೆ. ಶ್ರೀಲಂಕಾ, ಬಾಂಗ್ಲಾದಂತಹ ದೇಶಗಳಿಗೆ ಸಂಕಷ್ಟದಲ್ಲಿ ಸಹಾಯ ಮಾಡಿ ಆಪದ್ಬಾಂಧವ ಎನಿಸಿದೆ. ಐರೋಪ್ಯ ದೇಶಗಳ ಸ್ವಲಾಭ ಮಾನ ಸಿಕತೆಗೆ ಅವುಗಳ ಭಾಷೆಯಲ್ಲಿ ಉತ್ತರ ನೀಡಿದೆ. ಡಾಲರ್ ಪ್ರಭುತ್ವ ಕೊನೆಗಾಣಿಸುವ ಭಾರತದ ಯತ್ನವನ್ನು ಅಮೇರಿಕ ನಿಸ್ಸಹಾಯಕವಾಗಿ ಗಮನಿಸುವಂತಹ ಪರಿಸ್ಥಿತಿ ನಿರ್ಮಿಸಿದೆ. **ಬಲಾಢಸ್ಯ ಪೃಥ್ವಿಃ ಮತ್ತು ವಸುದೈವ ಕುಟುಂಬಂ** ಎಂಬ ಶಕ್ತಿಶಾಲಿ ಮತ್ತು ಉದಾತ್ತ ಮೌಲ್ಯಗಳಿಗೆ ಅನುಗುಣವಾಗಿ ವಿಶ್ವ ರಾಜಕಾರಣದಲ್ಲಿ ಭಾರತವು ಮುಂದುವರಿಯುತ್ತಿದೆ. ಇದರ ಪರಿಣಾಮ ವಿಶ್ವದ ಎಲ್ಲಾ ಸಮಸ್ಯೆಗಳಿಗೆ ಭಾರತದ ಬಳಿ ಉತ್ತರವಿದೆ ಎಂಬ ಭಾವನೆಯಿಂದ ಜಗತ್ತು ಭಾರತದತ್ತ ವಿಶ್ವಾಸದಿಂದ ನೋಡುತ್ತಿದೆ.

ದಕ್ಷಿಣ ಕಾಶಿಯ ಶ್ರೀಕಂಠೇಶ್ವರನ ಮಹಾ ರಥೋತ್ಸವ



ಒಂದು ಮನವಿ

ಇಷ್ಟೆಲ್ಲಾ ಪರಂಪರೆ, ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ, ಐತಿಹಾಸಿಕ, ವಾಣಿಜ್ಯ ಮಹತ್ವವನ್ನು ಹೊಂದಿರುವ ನಂಜನಗೂಡು ಮತ್ತು ಕಪಿಲೆಯನ್ನು ಅಚ್ಚುಕಟ್ಟಾಗಿ ಕಾಪಾಡಿ ಕೊಳ್ಳುವ ಹೊಣೆಗಾರಿಕೆ ಮತ್ತು ಉತ್ತರದಾಯಿತ್ವ ನಮ್ಮದು ಎಂಬುದನ್ನು ಮರೆಯದಿರೋಣ.

ಬ್ಯಾ.ರಾ.ಪ್ರಸನ್ನಕುಮಾರ್
ಮೊ. 9206376889
Email- byaraaprajss@gmaill.com

ಕರ್ನಾಟಕದ ಅತಿ ದೊಡ್ಡ ದೇವಾಲಯ, ದಕ್ಷಿಣ ಕಾಶಿ, ದಕ್ಷಿಣ ಪ್ರಯಾಗ, ಗರಳಪುರಿಯೆಂದೇ ವಿಶ್ವ ಪ್ರಸಿದ್ಧವಾಗಿರುವ ನಂಜನಗೂಡು ಶ್ರೀಕಂಠೇಶ್ವರ ದೇವೀರಮ್ಮರು ನೆಲೆಗೊಂಡಿರುವ ಪುಣ್ಯ ಶ್ರೀಕ್ಷೇತ್ರವಾಗಿದೆ. ಈ ಕ್ಷೇತ್ರವು ಕಾವೇರಿಯ ಪ್ರಮುಖ ಉಪನದಿಯಾದ ಕಪಿಲಾ ಮತ್ತು ಕೌಂಡಿನ್ಯ (ಗುಂಡ್ಲು) ನದಿಯ ಸಂಗಮದ ಬಲಭಾಗದಲ್ಲಿ ಪೂರ್ವಾಭಿಮುಖವಾಗಿದೆ. ಚೋಳರು, ಹೊಯ್ಸಳರು, ಮೈಸೂರರಸರು, ಹೈದರಾಲಿ, ಟಿಪ್ಪು ಹೀಗೆ ಹಿಂದೂ, ಮುಸ್ಲಿಂ ರಾಜರಿಂದ ಆರಾಧಿಸಲ್ಪಟ್ಟು, ಶೈವ, ವೀರಶೈವ, ವೈಷ್ಣವ, ಶ್ರೀ ವೈಷ್ಣವರ ನಿತ್ಯ ಆರಾಧಕ ದೇವರಾಗಿದ್ದಾನೆ ಶ್ರೀಕಂಠೇಶ್ವರ.

ಪೌರಾಣಿಕ ಹಿನ್ನೆಲೆ: ಗೌತಮ ಋಷಿಯಿಂದ ಸ್ಥಾಪಿಸಲ್ಪಟ್ಟಿದೆಯೆಂದು ನಂಬಲಾಗಿರುವ ಶ್ರೀಕಂಠೇಶ್ವರ ದೇವಾಲಯವು, ಶಿವ ಪುರಾಣದಲ್ಲಿ ನಂಜನಗೂಡನ್ನು ಶ್ರೀ ಗರಳಪುರಿಯೆಂದು ಕರೆಯಲಾಗಿದೆ. ಶಿವನು ಕೇಶಿರಾಜನೆಂಬ ರಾಕ್ಷಸನನ್ನು ಕೊಂದ ಸ್ಥಳವು ಇದಾಗಿದೆ. ಶ್ರೀ ಪರಶುರಾಮನು ತನ್ನ ಮಾತೃಹತ್ಯೆಯ ಪಾಪಗಳನ್ನು ತೊಳೆಯಲು ನಂಜನಗೂಡಿಗೆ ಬಂದನು. ಆಗ ಶಿವನು ಪರಶುರಾಮನ ತಪಸ್ಸಿಗೆ ಒಂದು ಮಂಟಪ ನಿರ್ಮಾಣ ಮಾಡಿ ಅವನನ್ನು ಪಾಪಗಳಿಂದ ಮುಕ್ತಗೊಳಿಸಿ ಆಶೀರ್ವದಿಸಿದನು. ಪಾರ್ವತಿ ಕಪಿಲಾ ನದಿಯಲ್ಲಿ ರತ್ನ ಖಚಿತ ಮಣಿ ಕಿರೀಟದಿಂದ ಮುಳುಗೆದ್ದ ಮೇಲೆ ಈ ನದಿಯನ್ನು ಶಿವನು ದಕ್ಷಿಣದ ಮಣಿಕರ್ಣಿಕಾವೆಂದು ಕರೆದನು.

ಐತಿಹಾಸಿಕ ಹಿನ್ನೆಲೆ: ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯವು ದ್ರಾವಿಡ ಶೈಲಿಯಲ್ಲಿ ನಿರ್ಮಾಣವಾಗಿದ್ದರೂ ಇದು ಅನೇಕ ವಾಸ್ತುಶೈಲಿಗಳ ಮಿಶ್ರಣವೂ ಆಗಿದೆ. 9ನೆಯ ಶತಮಾನದಲ್ಲಿ ಗಂಗರು ಚಿಕ್ಕ ಗರ್ಭಗುಡಿಯನ್ನು ನಿರ್ಮಿಸುವ ಮೂಲಕ ದೇವಾಲಯ ನಿರ್ಮಾಣಕ್ಕೆ ನಾಂದಿ ಹಾಡಿದರು. ಮಹಾದ್ವಾರವನ್ನು ದಾಟಿ ದೇವಾಲಯದೊಳಗೆ ಕಾಲಿಟ್ಟೊಡನೆ ವಿಶಾಲ ತೆರೆದ ಹಜಾರದಲ್ಲಿ ಮನಸೆಳೆಯುವ ವಸಂತ ಮಂಟಪವಿದೆ. ಆಗ್ನೇಯದಲ್ಲಿ ಅಡುಗೆ ಮನೆ ಈಶಾನ್ಯದಲ್ಲಿ ಉಗ್ರಾಣವಿದೆ. ದಕ್ಷಿಣದಲ್ಲಿ ಚಿಕ್ಕ ದ್ವಾರವಿದೆ. ವಸಂತ ಮಂಟಪದಿಂದ ಮುಂದೆ ವಿಶಾಲ ಜಗುಲಿ, ಅದರ ಮೇಲೆ ಮೂಲ ಗರ್ಭಗುಡಿಯಲ್ಲಿ 3 ಅಡಿ ಎತ್ತರದ ಮೂಲ ಲಿಂಗ, ಶ್ರೀಕಂಠೇಶ್ವರನ ಲಿಂಗಕ್ಕೆ ಎದುರಾಗಿ 7.6 ಮೀ. ಎತ್ತರದ ಧ್ವಜಸ್ತಂಭ ಹಾಗೂ ಬಸವನಕಟ್ಟೆಗಳಿವೆ. 117 ಮೀಟರ್ ಉದ್ದ, 48 ಮೀಟರ್ ಅಗಲ, 147 ಬೃಹತ್ ಕಲ್ಲಿನ ಕಂಬಗಳು, 4 ಮೀಟರ್ ಎತ್ತರದ ಹೊರಗೋಡೆಗಳು ಒಳ ಛಾವಣಿಯ ಎತ್ತರವೇ 5.5 ಮೀಟರ್ ಏಳು ಅಂತಸ್ತುಗಳನ್ನೊಳಗೊಂಡ 37 ಮೀಟರ್ ಎತ್ತರದ ಬೃಹತ್ ಗೋಪುರ ಅದರ ಮೇಲೆ ಮೂರು ಮೀಟರ್ ಎತ್ತರದ ಚಿನ್ನದ ಸಪ್ತ ಕಳಶಗಳನ್ನು ಎರಡು ಕೊಂಬುಗಳ ಮಧ್ಯೆ ಜೋಡಿಸಲಾಗಿದೆ. ಕೈಸಾಲೆ, ಮುಖಮಂಟಪ, ದ್ವಾರಪಾಲಕರು, ಅದ್ಭುತ ಗಾರೆಗಚ್ಚಿನ ಮೂರ್ತಿಶಿಲ್ಪಗಳು. ಬೃಹದಾಕಾರದ ಗೋಡೆಗಳು, ಹೀಗಿರುವ ಮಹಾದೇವನ ಈ ಮಹಾದೇವಾಲಯವು ಒಂದು ನಿರ್ದಿಷ್ಟ ಕಾಲ, ಒಂದು ರಾಜಮನೆತನ, ಒಬ್ಬ ರಾಜನ ನಿರ್ಮಾಣದ ಕೊಡುಗೆಯಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ದೇವಾಲಯದ ಅಂಗಳದಲ್ಲಿ ದೇವೀರಮ್ಮ, ನಾರಾಯಣ, ಸುಬ್ರಹ್ಮಣ್ಯ, ಗಣೇಶ, ಶಾರದೆ, ನವಗ್ರಹ ಮಂಟಪ, ತಾಂಡವೇಶ್ವರ, ಉತ್ಸವಮೂರ್ತಿ ಗುಡಿಗಳಿವೆ.

ಚೋಳ ಮತ್ತು ಗಂಗರ ಆಡಳಿತದ ಕಾಲದಲ್ಲಿ ಒಳ ಮಂಟಪ, ಜಾಲಾಂಧ್ರಗಳು, ದೇವಾಲಯದೊಳಗೆ ಚಪ್ಪಡಿ ಹಾಸುಗಳನ್ನು ಹಾಕಿದ್ದರೆ, ಹೊಯ್ಸಳರ ಕಾಲದಲ್ಲಿ ವೈವಿಧ್ಯಮಯ ಕಲ್ಲಿನ ಕಂಬಗಳು, ಬಲಿಪೀಠವು ನಿರ್ಮಾಣವಾಗಿದ್ದರೆ, ವಿಜಯನಗರದ ವಾಸ್ತುಶಿಲ್ಪ ಶೈಲಿಯ ಕಾಲದ ಕಂಬಗಳ ರಚನೆಯು ಇದೆ. ದೇವಾಲಯದಲ್ಲಿ ಕೃಷ್ಣದೇವರಾಯನ ದತ್ತಿ ಶಾಸನವಿರುವುದರಿಂದ ದೇವೀರಮ್ಮನ ಗುಡಿ, ನಾರಾಯಣ ಗುಡಿ, ಮಹಾದ್ವಾರ ಮತ್ತು ಗೋಪುರವು ಇವರ ಕಾಲದ ಕೊಡುಗೆಯೆಂಬುದನ್ನು ಸಾಕ್ಷೀಕರಿಸುತ್ತದೆ. 1644 ರಲ್ಲಿ ದಳವಾಯಿ ವಿಕ್ರಮರಾಯ ಆರು ಅಡಿ ಎತ್ತರದ ನಂದಿಯನ್ನು ನಿರ್ಮಾಣ ಮಾಡಿದನು. ಕಳಲೆ ನಂಜರಾಜಯ್ಯನು 63 ಶೈವ ಪುರಾತನ ಲೋಹ ಮೂರ್ತಿಗಳನ್ನು ಮಾಡಿಸಿಕೊಟ್ಟನು.

ಮುಮ್ಮಡಿ ಕೃಷ್ಣರಾಜ ಒಡೆಯರ ಕೊಡುಗೆ: ಇವತ್ತು ನಾವು ನೋಡುತ್ತಿರುವ ದೇವಾಲಯ ಮುಮ್ಮಡಿ ಕೃಷ್ಣರಾಜರ ಕೊಡುಗೆ. ಏಕೆಂದರೆ ಈ ಹಿಂದಿನ ರಾಜರು ನಿರ್ಮಿಸಿದ್ದ ದೇವಾಲಯದಲ್ಲಿ ಅನೇಕ ಬದಲಾವಣೆಗಳನ್ನು ಮಾಡಿ ದೇವಾಲಯದ ಮುಂದೆ ಏಳು ಚಿನ್ನದ ಕಳಸಗಳಿರುವ, ಏಳು ಅಂತಸ್ತಿನ 120 ಅಡಿ ಎತ್ತರದ ಮಹಾ ಗೋಪುರವನ್ನು 1849ರಲ್ಲಿ ಮುಮ್ಮಡಿ ಕೃಷ್ಣರಾಜರ ಪತ್ನಿ ದೇವರಾಜಮ್ಮಣ್ಣಿ ನಿರ್ಮಿಸಿದರು ಎಂಬುದನ್ನು ಮಹಾದ್ವಾರದಲ್ಲಿರುವ ಶಾಸನವು ತಿಳಿಸುತ್ತದೆ. ದ್ವಾರದ ಮುಂದಿರುವ ಗಾರೆಶಿಲ್ಪಗಳಿಂದ ಕೂಡಿದ ಮಂಟಪವನ್ನು ನೀಲಗಿಯ ಮುದ್ದಣ್ಣನು 1900ರಲ್ಲಿ ನಿರ್ಮಿಸಿದನು. ಮುಮ್ಮಡಿ ಕೃಷ್ಣರಾಜರು ಶಿವನ ಲೀಲಾ ಮೂರ್ತಿ, ಲಿಂಗೋದ್ಭವ ಮೂರ್ತಿ, 1819 ರಲ್ಲಿ ದೊಡ್ಡ ತೇರು ಮತ್ತು ಪಾರ್ವತಮ್ಮನ ತೇರನ್ನು ಮುಮ್ಮಡಿ ಕೃಷ್ಣರಾಜ ಒಡೆಯರ್ ಮಾಡಿಸಿದರು. ಮಹಾರಾಜರು ಮತ್ತವರ ನಾಲ್ಕು ಪತ್ನಿಯರ ವಿಗ್ರಹಗಳು ಸಹ ದೇವಾಲಯದಲ್ಲಿವೆ.

ಟಿಪ್ಪು ಸುಲ್ತಾನನ ಪಟ್ಟದಾನೆಯ ಕಣ್ಣು ಕುರುಡಾದಾಗ ದಿವಾನ್ ಪೂರ್ಣಯ್ಯನವರ ಸಲಹೆಯಂತೆ ಶ್ರೀಕಂಠೇಶ್ವರನಿಗೆ ಟಿಪ್ಪು ಹರಕೆ ಮಾಡಿಕೊಂಡನು. 48 ದಿನದೊಳಗೆ ಆನೆಯ ದೃಷ್ಟಿ ಸರಿಯಾಯಿತು. ಟಿಪ್ಪುವಿಗೆ ಶ್ರೀಕಂಠನ ಮೇಲೆ ಭಕ್ತಿ ಮೂಡಿ ಪಚ್ಚೆ ಹಸಿರು ಲಿಂಗವನ್ನು ಸಮರ್ಪಿಸಿ ಹಕಿಂ (ವೈದ್ಯ) ನಂಜುಂಡ ಎಂದು ಕರೆದನು. ಶ್ರೀಕಂಠೇಶ್ವರನು ಲಕ್ಷಾಂತರ ಭಕ್ತರ ಮನೆ ದೇವರಾಗಿದ್ದು, ಅವರು ತಮ್ಮ ಮನೆಯಲ್ಲಿ ನಡೆಯುವ ಯಾವುದೇ ಸಮಾರಂಭಗಳಿಗೂ ಮೊದಲು ಇಲ್ಲಿ ದರ್ಶನ ಪಡೆದು ನಂತರ ಮುಂದುವರೆಯುತ್ತಾರೆ.

ಪಂಚ ಮಹಾರಥೋತ್ಸವ: ನಾಳೆ (ಏ.3) ನಡೆಯಲಿರುವ ನಂಜನಗೂಡಿನ ದೊಡ್ಡಜಾತ್ರೆಯಂದು ಶ್ರೀಕಂಠೇಶ್ವರನ ಮಹಾ ರಥೋತ್ಸವ ನಡೆಯುತ್ತದೆ. ಪಂಚ ಮಹಾರಥಗಳಲ್ಲಿ ಮೊದಲು ಗಣಪತಿ ರಥ, ಎರಡನೆಯದು ಚಂಡೀಕೇಶ್ವರ ರಥ, ಮೂರನೆಯದು ತೊಂಭತ್ತು ಅಡಿ ಎತ್ತರದ ಗೌತಮ ರಥ, ನಾಲ್ಕನೆಯದು ಸುಬ್ರಹ್ಮಣ್ಯ ರಥ ಮತ್ತು ಐದನೆಯದು ಪಾರ್ವತಮ್ಮನವರ ರಥ ಉತ್ಸವ ಮೆರವಣಿಗೆಗಳೊಂದಿಗೆ ಸಾಗಿ, ಲಕ್ಷಾಂತರ ಭಕ್ತರು ಭಾವ ಪರವಶತೆಯಿಂದ ತೇರನೆಳೆದು ಶ್ರೀಕಂಠೇಶ್ವರನ ಕೃಪೆಗೆ ಪಾತ್ರರಾಗಿ ಜೀವನವನ್ನು ಪಾವನಗೊಳಿಸಿಕೊಳ್ಳುತ್ತಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ವಾರದ ಮಿತ್ರ
ಸಾಪ್ತಾಹಿಕ ಪುರವಣಿ
ಮೈಸೂರು ಮಿತ್ರ
ಭಾನುವಾರ 2-04-2023

ಬೇಸಿಗೆ ಬೇಸರ ಬೇಡ

ಮ.ನ.ಲತಾಮೋಹನ್
ಮೊ. 9481831434





ಅಬ್ಬಾ ಏನಪ್ಪಾ ಈ ಬಿಸಿಲು ಎನ್ನುವುದರ ಬದಲು ಅದನ್ನೇ ನಮಗೆ ಸಾಧಕವಾಗುವಂತೆ ನೋಡಿಕೊಳ್ಳಬೇಕು. ಬೇರೆ ಕಾಲಗಳಂತೆ ಬೇಸಿಗೆಯಲ್ಲಿ ನಮ್ಮ ದೇಹಕ್ಕೆ ಬೇಕಾದ ವಿಟಮಿನ್‌ಗಳೂ ಸಿಗುತ್ತದೆ. ಅದನ್ನೇ ಸದ್ಬಳಕೆ ಮಾಡಿಕೊಳ್ಳುವುದು ಉತ್ತಮ. ಬೇಸಿಗೆಯೆಂದರೆ ವರ್ಷದ ಕೆಲಸ ಕಾರ್ಯಗಳ ನಡುವೆ ದೇಹ–ಮನಸುಗಳಿಗೆ ಒಂದಿಷ್ಟು ವಿಶ್ರಾಂತಿ ತೆಗೆದುಕೊಳ್ಳುವ ಕಾಲ. ಹಿತಮಿತವಾದ ಆಹಾರ ಮತ್ತು ಸರಿಯಾದ ಕಾಳಜಿ ವಹಿಸಿದರೆ ಬೇಸಿಗೆ ನಮಗೆ ನಿಜಕ್ಕೂ ಆರಾಮದಾಯಕವಾಗಬಲ್ಲುದು. ಚಳಿಗಾಲದ ಮೈ ಕೈಗಳ ಮುದುರುವಿಕೆಯಿಲ್ಲದೆ ಮಳೆಗಾಲದ ಜಿಟಿಜಿಟಿ ಇಲ್ಲದೆ ಮೈ ಮನಸ್ಸಿಗೆ ಉಲ್ಲಾಸ ನೀಡುವ ಬೇಸಿಗೆಯನ್ನು ಸ್ವಾಗತಿಸೋಣ. ಹಬ್ಬ, ಜಾತ್ರೆ, ಮದುವೆ ಮುಂತಾದ ಸಮಾರಂಭಗಳಿಗೆ ಮುನ್ನುಡಿ ಬರೆಯುವ ಬೇಸಿಗೆ ಹೃನ್ಮನವನ್ನು ಸದಾ ಹಚ್ಚ ಹಸಿರಾಗಿಸುವ ಕಾಲವೆಂದರೆ ಅತಿಶಯೋಕ್ತಿಯೇನಿಲ್ಲ.

ಬಿಸಿಲಿನ ಝಳ ಎಲ್ಲೆಲ್ಲೂ ತನ್ನ ಪಾರುಪತ್ಯ ಮೆರೆಯುತ್ತಿದೆ. ಹೊರಗೆ ಮುಖ ಹಾಕಲೂ ಬೇಸರದ ಪರಿಸ್ಥಿತಿ ನಿರ್ಮಾಣವಾಗಿದೆ. ಬೇಸಿಗೆಗೆ ಎಷ್ಟು ತಂಪು ಪಾನೀಯಗಳನ್ನು ಕುಡಿದರೂ ತಂಪೆನಿಸದಷ್ಟು ಬಿಸಿಯ ಅನುಭವವಾಗುತ್ತಿದೆ. ಚರ್ಮದ ಅಂದ ವೆಲ್ಲಾ ಮುದುಡುತ್ತಿದೆ. ತಂಪಿನ ವಾತಾವರಣವನ್ನು ಮನ ಬಯಸುವಂತಾಗಿದೆ. ಆದರೂ ಹೊರ ಜಗತ್ತಿನೊಂದಿಗೆ ರಾಜೀ ಮಾಡಿಕೊಳ್ಳಲೇಬೇಕಾದ ಅನಿವಾರ್ಯತೆ ಎದುರಾಗಿದೆ. ಬೇಸಿಗೆಯ ಬಿಸಿಲು ನಮ್ಮನ್ನು ಮಾಸಲು ಮಾಡುವ ಮುನ್ನ ಕೆಲವೊಂದು ಕ್ರಮಗಳನ್ನು ಅನುಸರಿಸಿದರೆ ಉತ್ತಮ.

■ **ತ್ವಚೆಯ ಸೌಂದರ್ಯ:** ಸಿಹಿಗೆಣಸು, ಕ್ಯಾರೆಟ್, ಮಾವು, ಸೊಪ್ಪು, ಹಾಲು, ಮೊಟ್ಟೆ, ಕುಂಬಳ, ಪರಂಗಿಹಣ್ಣು, ಇತ್ಯಾದಿಗಳಲ್ಲಿ ಬಹುತೇಕ ಎಲ್ಲಾ ಬಗೆಯ ವಿಟಮಿನ್‌ಗಳೂ ಅಡಗಿವೆ. ನೆಲ್ಲಿಕಾಯಿ, ಹಾಗಲಕಾಯಿ, ಒಣದ್ರಾಕ್ಷಿ ಇತ್ಯಾದಿಗಳನ್ನು ನೀರಿನೊಂದಿಗೆ (ನೆನೆಸಿ ಅಥವಾ ಬೆರೆಸಿ) ಸೇವಿಸಿ. ರಕ್ತದ ಶುದ್ಧೀಕರಣ ಹಾಗೂ ಕಂಗಳ ಬೆಳಕು ಹೆಚ್ಚಿಸಲು ಆದಷ್ಟು ತಾಜಾ ಕ್ಯಾರೆಟ್ ಅನ್ನು ಹಸಿಯಾಗಿಯೇ (ಸಲಾಡ್, ಕೋಸಂಬರಿ ರೂಪದಲ್ಲಿ) ಸೇವಿಸಿ.

ಪ್ರತಿ ದಿನ ಕನಿಷ್ಠ 8–10 ದೊಡ್ಡ ಲೋಟ ನೀರು ಕುಡಿಯಿರಿ. ದೇಹದಲ್ಲಿ ಜಮೆಯಾಗುವ ಹಾನಿಕಾರಕ ಪದಾರ್ಥಗಳನ್ನು ಹೊರಗೆಸೆಯುವಲ್ಲಿ ಹಾಗೂ ಶುದ್ಧೀಕರಣದಲ್ಲಿ ನೀರು ಪ್ರಧಾನ ಪಾತ್ರ ವಹಿಸುತ್ತದೆ.

ವಿಟಮಿನ್ ಸಿ ನಮ್ಮ ದೇಹದ ಸಿಮೆಂಟ್ ಮೆಟೀರಿಯಲ್ ಎಂದೇ ತಿಳಿಯಲಾಗಿದೆ. ಇದರ ಕೊರತೆಯಿಂದಾಗಿ ಚರ್ಮದಲ್ಲಿ ಸುಕ್ಕುಗಳು ಕಾಣಿಸಿಕೊಳ್ಳುತ್ತವೆ. ಜೊತೆಗೆ ಕಣ್ಣಿನ ದೃಷ್ಟಿಯೂ ಮಂಕಾಗತೊಡಗುತ್ತದೆ. ಇದನ್ನು ತಪ್ಪಿಸುವುದಕ್ಕಾಗಿ ಬ್ರೋಕ್ಲಿ, ಹೂಕೋಸು, ನಿಂಬೆಹಣ್ಣು, ಸ್ಟ್ರಾಬೆರಿ, ಸಾಸಿವೆ (ಇದರ ಸೊಪ್ಪು ಸಿಗದಿದ್ದರೆ ಮೂಲಂಗಿ ಸೊಪ್ಪು ಬಳಸಬಹುದು), ಪರಂಗಿಹಣ್ಣು, ಎಲೆಕೋಸು, ಬಗೆಬಗೆಯ ಸೊಪ್ಪುಗಳು, ಕಿತ್ತಳೆಹಣ್ಣು, ಬಿಳಿ/ಕಪ್ಪು ದ್ರಾಕ್ಷಿ, ಟೊಮೆಟೊ, ಸ್ಟ್ರಾಬೆರಿ, ಸೆಲೆರಿ, ಅನಾನಸ್, ಕಲ್ಲಂಗಡಿ ಹಣ್ಣು, ಕರ್ಬೂಜಾ, ಸೌತೇಕಾಯಿ (ವಿಭಿನ್ನ ಬಗೆಯವು), ಹಸಿ ಬಟಾಣಿ, ಈರುಳ್ಳಿ, ಬೆಳ್ಳುಳ್ಳಿ, ಆಲೂಗಡ್ಡೆ, ಸೇಬು, ಬಾಳೆಹಣ್ಣು ಇತ್ಯಾದಿಗಳನ್ನು ಸೇವಿಸಬೇಕು.

ತ್ವಚೆಯ ಸೌಂದರ್ಯ ಹೆಚ್ಚಿಸುವುದಕ್ಕಾಗಿ, ಹಿಂದಿನ ರಾತ್ರಿ ಮೆಂತ್ಯ ನೆನೆಹಾಕಿ ಮಾರನೇ ದಿನ ನುಣ್ಣಗೆ ಅರೆದು, ನೀರು ಮಜ್ಜಿಗೆಯಲ್ಲಿ ಕದಡಿಕೊಂಡು ಕುಡಿಯಿರಿ. ಪ್ರತಿ ದಿನ ಮೆಂತ್ಯಸೊಪ್ಪನ್ನು ಸಲಾಡ್ ರೂಪದಲ್ಲಿ ಹಸಿಯಾಗಿಯೇ (ಈರುಳ್ಳಿ–ಟೊಮೆಟೊ ಬಿಲ್ಲೆಗಳೊಂದಿಗೆ) ಸೇವಿಸಿ. ಅಡುಗೆಗೆ ಮೆಂತ್ಯಸೊಪ್ಪನ್ನು ಬಳಸುವಾಗ, ಧಾರಾಳವಾಗಿ ಜೊತೆಗೆ ಕರಿಬೇವನ್ನೂ ಸೇರಿಸಿಕೊಳ್ಳಿ. ಈ ಮಿಕ್ಸ್ ಕೂದಲಿನ ಬೆಳವಣಿಗೆಗೆ ಪೂರಕ. ಹೂಕೋಸು ನಿಜಕ್ಕೂ ಇನ್ನರ್ ಬಾಡಿ ಕ್ಲೀನರ್ ಆಗಿದೆ. ಇದನ್ನು ಲಘುವಾಗಿ ಫ್ರೈ ಮಾಡಿ ಬೇಯಿಸಬೇಕೇ ಹೊರತು ಬೇರೆ ತರಕಾರಿಗಳಂತೆ ತುಂಬಾ ಬೇಯಿಸಬಾರದು. (ಇದನ್ನು ಬೇಯಿಸದೆ ಹಾಗೆಯೇ ಹಸಿಯಾಗಿ ಸೇವಿಸಬಹುದು. ಇದರಲ್ಲಿನ ಟಾಕ್ಸಿನ್ ಅಂಶಗಳು ಹಾನಿ ಮಾಡುವ ಸಂಭವವಿದೆ. ಹೀಗೆ ಅರೆ ಬೇಯಿಸುವಿಕೆಯೇ ಉತ್ತಮ ಉಪಾಯ) ನಿಮ್ಮ ಸ್ಕಿನ್ ಬಹಳ ಡ್ರೈ ಎನಿಸಿದರೆ, ಅರೆ ಬೆಂದ ಹೂಕೋಸನ್ನು ಮಿಕ್ಸಿಯಲ್ಲಿ ಜೂಸ್ ಮಾಡಿ ಸೇವಿಸಿದರೆ ಹೆಚ್ಚಿನ ಲಾಭವಿದೆ.



ತುಳಸಿ ಎಲೆಗಳನ್ನು ಪೇಸ್ಟ್ ಮಾಡಿ ತಣ್ಣೀರು, ಎಳನೀರು, ನೀರು ಮಜ್ಜಿಗೆ, ಬಾರ್ಲಿ ಬೇಯಿಸಿ ಬಸಿದ ನೀರು ಇತ್ಯಾದಿಗಳೊಂದಿಗೆ ಬೆರೆಸಿ ಕುಡಿದಾಗ ರಕ್ತದ ಕೊರತೆಯ ಸಮಸ್ಯೆ (ಅನೀಮಿಕ್) ತಾನಾಗಿ ದೂರಾಗುತ್ತದೆ. ಎಳೆನೀರಿನಿಂದ ಆಗಾಗ ಮುಖ ತೊಳೆಯುವುದೂ ಒಳ್ಳೆಯದು.

ತಾಟಿನೊಂಗು ಕೂಡ ಬೇಸಿಗೆಗೆ ಬಲು ಹಿತಕಾರಿ. ಇದನ್ನು ಆದಷ್ಟು ಹೆಚ್ಚಾಗಿ ಸೇವಿಸಿ, ಜೊತೆಗೆ ಪೇಸ್ಟ್ ಮಾಡಿ ಮುಖಕ್ಕೆ ಪ್ಯಾಕ್ ಮಾಡಿಕೊಳ್ಳುವುದರಿಂದ, ಚರ್ಮಕ್ಕೆ ಹೆಚ್ಚಿನ ಕಾಂತಿ, ಹೊಳಪು ಮೂಡುತ್ತದೆ.

ವಿಟಮಿನ್ ಈ ಆಂಟಿ ಏಜಿಂಗ್ ವಿಟಮಿನ್ ಆಗಿದೆ. ತ್ವಚೆಯನ್ನು ಸುಕ್ಕುಗಳಿಂದ ರಕ್ಷಿಸಲು ನಮ್ಮ ಆಹಾರದಲ್ಲಿ ಇದನ್ನು ಅಗತ್ಯವಾಗಿ ಬೆರೆಸಿಕೊಳ್ಳಬೇಕು. ಸೊಪ್ಪು – ಹಸಿ ತರಕಾರಿ, ಸೋಯಾಬೀನ್ಸ್, ನಟ್ಸ್ ಇತ್ಯಾದಿಗಳು ವಿಟಮಿನ್ ಈ ತುಂಬಿರುವ ಆಕರಗಳಾಗಿವೆ.

ವಿಟಮಿನ್ ಬಿ–2ನ ಕೊರತೆಯಾದಾಗ ತುಟಿಗಳು ಒಡೆಯತೊಡಗುತ್ತವೆ. ಮಾಂಸ, ಮೀನು, ಮೊಟ್ಟೆ, ಹಾಲು ಇತ್ಯಾದಿಗಳ ಸೇವನೆಯಿಂದ ವಿಟಮಿನ್ ಬಿ–2ನ ಕೊರತೆ ನಿವಾರಣೆಯಾಗುತ್ತದೆ. ವಿಟಮಿನ್ ಬಿ ಕಾಂಪ್ಲೆಕ್ಸ್‌ನ ಕೊರತೆಯಿಂದ ಉಗುರು ಸೀಳುವಿಕೆ, ತ್ವಚೆ ಕೆಟ್ಟದಾಗಿ ಕಂಡುಬರುವುದು ಇತ್ಯಾದಿ ಸಮಸ್ಯೆ ಕಾಡಬಹುದು. ಜಿಲೆಟಿನ್ ಬಳಸುವುದರಿಂದ ಅದನ್ನು ನಿವಾರಿಸಬಹುದು. ನಮ್ಮ ಆಹಾರದಲ್ಲಿ ಬೇಳೆ, ಮೊಳಕೆ ಕಟ್ಟಿದ ಕಾಳು, ಹಸಿ ತರಕಾರಿ ಇತ್ಯಾದಿಗಳನ್ನು ಬಳಸುವುದರಿಂದ ಈ ಸಮಸ್ಯೆ ನೀಗುತ್ತದೆ.

ನುಗ್ಗೆಸೊಪ್ಪಿನ ಸೂಪ್, ನುಗ್ಗೆಸೊಪ್ಪಿನ ಪಲ್ಯ ತಯಾರಿಸಿ ಸೇವಿಸುವುದರಿಂದ ಚರ್ಮದ ಕಾಂತಿ ವರ್ಧಿಸುತ್ತದೆ. ನುಗ್ಗೆಕಾಯಿಯ ಸೇವನೆ ಸಂತಾನ ಪ್ರಾಪ್ತಿಗೆ ಸಹಕಾರಿ.

ಲೆಸಿಥಿನ್ ಎಂಬ ಪೋಷಕಾಂಶ ದೈನಂದಿನ ಆರೋಗ್ಯಕ್ಕೆ ಅತ್ಯಗತ್ಯ ಚರ್ಮವನ್ನು ಹೆಚ್ಚು ಕೋಮಲವಾಗಿರಿಸಲು ಇದು ಪೂರಕ. ಮೊಟ್ಟೆ ಪ್ರಾಣಿಗಳ ಯಕೃತ್ತು, ಸೋಯಾ ಬೀನ್ಸ್, ಹಣ್ಣುಗಳ ರಸ, ಈರುಳ್ಳಿ – ಬೆಳ್ಳುಳ್ಳಿ ಹಸಿ ಚಟ್ನಿ (ಸಲಾಡ್), ಆಪಲ್ ಜ್ಯೂಸಗಳಲ್ಲಿ ಲೆಸಿಥಿನ್ ದಂಡಿಯಾಗಿದೆ, ಚರ್ಮದ ಸೊಗಸು ಹೆಚ್ಚಿಸುತ್ತದೆ.

■ **ಸ್ಟೈಲಿಷ್ ಉಡುಗೆಗಳು:** ಸ್ಪನ್ ಮತ್ತು ಕಾಟನ್ ಟೀ ಶರ್ಟ್ಸ್‌ಗಳ ಆಯ್ಕೆ ಉತ್ತಮ. ಬಿಸಿಲಿಗೆ ಹೋಗುವಾಗ ಫಿಟ್ ಜೀನ್ಸ್‌ಗಳನ್ನು ಧರಿಸಬೇಡಿ. ಹುಡುಗಿಯರಿಗೆ ಲೆಗ್ಗಿಂಗ್ಸ್ ಕಂಫರ್ಟ್ ನೀಡುತ್ತದೆ. ಗಾಢ ಬಣ್ಣದ ಬಟ್ಟೆಗಳಿಂದ ದೂರವಿಡಿ. ಬಿಳಿ, ಗುಲಾಬಿ, ಆಕಾಶ ನೀಲಿ ತಿಳಿ ಹಸಿರು, ಹಳದಿ ಬಟ್ಟೆಗಳು ಆರಾಮದಾಯಕ. ಫ್ಯಾಬ್ರಿಕ್ ಬಟ್ಟೆಗಳು ಉತ್ತಮ. ಹತ್ತಿ ಬಟ್ಟೆಗಳನ್ನು ಧರಿಸುವುದರಿಂದ ಅದರಲ್ಲಿರುವ ರಂಧ್ರಗಳ ಮೂಲಕ ಗಾಳಿ ಹಾದು ಹೋಗುವುದರಿಂದ ಇನ್‌ಫೆಕ್ಷನ್ ಕಡಿಮೆ ಆಗುತ್ತದೆ. ಸ್ಲೀವ್ ಲೆಸ್, ಕಾಲರ್ ಲೆಸ್ ಬಟ್ಟೆಗಳು ಉತ್ತಮ. ಲಾಂಗ್ ಮತ್ತು ಶಾರ್ಟ್ ಸ್ಕರ್ಟ್‌ಗಳು ಒಳ್ಳೆಯದು. ಪಟಿಯಾಲ ಪ್ಯಾಂಟ್ ಮತ್ತು ಕುರ್ತಾಗಳು ಒಳ್ಳೆ ಲುಕ್ ಜೊತೆಗೆ ಆರಾಮವಾಗಿರುತ್ತದೆ. ಕಾಫ್ತನ್ ಮಾದರಿಯ ಟಾಪ್ ದೇಹಕ್ಕೆ ಹೊಸ ಅನುಭವ ನೀಡುತ್ತದೆ. ಜಂಪ್‌ಸೂಟ್ ಫ್ಯಾಷನೇಬಲ್ ಮತ್ತು ಸಡಿಲವಾಗಿರುತ್ತದೆ. ಟ್ರೌಸರ್ ಮಾದರಿಯ ಪ್ಯಾಂಟ್ ಉತ್ತಮ. ಇಲಾಸ್ಟಿಕ್ ಬಟ್ಟೆಗಳಿಂದ ದೂರವಿಡಿ.

■ **ತ್ವಚೆಯ ಆರೈಕೆ:** ಬೇಸಿಗೆಯಲ್ಲಿ ಮೇಕಪ್‌ನಿಂದ ದೂರವಿರುವುದು ಒಳ್ಳೆಯದು. ಮುಖಕ್ಕೆ ಫೌಂಡೇಷನ್ ಬದಲು ಕನ್ಸೀಲರ್ ಬಳಸುವುದು ಒಳ್ಳೆಯದು. ಕಣ್ಣಿಗೆ ಗಾಢವಾದ ಕಾಜಲ್ ಬೇಡ. ಲಿಪ್ ಗ್ಲೋಸ್ ಬಳಸಿ. ತಿಳಿ ಬಣ್ಣದ ಕಾಟನ್ ಬಟ್ಟೆಗಳನ್ನೇ ಬಳಸಿ. ಆಭರಣ ಭಾರವಾದದ್ದು ಅಗಲವಾದದ್ದು ಬಳಸಬಾರದು.

ತೆಂಗಿನ ಹಾಲನ್ನು ಮುಖ, ತುಟಿಗಳಿಗೆ ಲೇಪಿಸಿಕೊಳ್ಳಿ ಇದು ಹೊಳಪು ನೀಡುತ್ತದೆ. ಹಸಿ ಹಾಲಿನಲ್ಲಿ ಹತ್ತಿಯ ಸಣ್ಣ ಉಂಡೆಗಳನ್ನು ಮಾಡಿ ಅದ್ದಿ ಮುಖಕ್ಕೆ ಕ್ಲೆನ್ಸಿಂಗ್ ಮಾಡಿಕೊಳ್ಳಿ. ಕಣ್ಣಿಗೆ ಕಾಣದಿರುವ ಧೂಳು, ಕೊಳೆ ನಾಶವಾಗಿ ರಂಧ್ರಗಳು ಕ್ಲೀನ್ ಆಗುತ್ತದೆ.

■ **ಫಿಟ್ನೆಸ್‌ಗೆ ಸಕಾಲ:** ಬೇಸಿಗೆಯಲ್ಲಿ ನಿದ್ದೆ, ಊಟಕ್ಕೆ ರಿಲ್ಯಾಕ್ಸ್ ಸಿಗುವುದಂತೂ ಗ್ಯಾರಂಟಿ. ಹೆಚ್ಚಿನ ನೀರು, ದ್ರವ ಆಹಾರಗಳ ಸೇವನೆ, ಹಿತಮಿತವಾದ ಊಟ, ಬಿರುಸು ನಡಿಗೆ, ಮೆಟ್ಟಿಲು ಹತ್ತಿ ಇಳಿಯುವುದರಿಂದ ಎಷ್ಟೋ ಕ್ಯಾಲೊರಿ ಕಮ್ಮಿಯಾಗುತ್ತದೆ. ರಾತ್ರಿ ಬೇಗ ಊಟ ಮುಗಿಸಿ ಬೇಗ ಮಲಗಿ ಬೇಗ ಏಳುವುದರಿಂದ ಫ್ರೆಷ್‌ನೆಸ್ ದೊರೆಯುತ್ತದೆ. ಬೇಸಿಗೆಯಲ್ಲಿ ಚರ್ಮಕ್ಕೆ ಬಹಳ ಬೇಗ ಹಾನಿ ಆಗಿಬಿಡುತ್ತದೆ ಬೇಸಿಗೆಯಲ್ಲಿ ಅತಿಯಾಗಿ ಕಾಡುವ ಸಮಸ್ಯೆ ಎಂದರೆ ಸನ್‌ಬರ್ನ್. ಚರ್ಮದಲ್ಲಿ ಅಲ್ಲಲ್ಲಿ ಕಪ್ಪು ಮಚ್ಚೆಗಳು ಕಂಡು ಬರುತ್ತದೆ. ಉರಿಯೂ ಕಂಡು ಬರುತ್ತದೆ. ನೀವು ಇದಕ್ಕಾಗಿ ಎರಡು ದಿನಕ್ಕೊಮ್ಮೆ ಸೌತೆಕಾಯಿ ಅಥವಾ ಚಂದನದ ಪ್ಯಾಕ್ ಅನ್ನು ಮನೆಯಲ್ಲೇ ತಯಾರಿಸಿಕೊಂಡು ಹಚ್ಚಿಕೊಳ್ಳಬಹುದು. ಕಲ್ಲಂಗಡಿ ಹಣ್ಣಿನಿಂದ ಮುಖ, ಕೈ ಕಾಲು ತೊಳೆಯುವುದರಿಂದಲೂ ಚರ್ಮದ ಸಮಸ್ಯೆಯಿಂದ ದೂರ ಉಳಿಯಬಹುದು.

ಸನ್ ಕ್ರೀಮ್ ಲೋಷನ್, ಬಾಡಿ ಲೋಷನ್‌ಗಳನ್ನು ಕಂಪನಿಯ ಗುಣಮಟ್ಟ ಮತ್ತು ಉತ್ಪಾದನಾ ದಿನಾಂಕವನ್ನು ನೋಡಿ ತೆಗೆದುಕೊಳ್ಳುವುದು ಉತ್ತಮ. ಮೈಯಿಂದ ವಾಸನೆ ಬರದಿರಲು ಬಾಡಿ ಬ್ರಷ್ ಉಪಯೋಗಿಸಿ. ಕೈ ಕಾಲುಗಳನ್ನು ತಿಕ್ಕುವುದರಿಂದ ಚರ್ಮದ ಮೃತ ಕೋಶಗಳು ನಾಶವಾಗುತ್ತದೆ. ರಕ್ತ ಸಂಚಾರವೂ ತೀವ್ರಗೊಳ್ಳುತ್ತದೆ. ಉಗುರು ಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡುವುದರಿಂದ ಕಾಂತಿ ಹೆಚ್ಚಾಗುತ್ತದೆ. ಸ್ನಾನದ ನೀರಿಗೆ ಲಾವಂಚ ಬೇರು ಅಥವಾ ಕೊಬ್ಬರಿ ಎಣ್ಣೆ ಹಾಕಿಕೊಳ್ಳುವುದರಿಂದ ಸದಾ ಕೂಲ್ ಆಗಿರುವುದು.

■ **ಮಿಲ್ಕ್ ಶೇಕ್‌ಗಳು:** ನಿಮ್ಮ ಉಪಹಾರದ ಜೊತೆಗೆ ಒಂದು ರುಚಿಕರವಾದ ಪಾನೀಯವನ್ನು ಸವಿಯುವುದು ಯಾವತ್ತಿಗೂ ಒಳ್ಳೆಯದೇ. ಬೆಳ್ಳಂಬೆಳಗ್ಗೆಯೇ ಹಬೆಯಾಡುವ ಕಾಫಿ ಮತ್ತು ಟೀಯನ್ನು ಸವಿಯಲು ನಿಮಗೆ ಇಷ್ಟವಾಗದಿದ್ದಲ್ಲಿ, ಮಿಲ್ಕ್‌ಶೇಕ್ ನಿಮಗೆ ಹೇಳಿ ಮಾಡಿಸಿದ ಆಯ್ಕೆಯಾಗಿರುತ್ತದೆ. ನಮ್ಮ ದಿನ ಚೆನ್ನಾಗಿರಬೇಕಾದಲ್ಲಿ, ನಮ್ಮ ಉಪಾಹಾರವು ಅಷ್ಟೇ ಚೆನ್ನಾಗಿರಬೇಕು. ಉಪಾಹಾರವು ನಮ್ಮ ಆರೋಗ್ಯವನ್ನು ನಿರ್ಧರಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಬೆಳಗಿನ ಉಪಹಾರದ ಜೊತೆಯಲ್ಲಿ ಸೇವಿಸಲು ಮಿಲ್ಕ್‌ಶೇಕ್‌ಗಳ ದೊಡ್ಡ ಪಟ್ಟಿಯೇ ನಮ್ಮ ಮುಂದಿದೆ. ಹಣ್ಣಿನ ಶೇಕ್‌ಗಳಿಂದ ಹಿಡಿದು ತರಕಾರಿಗಳ ಶೇಖ್‌ಗಳವರೆಗೆ ಹಲವಾರು ಮಿಲ್ಕ್ ಶೇಕ್‌ಗಳನ್ನು ನಾವು ಸೇವಿಸಬಹುದು. ನಮ್ಮ ಊಟದ ಜೊತೆಗೆ ಸೇವಿಸಲು ಹಲವಾರು ಪಾನೀಯಗಳು ದೊರೆಯುತ್ತವೆ. ಆದರೆ ಈ ಬಗೆಯ ಮಿಲ್ಕ್‌ಶೇಕ್‌ಗಳು ನಮ್ಮ ನಾಲಿಗೆಗೆ ಮತ್ತು ದೇಹಕ್ಕೆ ಹಬ್ಬದ ಅನುಭವವನ್ನು ನೀಡುತ್ತವೆ.

ತಾಜಾ ಹಣ್ಣುಗಳಿಂದ ತಯಾರಿಸಿದ ಪಾನೀಯಗಳು ದೇಹಕ್ಕೆ ಹೊಸ ಚೈತನ್ಯವನ್ನು ನೀಡುತ್ತದೆ. ಸಿದ್ಧ ಪಾನೀಯಗಳಿಗಿಂತ ಫ್ರೆಷ್ ಜ್ಯೂಸ್ ದೇಹಕ್ಕೆ ತಂಪನ್ನು ನೀಡುವುದರೊಂದಿಗೆ ಮನಸ್ಸಿಗೂ ಮುದ ನೀಡುತ್ತದೆ. ಬೇಸಿಗೆಯಲ್ಲಿ ಕೂಲ್ ಆಗಿರಲು ಯಾರಿಗೆ ತಾನೇ ಆಸೆ ಇರುವುದಿಲ್ಲ. ಸಾಧ್ಯವಾದಷ್ಟು ಬಿಸಿಲಿನ ಝಳಕ್ಕೆ ಮೈಯನ್ನು ಒಡ್ಡಬೇಡಿ. ಕೂಲ್ ಆಗಿರುವಂತೆ ನೋಡಿಕೊಳ್ಳಿ.

ಅಬ್ಬಾ! ಏನಪ್ಪಾ ಈ ಬಿಸಿಲು ಎನ್ನುವುದರ ಬದಲು ಅದನ್ನೇ ನಮಗೆ ಸಾಧಕವಾಗುವಂತೆ ನೋಡಿಕೊಳ್ಳಬೇಕು. ಬೇರೆ ಕಾಲಗಳಂತೆ ಬೇಸಿಗೆಯಲ್ಲಿ ನಮ್ಮ ದೇಹಕ್ಕೆ ಬೇಕಾದ ವಿಟಮಿನ್‌ಗಳೂ ಸಿಗುತ್ತದೆ. ಅದನ್ನೇ ಸದ್ಬಳಕೆ ಮಾಡಿಕೊಳ್ಳುವುದು ಉತ್ತಮ. ಬೇಸಿಗೆಯೆಂದರೆ ವರ್ಷದ ಕೆಲಸ ಕಾರ್ಯಗಳ ನಡುವೆ ದೇಹ–ಮನಸುಗಳಿಗೆ ಒಂದಿಷ್ಟು ವಿಶ್ರಾಂತಿ ತೆಗೆದುಕೊಳ್ಳುವ ಕಾಲ. ಹಿತಮಿತವಾದ ಆಹಾರ ಮತ್ತು ಸರಿಯಾದ ಕಾಳಜಿ ವಹಿಸಿದರೆ ಬೇಸಿಗೆ ನಮಗೆ ನಿಜಕ್ಕೂ ಆರಾಮದಾಯಕವಾಗಬಲ್ಲುದು. ಚಳಿಗಾಲದ ಮೈ ಕೈಗಳ ಮುದುರುವಿಕೆಯಿಲ್ಲದೆ ಮಳೆಗಾಲದ ಜಿಟಿಜಿಟಿ ಇಲ್ಲದೆ ಮೈ ಮನಸ್ಸಿಗೆ ಉಲ್ಲಾಸ ನೀಡುವ ಬೇಸಿಗೆಯನ್ನು ಸ್ವಾಗತಿಸೋಣ. ಹಬ್ಬ, ಜಾತ್ರೆ, ಮದುವೆ ಮುಂತಾದ ಸಮಾರಂಭಗಳಿಗೆ ಮುನ್ನುಡಿ ಬರೆಯುವ ಬೇಸಿಗೆ ಹೃನ್ಮನವನ್ನು ಸದಾ ಹಚ್ಚ ಹಸಿರಾಗಿಸುವ ಕಾಲವೆಂದರೆ ಅತಿಶಯೋಕ್ತಿಯೇನಿಲ್ಲ. ಹೃದಯಂಗಳದಿ ನಾದ ತರಂಗಗಳನ್ನು ಮೀಟುವ ಹಚ್ಚ ಹಸಿರಿನ ಪ್ರಕೃತಿಯ ಸೊಬಗನ್ನು ಆಸ್ವಾದಿಸುವ ಬೇಸಿಗೆಯನ್ನು ಬೈಯ್ಯುವ ಬದಲು ಅದರಲ್ಲಿರುವ ಒಳಿತುಗಳನ್ನು ಆಸ್ವಾದಿಸೋಣ.





ವಾರಭವಿಷ್ಯ

2.04.2023 ರಿಂದ 8.04.2023

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ :– ರವಿ–ಮೀನ, ಚಂದ್ರ–ಸಿಂಹ, ಕನ್ಯಾ, ತುಲಾ, ಕುಜ–ಮಿಥುನ, ಬುಧ–ಮೇಷ, ಗುರು–ಮೀನ, ಶುಕ್ರ–ಮೇಷ, ವೃಷಭ, ಶನಿ–ಕುಂಭ, ರಾಹು–ಮೇಷ ಮತ್ತು ಕೇತು–ತುಲಾ.



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, 2ನೇ ಹಂತ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720

ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆರಂಭಕ್ಕೆ ಕಬ್ಬಿಣ, ಸ್ಟೀಲ್, ಸಿಮೆಂಟ್ ವ್ಯಾಪಾರಿಗಳಿಗೆ ಭರಾಟೆಯ ವ್ಯಾಪಾರ. ಸಿವಿಲ್ ಇಂಜಿನಿಯರ್‌ಗಳಿಗೆ ಉತ್ತಮ ಕಂಟ್ರಾಕ್ಟ್ ದೊರೆಯುವುದು. ನಿಕಟವರ್ತಿಗಳು ನಿಮ್ಮ ಮಹತ್ವದ ಕಾರ್ಯ ಕಲಾಪಗಳಿಗೆ ನೆರವು ನೀಡುವರು. ಮಕ್ಕಳ ಉನ್ನತ ವ್ಯಾಸಂಗಕ್ಕೆ ದಾರಿ ಸುಗಮವಾಗುವುದು. ಕುಶಲಕರ್ಮಿಗಳಿಗೆ ಸರಕಾರದಿಂದ ಸಹಾಯ ದೊರೆಯುವುದು. ಸ್ನಾಯು ಸೆಳೆತದಿಂದ ಬಳಲುವಿರಿ.

'ಓಂ ಬ್ರಂ ಬೃಹಸ್ಪತಯೇ ನಮಃ' ಜಪಿಸಿ. ಶುಭ ಸಂಖ್ಯೆ–4.

ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಈ ಸಪ್ತಾಹದಲ್ಲಿ ನಿಮ್ಮ ವೈಯಕ್ತಿಕ ಮತ್ತು ವೃತ್ತಿ ಜೀವನದಲ್ಲಿ ಸಮತೋಲನವನ್ನು ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗುತ್ತೀರಿ. ಹಣಕಾಸಿನ ವ್ಯವಹಾರಗಳನ್ನು ಮಾಡುವಾಗ ಜಾಗರೂಕರಾಗಿರಿ, ದಾಖಲೆಗಳನ್ನು ಓದದೆ ಸಹಿ ಹಾಕಬಾರದು. ಸಿವಿಲ್ ಇಂಜಿನಿಯರುಗಳಿಗೆ, ಕಂಟ್ರಾಕ್ಟರುಗಳಿಗೆ ಕೈ ತುಂಬ ಕೆಲಸ ಹಾಗೂ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕುವುದು. ಆಳು–ಕಾಳುಗಳು ಅಸಹಕಾರ ತೋರುವರು. ಶ್ರೀ ಸಪ್ತಮಾತೃಕಾ ಸ್ತುತಿ. ಶುಭ ಸಂಖ್ಯೆ–8.

ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಏರು–ಪೇರಾಗಿದ್ದ ಆರೋಗ್ಯದಲ್ಲಿ ಚೇತರಿಕೆ ಕಂಡು ಬರುವುದು. ಆರ್ಥಿಕ ಸಬಲತೆ ಸೇರಿದಂತೆ ಪ್ರಮುಖ ಸಾಮಾಜಿಕ ವಿಚಾರಗಳು ನಿಮ್ಮ ಪರವಾಗಿ ಇರುವುದು. ವಾಕ್ಚಾತುರ್ಯದಿಂದ ಎದುರಾಳಿಗಳನ್ನು ನಿರಸ್ತ ಮಾಡುವಿರಿ. ವಿವಾಹ ಯೋಗ್ಯರಿಗೆ ಉತ್ತಮ ಬಾಳಸಂಗಾತಿ ದೊರೆಯುವ ಸಾಧ್ಯತೆ ಇದೆ. ಮುತ್ತು, ರತ್ನ, ಆಭರಣ ವ್ಯಾಪಾರಿಗಳಿಗೆ ನಿರೀಕ್ಷೆಗೂ ಮೀರಿ ವ್ಯಾಪಾರವಾಗುವುದು.

ಶ್ರೀ ದೇವೀ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ–2.

ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯು)

'ಗಾಳಿ ಬಂದಾಗ ತೂರಿಕೊ' ಗುರು–ಚಂದ್ರರ ಶುಭ ಸಂಚಾರದಿಂದ ಕುಟುಂಬದಲ್ಲಿ ಯಾವುದೇ ಶುಭ ಕಾರ್ಯ ಆಯೋಜಿಸುವ ಸಾಧ್ಯತೆ ಇದೆ. ನಿಮ್ಮ ವೃತ್ತಿ ಜೀವನವೂ ಮಂಗಳಕರವಾಗಿರುತ್ತದೆ. ನಿಮ್ಮ ಗುರುಗಳು ಮತ್ತು ಮಹತ್ವಾಕಾಂಕ್ಷೆಗಳನ್ನು ಸಾಧಿಸಲು ಸಾಕಷ್ಟು ಅವಕಾಶಗಳು ಒದಗಿ ಬರುವುದು. ವಿವಾಹಯೋಗ ಕನ್ಯಾಮಣಿಯರಿಗೆ ಕಂಕಣ ಕೂಡಿ ಬರುವುದು. ವಿದ್ಯಾರ್ಥಿಗಳು ಯಶಸ್ಸನ್ನು ಸಾಧಿಸಲು ಅವಕಾಶವಿದೆ.

ಶ್ರೀ ಯೋಗಾನೃಸಿಂಹ ದರ್ಶನ. ಶುಭ ಸಂಖ್ಯೆ–9.

ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ದೂರ ಸರಿದಿದ್ದವರು ಹತ್ತಿರ ಬರುವರು. ಹಣಕಾಸಿನ ಪರಿಸ್ಥಿತಿ ಸುಧಾರಿಸುವುದು. ಇಂಜಿನಿಯರಿಂಗ್ ಹಾಗೂ ವಿದ್ಯಾಸಂಸ್ಥೆಗಳು ಹೆಚ್ಚಿನ ಲಾಭವನ್ನು ಹೊಂದುವರು. ಸೃಜನಶೀಲ ವ್ಯಕ್ತಿಗಳಿಗೆ ಪ್ರಶಸ್ತಿ, ಪುರಸ್ಕಾರಗಳು ದೊರೆಯುವುದು. ಕಳ್ಳಕಾಕರಿಂದ ಹಾನಿಗಳು ಸಂಭವಿಸಬಹುದು. ನಿಮಗೆ ಅಸಾಧ್ಯವೆನಿಸಿದ ಕೆಲಸಗಳಿಗೆ ಕೈಹಾಕದಿರಿ. ಸಾಲ ಕೊಟ್ಟು ಕೈ ಸುಟ್ಟುಕೊಳ್ಳದಿರಿ.

ಶ್ರೀ ವೆಂಕಟೇಶ್ವರ ದರ್ಶನ. ಶುಭ ಸಂಖ್ಯೆ–3.

ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

'ಉಪಾಯ ಬಲ್ಲವನಿಗೆ ಅಪಾಯವಿಲ್ಲ' ಎಂಬ ಗಾದೆಯಂತೆ ನಿಮ್ಮ ಜಾಣ್ಮೆ ಬಳಸಿ ಕಷ್ಟಗಳಿಂದ ಹೊರಬರುವಿರಿ. ಪೂರ್ವಾರ್ಜಿತ ಆಸ್ತಿಯನ್ನು ಮಾರುವ ಹುನ್ನಾರ ಬೇಡಿ. ಇದಕ್ಕಾಗಿ ಪುತ್ರರ ವಿರೋಧವನ್ನು ಎದುರಿಸಬೇಕಾದೀತು. ಸರ್ಕಾರಿ ನೌಕರರಿಗೆ ಮೇಲಧಿಕಾರಿಗಳ ಅವಕೃಪೆ, ಯಾರಲ್ಲೂ ದ್ವೇಷ ಸಾಧಿಸದಿರಿ. ಅಕಾಲ ಭೋಜನದಿಂದ ಅಜೀರ್ಣ ಹಾಗೂ ಜಡತ್ವ ಉಂಟಾಗುವುದು. ಶ್ರೀಮಂತ್ರಾಲಯ ಪ್ರಭುಗಳ ಧ್ಯಾನ. ಶುಭ ಸಂಖ್ಯೆ–7.

ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ಮನೆಯಲ್ಲೂ, ಕಚೇರಿಯಲ್ಲೂ ಉಂಟಾಗುವ ಬದಲಾವಣೆಗಳಿಗೆ ಸಿದ್ಧರಾಗಿರಿ. ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ ಕಂಡು ಬರುತ್ತದೆ. ಅದರಂತೆ ಸಾಲಗಾರರ ಒತ್ತಡವೂ ಇರುತ್ತದೆ. ಕೆಲವೊಮ್ಮೆ ಸ್ವೇಚ್ಛಾಚಾರಗಳಿಂದ ತೊಂದರೆಗೆ ಒಳಗಾಗುವಿರಿ. ವಾರಮಧ್ಯೆ ಮಾತಿನಂತೆ ನಡೆದು ಮೆಚ್ಚುಗೆಗೆ ಪಾತ್ರರಾಗುವಿರಿ. ವಾರಾಂತ್ಯಕ್ಕೆ ಭಾವೋದ್ವೇಗಕ್ಕೆ ಒಳಗಾಗುವ ಸಾಧ್ಯತೆ ಇದೆ. ಆರೋಗ್ಯ ಕಾಯ್ದುಕೊಳ್ಳಿ.

ಶ್ರೀ ದುರ್ಗಾಸ್ತುತಿ. ಶುಭ ಸಂಖ್ಯೆ–8.

ಮಕರ (ಬೊ.ಜ.ಜೆ.ಶಿ.ಶು.ಶೆ.ಶೊ.ಗ.ಗಿ.)

ನೀವೀಗ ಪರೀಕ್ಷೆಯ ಸಮಯದಲ್ಲಿ ಸಾಗುತ್ತಿದ್ದೀರಾ. ಸವಾಲುಗಳನ್ನು ಸ್ವೀಕರಿಸದೆ ಗತ್ಯಂತರವಿಲ್ಲ. ಹಠಸಾಧನೆಗೆ ರಾಹುಗ್ರಹ ಪ್ರೇರೇಪಿಸಬಹುದು. ಇದರಿಂದ ಮುಂದೆ ಭಾರೀ ಬೆಲೆ ತೆರಬೇಕಾದೀತು. ವಾರದ ಉತ್ತರಾರ್ಧದಲ್ಲಿ ಸ್ಥಗಿತಗೊಂಡಿದ್ದ ಕೆಲಸಕ್ಕೆ ಮರುಚಾಲನೆ ದೊರೆಯುವುದು. ಪ್ರಯಾಣ ಸಮಯದಲ್ಲಿ ಆತಂಕದ ಸಮಯ ಉಂಟಾದೀತು. ಮಹಿಳೆಯರು ವಾಯುವಿಹಾರಕ್ಕೆ ತೆರಳಿದಾಗ ಮಾಂಗಲ್ಯಸರ ಮುಚ್ಚಿಕೊಂಡು ರಕ್ಷಿಸಿಕೊಳ್ಳಿ.

ಶ್ರೀಹರಿನಾಮ ಸ್ಮರಣೆ. ಶುಭ ಸಂಖ್ಯೆ–1.

ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಅಪೇಕ್ಷಿತ ಕೆಲಸ ಕಾರ್ಯಗಳು ಮಂದಗತಿಯಲ್ಲಿ ಸಾಗುವುದು. ಆಸೆಗಳಿಗೆ ಕಡಿವಾಣ ಹಾಕಿದರೆ ಸಾಲ ಮಾಡಬೇಕಾದ ಪರಿಸ್ಥಿತಿ ಬರದು. ವಾರಮಧ್ಯೆ ಆಪ್ತೇಷ್ಟರ ಮಿಲನ, ಸಂತೋಷ ಕೂಟಗಳು, ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ಯೋಜನೆಗಳು ದೊರಕುವುದು. ವನಿತಾಮಣಿಯರು ಅಲಂಕಾರಿಕ ವಸ್ತುಗಳಿಗೆ ಹೇರಳ ಧನ ವ್ಯಯಿಸುವರು. ಸಟ್ಟಾ, ಜೂಜುಗಳಿಂದ ದೂರವಿದ್ದರೆ ಒಳಿತು.

ಶ್ರೀ ರವಿ ಸ್ತೋತ್ರ. ಶುಭ ಸಂಖ್ಯೆ–2.ಶುಭ ಸಂಖ್ಯೆ–2.

ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಗೃಹದಲ್ಲಿ ಮಂಗಳ ಕಾರ್ಯಗಳು ಜರುಗುವುದು. ಧನಲಾಭ, ಸ್ತ್ರೀ ಸೌಖ್ಯ, ವಾಂಛಿತ ಆಕಾಂಕ್ಷೆಗಳು ಕೈಗೂಡುತ್ತವೆ. ಇಷ್ಟ ಬಂಧು ಜನರ ಆಗಮನದಿಂದ ಹರ್ಷಚಿತ್ತರಾಗಿರುವಿರಿ. ಎಣ್ಣೆ ಹಾಗೂ ಎಣ್ಣೆಕಾಳು ವ್ಯಾಪಾರಿಗಳಿಗೆ ಅಧಿಕ ಧನಲಾಭವಾಗುವುದು. ಶ್ರೀ ಗುರುಕೃಪೆ ಇದೆ. ಸ್ಥಿರಾಸ್ತಿ ಗಳಿಸಲು ಉತ್ತಮ ಕಾಲ. ವಾರಾಂತ್ಯಕ್ಕೆ ಜಾತ್ರಾದಿ ದೈವೀ ಉತ್ಸವಗಳಲ್ಲಿ ಭಾಗವಹಿಸಿ ಧನ್ಯತಾಭಾವವನ್ನು ಹೊಂದುವಿರಿ.

ಶ್ರೀ ಶಿರಡಿ ಸಾಯಿ ದರ್ಶನ. ಶುಭ ಸಂಖ್ಯೆ–9.

ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಈ ವಾರ ನೀವು ಅನೇಕ ಮೂಲಗಳಿಂದ ಲಾಭವನ್ನು ಪಡೆಯುತ್ತೀರಿ. ಚಂದ್ರಗ್ರಹ ಗೋಚರ ಶುಭವಿದೆ. ನಿಮ್ಮ ಯೋಜನೆಗಳನ್ನು ಮರು ಹೊಂದಾಣಿಕೆ ಮಾಡುವುದರಿಂದ ನಿಮ್ಮ ಹಣವನ್ನು ಹೆಚ್ಚಿನ ಪ್ರಮಾಣದಲ್ಲಿ ಉಳಿಸಲು ಸಾಧ್ಯವಾಗುತ್ತದೆ. ವೃತ್ತಿ ಜೀವನದಲ್ಲಿ ಅಪೇಕ್ಷಿತ ಫಲಿತಾಂಶವನ್ನು ಪಡೆಯಲು ಅವಕಾಶಗಳಿವೆ. ರಾಹು–ಕೇತು ಕುಟುಂಬದಲ್ಲಿ ಸೌಹಾರ್ದತೆ ಕೆಡಲು ಕಾರಣರಾಗುತ್ತಾರೆ.

ಶ್ರೀ ಸತ್ಯನಾರಾಯಣ ಸೇವೆ. ಶುಭ ಸಂಖ್ಯೆ–5.

ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

'ಪ್ರಯತ್ನ ಪುರುಷಾಧೀನ, ಫಲ ದೈವಾಧೀನ; ನಿಮ್ಮ ಕರ್ತವ್ಯದಲ್ಲಿ ಶ್ರದ್ಧೆ ಇರಲಿ. ಮನಃ ಚಂಚಲತೆಯಿಂದ ಕಾರ್ಯಗಳಲ್ಲಿ ವಿಘ್ನಗಳು ಉಂಟಾಗುವುದು. ಕಳತ್ರ–ಪುತ್ರರೊಂದಿಗೆ ಘರ್ಷಣೆಗೆ ಅವಕಾಶ ಕೊಡದಿರಿ. ಅನ್ನ–ಪಾನಾದಿಗಳಲ್ಲಿ ಲೋಪ ಉಂಟಾಗುವುದರಿಂದ ಅನಾರೋಗ್ಯಕ್ಕೆ ಗುರಿಯಾಗುವಿರಿ. ವಾರಾಂತ್ಯಕ್ಕೆ ಸುಖ ಸಾಧನಗಳ ಪ್ರಾಪ್ತಿ. ಉತ್ತಮ ಸ್ತ್ರೀ ಸಂಗ, ಎಲ್ಲರ ಆದರಕ್ಕೆ ಪಾತ್ರರಾಗುವಿರಿ.

ಶ್ರೀ ಶ್ರೀಕಂಠೇಶ್ವರ ದರ್ಶನ. ಶುಭ ಸಂಖ್ಯೆ–6.

ಕೆ.ಎಂ.ದೊಡ್ಡಿಯಲ್ಲಿ ಆಸ್ಟರ್ ಜಿ.ಮಾದೇಗೌಡ ಹಾಸ್ಪಿಟಲ್ ಉದ್ಘಾಟನೆ

ಆಸ್ಪತ್ರೆಯಿಂದ ಗ್ರಾಮೀಣರಿಗೆ ಉತ್ತಮ ಸೇವೆ: ಎಂಎಲ್‌ಸಿ ಮಧು ಜಿ.ಮಾದೇಗೌಡ



ಭಾರತೀನಗರ, ಏ.1– ಇಲ್ಲಿನ ಜಿ.ಮಾದೇಗೌಡ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಆಸ್ಟರ್ ಜಿ.ಮಾದೇಗೌಡ ಹಾಸ್ಪಿಟಲ್ ಎಂಬುದಾಗಿ ಮರು ನಾಮಕರಣ ಮಾಡಿ ಗ್ರಾಮೀಣ ಜನರಿಗೆ ಮತ್ತಷ್ಟು ಉತ್ತಮ ಸೇವೆ ನೀಡಲು ಸಿದ್ಧತೆ ನಡೆಸಲಾಗಿದೆ ಎಂದು ವಿಧಾನಪರಿಷತ್ ಸದಸ್ಯ ಮಧು ಜಿ.ಮಾದೇಗೌಡ ತಿಳಿಸಿದರು.

ಭಾರತೀನಗರದಲ್ಲಿ ನಡೆದ ನೂತನ ಆಸ್ಟರ್ ಜಿ.ಮಾದೇಗೌಡ ಆಸ್ಪತ್ರೆ ಉದ್ಘಾಟನಾ ಸಮಾರಂಭದಲ್ಲಿ ನೂತನ ಆಡಳಿತ ಮಂಡಳಿಗೆ ನಿರ್ವಹಣೆ ಹಸ್ತಾಂತರಿಸಿ ಮಾತನಾಡಿದ ಅವರು, ಕಳೆದ ನಾಲ್ಕುವರೆ ವರ್ಷಗಳಿಂದ ಡಾ.ಜಿ.ಮಾದೇಗೌಡ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿತ್ತು. ಆರೋಗ್ಯ ಕ್ಷೇತ್ರದಲ್ಲಿ ಮತ್ತಷ್ಟು ಅಭಿವೃದ್ಧಿ ಪಡಿಸುವ ಉದ್ದೇಶ ಮತ್ತು ಈ ಭಾಗದ ರೈತಾಪಿ ವರ್ಗದ ಜನರಿಗೆ ಮತ್ತಷ್ಟು ಸೇವೆ ಸಲ್ಲಿಸಲು ಆಸ್ಟರ್ ಆಸ್ಪತ್ರೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿದ್ದೇವೆ. ಅವರ ದೊಡ್ಡ ತಂಡವನ್ನು ನಮ್ಮ ಗ್ರಾಮೀಣ ಪ್ರದೇಶಕ್ಕೆ ಕರೆತಂದಿದ್ದೇವೆ. ಆಸ್ಟರ್ ತಂಡದವರಿಂದ ಹೆಚ್ಚು ಅನುಕೂಲವಾಗಲಿದೆ ಎಂಬ ನಿರೀಕ್ಷೆ ಇಟ್ಟಿದ್ದೇವೆ ಎಂದರು.

ಈ ಭಾಗದ ಜನರಿಗೆ ಎಲ್ಲಾ ರೀತಿಯ ಆಯುಷ್ಮಾನ್, ಯಶಸ್ವಿನಿ ವಿಮೆ ಸೇರಿದಂತೆ ಸರ್ಕಾರಿ ನೌಕರರಿಗೂ ಸರ್ಕಾರದ ಎಲ್ಲಾ ಸ್ಕೀಮ್‌ಗಳು ಈ ಆಸ್ಪತ್ರೆ ಒಳಪಡಲಿದೆ. ಇದನ್ನು ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸಿದರು. ಆಸ್ಟರ್ ಡಿಎಂ ಹೆಲ್ತ್‌ಕೇರ್ ಲಿ. ಸಿಇಓ ಡಾ.ನಿತೀಶ್ ಶೆಟ್ಟಿ ಮಾತನಾಡಿ, ನಗರ ಪ್ರದೇಶದಲ್ಲಿ ಮಾಡಿದಂತಹ ಆಸ್ಟರ್ ಆಸ್ಪತ್ರೆಯನ್ನು ಗ್ರಾಮೀಣ ಪ್ರದೇಶದಲ್ಲಿ ಮೊಟ್ಟಮೊದಲ ಬಾರಿಗೆ ಮಾಡಿದ್ದೇವೆ. ಬೆಂಗಳೂರಿನಲ್ಲಿ ಈಗಾಗಲೇ 3 ಆಸ್ಪತ್ರೆಗಳಿದ್ದು, ಅಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದೇವೆ. ಈಗ ಗ್ರಾಮೀಣ ಜನರ ಸೇವೆ ಮಾಡುವ ಉದ್ದೇಶದಿಂದ ಕೆ.ಎಂ.ದೊಡ್ಡಿಯಲ್ಲಿ ಆಸ್ಟರ್ ಹಾಸ್ಪಿಟಲ್ ತೆರೆದಿದ್ದೇವೆ. ಇಲ್ಲಿ ಎಲ್ಲಾ ರೀತಿಯ ಮಲ್ಟಿ ಸ್ಪೆಷಾಲಿಟಿ ಸೇವೆಗಳು ನುರಿತ ತಜ್ಞ ವೈದ್ಯರಿಂದ ಸಿಗಲಿದೆ ಎಂದರು.

ಇದೇ ವೇಳೆ ಬೆಂಗಳೂರು ಆಸ್ಟರ್ ಹಾಸ್ಪಿಟಲ್ ಸಿಇಓ ರಮೇಶ್, ವೃತಿಕ ಹಾಸ್ಪಿಟಲ್ ಡಾ.ವಿಜಯ್, ಡಾ.ರಘುನಂದನ್, ಮಾನವ ಸಂಪನ್ಮೂಲ ಅಧಿಕಾರಿ ದುರ್ಗಾ ಪ್ರಸನ್ನನಾಯಕ್, ಆಡಳಿತಾಧಿಕಾರಿ ಗಣೇಶ್ ಪ್ರಭು, ಭಾರತಿ ಎಜುಕೇಷನ್ ಟ್ರಸ್ಟ್‌ನ ಸಿಇಓ ಆಶಯ್, ಬಿ.ಎಂ.ನಂಜೇಗೌಡ, ಸೀನಿಯರ್ ಜನರಲ್ ಮ್ಯಾನೇಜರ್ ಶಿವಕುಮಾರ್, ಜನರಲ್ ಮ್ಯಾನೇಜರ್ ಸುರೇಶ, ಹಣಕಾಸು ಅಧಿಕಾರಿ ರಾಮಕೃಷ್ಣ ಮೆಹಂದಾಲೆ ಸೇರಿದಂತೆ ಹಲವರಿದ್ದರು.

ಕೆ.ಆರ್.ಪೇಟೆಯಲ್ಲಿ ಸಿದ್ಧಗಂಗಾ ಶ್ರೀ ಶಿವಕುಮಾರಸ್ವಾಮಿಜೀ ಜಯಂತಿ



ಕೆ.ಆರ್.ಪೇಟೆ, ಏ.1– ಪಟ್ಟಣದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಘಟಕದಿಂದ ತ್ರಿವಿಧ ದಾಸೋಹಿ, ನಡೆದಾಡುವ ದೇವರು ಸಿದ್ಧಗಂಗಾ ಮಠದ ಲಿಂಗೈಕ್ಯ ಡಾ.ಶಿವಕುಮಾರಸ್ವಾಮೀಜಿ ಅವರ 116ನೇ ಜಯಂತಿಯನ್ನು ಸಾರ್ವಜನಿಕರಿಗೆ ಅನ್ನದಾನ ಮಾಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಪಟ್ಟಣದಲ್ಲಿರುವ ಸಂಘದ ಕಚೇರಿಯಲ್ಲಿ ಶ್ರೀಶಿವಕುಮಾರ ಸ್ವಾಮೀಜಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಪೂಜೆ ಸಲ್ಲಿಸಿ, ಅನ್ನಸಂತರ್ಪಣೆಗೆ ಚಾಲನೆ ನೀಡಿ ಮಾತನಾಡಿದ ತಾಲೂಕು ವೀರಶೈವ ಮಹಾಸಭಾ ಅಧ್ಯಕ್ಷ ವಿ.ಎಸ್.ಧನಂಜಯ ಕುಮಾರ್, ಶ್ರೀಗಳು ವಿಶ್ವಗುರು ಬಸವಣ್ಣನವರ ಆದರ್ಶದಂತೆ ನಿಷ್ಠೆಗೆ ಬದ್ಧರಾಗಿ ಭಕ್ತರ ಮನಸ್ಸಿನಲ್ಲಿ ನಡೆದಾಡುವ ದೇವರೆಂದೇ ಪ್ರಸಿದ್ಧರಾದರು. ಕೇವಲ ಒಂದು ಸಮುದಾಯಕ್ಕೆ ಸೀಮಿತವಾಗದೇ ಎಲ್ಲಾ ವರ್ಗಗಳನ್ನು ಒಳಗೊಂಡಂತೆ ತ್ರಿವಿಧ ದಾಸೋಹ ನಡೆಸುವ ಮೂಲಕ ಸದೃಢ ಸಮಾಜಕ್ಕೆ ಕಾರಣರಾದರು. ಸಂತರ ಖಾವಿ ಬಟ್ಟೆಗೆ ಗೌರವ ತಂದುಕೊಟ್ಟು, ಲಕ್ಷಾಂತರ ಮಂದಿ ಹಸಿವನ್ನು ನೀಗಿಸಿ, ಸಮಾಜದ ಉಳಿವಿಗೆ ಜ್ಞಾನಗಂಗೆ ತುಂಬಿ ಸ್ವಾಸ್ಥ ಸಮಾಜಕ್ಕೆ ಬುನಾದಿ ಹಾಕಿದ ಶ್ರೀಗಳ ನೆನಪಿಸಿಕೊಳ್ಳುವ ಸಮಯ ಬಂದಿರುವುದು ನಮ್ಮೆಲ್ಲರ ಸೌಭಾಗ್ಯ. ಅವರ ಆದರ್ಶಗಳನ್ನು ಯುವ ಜನತೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಉಪನ್ಯಾಸಕ ಮಹೇಶ್ ಮಾತನಾಡಿ, ರಾಜ್ಯದಲ್ಲಿ ಮಠಮಾನ್ಯಗಳು ಸೇವೆ ಮೂಲಕ ಕ್ರಾಂತಿ ಮಾಡಿದ್ದು, ಆ ಪೈಕಿ ಸಿದ್ಧಗಂಗಾ ಮಠ ಅತಿ ಎತ್ತರದ ಸ್ಥಾನದಲ್ಲಿದೆ. ನಡೆದಾಡುವ ದೇವರು, ಶತಾಯುಷಿ ಶ್ರೀಶಿವಕುಮಾರ ಸ್ವಾಮೀಜಿ ಸಿದ್ಧಗಂಗಾ ಮಠದ ಹೆಸರು ಅಜರಾಮರವಾಗುವಂತೆ ಮಾಡಿದರು. ಮೌನವಾಗಿ ಶಿಕ್ಷಣ ಕ್ರಾಂತಿ ಮೂಲಕ ಲಕ್ಷಾಂತರ ಮಕ್ಕಳಿಗೆ ವಿದ್ಯೆ ನೀಡಿದರು. ಸ್ವಾಮೀಜಿಗಳು ಇಡೀ ವಿಶ್ವಕ್ಕೆ ಅನ್ನ, ಅಕ್ಷರ ಹಾಗೂ ವಸತಿ ಎಂಬ ತ್ರಿವಿಧ ದಾಸೋಹಕ್ಕೆ ಮಾದರಿಯಾದರು ಎಂದರು.

ಈ ವೇಳೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಉಪಾಧ್ಯಕ್ಷ ನಂಜುಂಡಪ್ಪ, ಪ್ರಧಾನ ಕಾರ್ಯದರ್ಶಿ ಬಿ.ಎಸ್. ಈರಪ್ಪ, ಡಿ.ಸಿ.ಕುಮಾರ್, ಮಹಿಳಾಧ್ಯಕ್ಷೆ ಪುಷ್ಪಲತಾ, ನಿರ್ದೇಶಕರಾದ ಜಗದೀಶ್, ಬಿ.ಎಂ.ಮಹೇಶ್ ಕುಮಾರ್, ಸಿ.ಎನ್.ಅಪ್ಪಾಜಿಗೌಡ, ರಾಜಪ್ಪ, ವಸಂತಪ್ಪ, ಶಿವಶಂಕರ್, ಮೋಹನ್ ಮೂರ್ತಿ, ಎಂ.ಎಸ್.ಶಿವಮೂರ್ತಿ, ಪಿ.ಪ್ರಕಾಶ್ ಸೇರಿದಂತೆ ಇತರರಿದ್ದರು.

ಹಾಡಹಗಲೇ ಮನೆಗೆ ನುಗ್ಗಿ ಚಿನ್ನಾಭರಣ, ನಗದು ಕಳವು

ನಾಗಮಂಗಲ, ಏ.1– ಹಾಡಹಗಲೇ ಮನೆ ಬಾಗಿಲ ಬೀಗ ಮುರಿದು ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಹಾಗೂ ನಗದು ದೋಚಿರುವ ಘಟನೆ ತಾಲೂಕಿನ ಕೆಂಚೇಗೌಡನ ಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಎಲ್ಲಪ್ಪ ಎಂಬುವರ ಮನೆಯಲ್ಲೇ ಕಳ್ಳತನವಾಗಿರುವುದು. ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ನೋಡಿ ಮನೆ ಬಾಗಿಲ ಬೀಗ ಮುರಿದು ಒಳ ನುಗ್ಗಿರುವ ದುಷ್ಕರ್ಮಿಗಳು ರೂಂನಲ್ಲಿದ್ದ ಲಕ್ಷಾಂತರ ರೂ. ಬೆಲೆ ಬಾಳುವ 162 ಗ್ರಾಂ ಚಿನ್ನಾಭರಣ ಹಾಗೂ 5.30 ಲಕ್ಷ ರೂ. ಹಣ ದೋಚಿ ಪರಾರಿಯಾಗಿದ್ದಾರೆ. ಕಳ್ಳತನ ಮಾಡಿರುವ ದೃಶ್ಯಗಳು ಮನೆ ಸಿಸಿಟಿವಿಯಲ್ಲಿ ಸೆರೆಯಾಗಿದೆ ಎನ್ನಲಾಗಿದೆ.

ವಿಷಯ ತಿಳಿದು ಶ್ವಾನದಳದೊಂದಿಗೆ ಸ್ಥಳಕ್ಕಾಗಮಿಸಿದ ನಾಗಮಂಗಲ ಡಿವೈಎಸ್‌ಪಿ ಲಕ್ಷ್ಮೀನಾರಾಯಣ ಪ್ರಸಾದ್, ಇನ್ಸ್‌ಪೆಕ್ಟರ್ ಅಶೋಕ್ ಕುಮಾರ್, ಎಸ್‌ಐ ರವಿಶಂಕರ್, ಸಿಬ್ಬಂದಿಗಳಾದ ಚನ್ನಬಸಪ್ಪ, ಅರುಣ್ ಕುಮಾರ್, ರವಿಶಂಕರ್, ರಮೇಶ್ ಪರಿಶೀಲನೆ ನಡೆಸಿದರು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿಧಾನಸಭಾ ಚುನಾವಣೆ ಹಿನ್ನೆಲೆ: ಕ್ಷೇತ್ರದಲ್ಲಿ ಕಟ್ಟುನಿಟ್ಟಿನ ಕ್ರಮ

ಚುನಾವಣಾಧಿಕಾರಿ ಸಂಜೀವಪ್ಪ ಮಾಹಿತಿ



ಶ್ರೀರಂಗಪಟ್ಟಣ, ಏ.1– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ ಎಂದು ಚುನಾವಣಾಧಿಕಾರಿ ಸಂಜೀವಪ್ಪ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲೂಕಿನ ಜನತೆ ಮಾದರಿ ನೀತಿ ಸಂಹಿತೆಯನ್ನು ಪಾಲಿಸಬೇಕು. ವಿವಿಧ ರಾಜಕೀಯ ಪಕ್ಷಗಳಿಗೆ ಚುನಾವಣೆ ಮಾದರಿ ನೀತಿ ಸಂಹಿತೆ ಕುರಿತಂತೆ ಈಗಾಗಲೇ ಮಾಹಿತಿ ನೀಡಲಾಗಿದೆ ರಾಜಕೀಯ ಪಕ್ಷಗಳ ಖರ್ಚು ವೆಚ್ಚಗಳನ್ನು ಗಮನಿಸಲು ಅಕೌಂಟ್ ಸೆಕ್ಷನ್ ತೆರೆಯಲಾಗಿದ್ದು, ಜನಪ್ರತಿನಿಧಿಗಳು ಹೊಸದಾಗಿ ಭೂಮಿ ಪೂಜೆ, ಕಾಮಗಾರಿ ನೆರವೇರಿಸುವಂತಿಲ್ಲ ಎಂದರು.

ತಾಲೂಕಿನ ಮೊಗರಳ್ಳಿ, ಕಳಸ್ತವಾಡಿ, ಹೊಸ ಹುಂಡುವಾಡಿ, ಪೇಪರ್ ಮಿಲ್ ಸರ್ಕಲ್ ಹಾಗೂ ಗೆಂಡೆ ಹೊಸಹಳ್ಳಿ ಗ್ರಾಮಗಳ ಗಡಿಭಾಗದಲ್ಲಿ ಚೆಕ್‌ಪೋಸ್ಟ್‌ಗಳನ್ನು ಸ್ಥಾಪಿಸಲಾಗಿದ್ದು, ಚೆಕ್‌ಪೋಸ್ಟ್‌ಗಳಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡಂತೆ 17 ಸೆಕ್ಟರ್ ಅಫೀಸರ್, 1 ಎಫ್‌ಎಸ್‌ಟಿ ಸ್ಕ್ವಾಡ್, 5 ಮಂದಿ ಒಳಗೊಂಡ ತಂಡ ಸ್ಥಳದಲ್ಲಿರುತ್ತದೆ. 3 ಪಾಳಿಯಲ್ಲಿ ತಂಡಗಳು ಕಾರ್ಯ ನಿರ್ವಹಿಸಲಿದ್ದು, ಜೊತೆಗೆ ವಿಡಿಯೋ ಸರ್ವೇಯಲೆನ್ಸ್ ಟೀಂ, ವಿಡಿಯೋ ಮೂವಿಂಗ್ ಟೀಮ್ ಕೂಡ ಕಾರ್ಯ ನಿರ್ವಹಿಸಲಿವೆ. ಕ್ಷೇತ್ರದಲ್ಲಿ ಚುನಾವಣಾ ಲೋಪವಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದೆ. ಸಾರ್ವಜನಿಕರು ಚುನಾವಣಾಧಿಕಾರಿಗಳೊಂದಿಗೆ ಕೈ ಜೋಡಿಸಬೇಕಿದ್ದು, ತಮ್ಮ ವ್ಯಾಪ್ತಿಯಲ್ಲಿ ಯಾವುದೇ ಚುನಾವಣಾ ಲೋಪಗಳು ಕಂಡು ಬಂದಲ್ಲಿ ಕೂಡಲೇ ಚುನಾವಣಾಧಿಕಾರಿಗಳ ಗಮನಕ್ಕೆ ತರಬೇಕೆಂದು ತಿಳಿಸಿದರು.

ಚುನಾವಣಾ ನೀತಿ ಸಂಹಿತೆ ಹಿನ್ನೆಲೆ ತಾಲೂಕಿನಾದ್ಯಂತ ಸಾರ್ವಜನಿಕ ಸ್ಥಳಗಳು, ರಸ್ತೆಗಳು, ತಾಲೂಕು ಕಚೇರಿ, ತಾಪಂ, ಗ್ರಾಪಂ, ಬಸ್ ನಿಲ್ದಾಣ ಸೇರಿದಂತೆ ಇತರೆ ಸ್ಥಳಗಳಲ್ಲಿ ಅಳವಡಿಸಿದ್ದ ಫ್ಲೆಕ್ಸ್, ಬ್ಯಾನರ್‌ಗಳನ್ನು ತೆರವುಗೊಳಿಸಲಾಗಿದೆ. ರಾಜಕಾರಣಿಗಳು ಚುನಾವಣಾಧಿಕಾರಿಗಳ ಅನುಮತಿ ಇಲ್ಲದೆ ಸಾರ್ವಜನಿಕ ಕಾರ್ಯಕ್ರಮ, ಜಾತ್ರೆ, ಪೂಜೆಗಳು ಸಭೆ ಸಮಾರಂಭ ನಡೆಸುವಂತಿಲ್ಲ. ಸಾರ್ವಜನಿಕರು ಚುನಾವಣಾ ಅಕ್ರಮಗಳ ಸಂಬಂಧ ದೂರು ಸಲ್ಲಿಸಲು ಅವಕಾಶ ಕಲ್ಪಿಸಿದ್ದು, ಮೊ: 7760956263, 9900590506ಗೆ ದೂರು ಸಲ್ಲಿಸಬಹುದು ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಈ ವೇಳೆ ತಹಸೀಲ್ದಾರ್ ಹಾಗೂ ತಾಪಂ ಇಓ ಸೇರಿದಂತೆ ಚುನಾವಣಾಧಿಕಾರಿಗಳು ಇದ್ದರು.

ಒಗ್ಗಟ್ಟಾಗಿ ಜೆಡಿಎಸ್ ಬಲವರ್ಧನೆಗೆ ಮುಂದಾಗಿ: ಅನ್ನದಾನಿ





ಮಳವಳ್ಳಿ, ಏ.1– ಹಾಲು ಮತ ಸಮುದಾಯದವರಿಗೆ ವಿವಿಧ ನಿಗಮಗಳಿಂದ ಸಾಲ ಸೌಲಭ್ಯ ಕಲ್ಪಿಸಿ ಆರ್ಥಿಕವಾಗಿ ಮೇಲೆತ್ತುವ ಕಾರ್ಯ ಮಾಡಲಾಗಿದೆ. ಹೀಗಾಗಿ ಎಲ್ಲರೂ ಒಗ್ಗಟ್ಟಿನಿಂದ ಜೆಡಿಎಸ್ ಪಕ್ಷ ಬಲಪಡಿಸಲು ಮುಂದಾಗಬೇಕೆಂದು ಶಾಸಕ ಡಾ.ಕೆ.ಅನ್ನದಾನಿ ಮನವಿ ಮಾಡಿದರು.

ತಾಲೂಕಿನ ವಡ್ಡರಹಳ್ಳಿ ಗ್ರಾಮದಲ್ಲಿ ನಡೆದ ಹಾಲುಮತ(ಕುರುಬ) ಸಮುದಾಯದ ಮುಖಂಡರು ಹಾಗೂ ಕಾರ್ಯಕರ್ತರ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಲೂಕಿನ ಪ್ರಮುಖ ಸಮುದಾಯಗಳಲ್ಲಿ ಒಂದಾದ ಹಾಲುಮತ ಸಮುದಾಯದವರ ಅನುಕೂಲಕ್ಕಾಗಿ ಮೈಸೂರು–ಮಳವಳ್ಳಿ ರಸ್ತೆ ಸಮೀಪ 2 ಕೋಟಿ ರೂ. ವೆಚ್ಚದಲ್ಲಿ ಕನಕ ಭವನ ನಿರ್ಮಿಸಲಾಗುತ್ತಿದೆ. ಚುನಾವಣೆಗೂ ಮುನ್ನಾ ಉದ್ಘಾಟಿಸಿ ಸಾರ್ವಜನಿಕರ ಸೇವೆ ನೀಡಬೇಕು ಎಂಬ ಆಸೆ ಇತ್ತು ಆದರೆ ಅದು ಸಾಧ್ಯವಾಗಿಲ್ಲ. ಹೀಗಾಗಿ ಮತ್ತೆ ನನ್ನನ್ನು ಗೆಲ್ಲಿಸುವ ಮೂಲಕ ಮತ್ತಷ್ಟು ಅಭಿವೃದ್ಧಿಗೆ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ಕೊರೊನಾ ನಡುವೆಯೂ ನೂರಾರು ಕೋಟಿ ರೂ. ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಅಭಿವೃದ್ಧಿ ಸಹಿಸದ ಹಾಗೂ ಸೋಲುವ ಭೀತಿಯಲ್ಲಿ ವಿರೋಧಿಗಳು ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಮತ್ತೆ ಗೆದ್ದು ವಿರೋಧಿಗಳಿಗೆ ತಕ್ಕ ಉತ್ತರ ನೀಡುವೆ ಎಂದರು.

ಸಮುದಾಯದ ಅಭಿಪ್ರಾಯ ಪಡೆದು ಮುಂದಿನ ದಿನಗಳಲ್ಲಿ ಕುರುಬ ಸಮುದಾಯದ ಕಾರ್ಯಕರ್ತರ ಬೃಹತ್ ಸಭೆ ನಡೆಸಲು ಚಿಂತಿಸಲಾಗಿದೆ. 2023ಕ್ಕೆ ಮತ್ತೆ ರಾಜ್ಯದಲ್ಲಿ ಜೆಡಿಎಸ್ ಸರ್ಕಾರ ಅಧಿಕಾರಕ್ಕೆ ಬಂದು ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಭೆಯಲ್ಲಿ ತಾಲೂಕು ಜೆಡಿಎಸ್ ಧ್ಯಕ್ಷ ವಿ.ಎಂ.ವಿಶ್ವನಾಥ್, ಜಿಪಂ ಮಾಜಿ ಅಧ್ಯಕ್ಷ ರಾಮಚಂದ್ರು, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಬುಲೆಟ್ ನಿಂಗಣ್ಣ, ಮುಖಂಡರಾದ ಕರಿಯಪ್ಪ ಗುರುಪ್ರಸಾದ್, ಮಹೇಶ್, ರಾಜಣ್ಣ, ಶಿವಣ್ಣ, ಧರ್ಮಲಿಂಗ ಶ್ರೀಧರ್ ಇದ್ದರು.

ನಿಧನ

ಇನ್ವಿತಾ



ಕೆ.ಆರ್.ಪೇಟೆ,ಏ.1–ತಾಲೂಕಿನ ಗಂಜಿಗೆರೆ ಪಿಡಿಓ ಹೆಚ್.ಎಸ್. ರವಿಕುಮಾರ್ ಪತ್ನಿ ಇನ್ವಿತಾ(52) ಶುಕ್ರವಾರ ರಾತ್ರಿ ನಿಧನರಾದರು.

ಮೃತರು ಪತಿ, ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ ಹಳೆ ಅತ್ತಿಗುಪ್ಪೆ ಗ್ರಾಮದಲ್ಲಿ ಶನಿವಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಔಷಧ, ಟೋಲ್, ಗ್ಯಾಸ್ ದರ ಹೆಚ್ಚಳ

ಶಾಲಾ ಫೀಸು, ಮನೆ ಸಾಲದ ಮೇಲಿನ ಬಡ್ಡಿ ಮುಂತಾದವುಗಳನ್ನು ಆದಾಯದಿಂದ ಕಡಿತಗೊಳಿಸಲು ಅವಕಾಶವಿಲ್ಲ. ಈ ಮೊದಲು ಈ ಹೊಸ ಪದ್ಧತಿಯನ್ನು ನಾವು ಆಯ್ಕೆ ಮಾಡಿಕೊಳ್ಳಬೇಕಿತ್ತು. ಆದರೆ ಈ ಸಾಲಿನಿಂದ ಬೇಕಿದ್ದರೆ ತೆರಿಗೆದಾರ ಹಳೆ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಹೊಸ ಪದ್ಧತಿಯಲ್ಲಿ ತನ್ನಿಂತಾನೇ ತೆರಿಗೆ ಲೆಕ್ಕಾಚಾರವಾಗುತ್ತದೆ. ಕಚ್ಚಾವಸ್ತು ದುಬಾರಿ ಹಾಗೂ ಸರ್ಕಾರದ ನಿಯಮಗಳ ಪರಿಣಾಮ ಮಾರುತಿ, ಹೋಂಡಾ, ಟೊಯೋಟಾ, ಹ್ಯುಂಡೈ, ಟಾಟಾ, ಮರ್ಸಿಡಸ್ ಬೆಂಜ್, ಆಡಿ ಕಂಪನಿಗಳ ಕಾರುಗಳ ದರದಲ್ಲಿ ಏರಿಕೆಯಾಗಲಿವೆ.

ದರ ನಿಯಂತ್ರಣ ಪಟ್ಟಿಯಲ್ಲಿರುವ 380ಕ್ಕೂ ಹೆಚ್ಚು ಅಗತ್ಯ ಔಷಧಗಳ ಬೆಲೆ ಶೇ.12ರಷ್ಟು ಏರಿಕೆಯಾಗಲಿವೆ. ನೋವು ನಿವಾರಕ, ಆ್ಯಂಟಿಬಯಾಟಿಕ್ಸ್, ಸೋಂಕು ನಿವಾರಕ ಸೇರಿದಂತೆ ಹಲವು ಔಷಧಗಳು ದುಬಾರಿಯಾಗಲಿವೆ. ಗರಿಷ್ಠ ಬಡ್ಡಿ ದರ ಲಭಿಸುವ ಹಿರಿಯರ ಉಳಿತಾಯ ಯೋಜನೆಯಡಿ ಇರಿಸಬಹುದಾದ ಠೇವಣಿಯ ಮೊತ್ತವನ್ನು ಈಗಿರುವ 15 ಲಕ್ಷ ರೂನಿಂದ 30 ಲಕ್ಷ ರೂಗೆ ಹೆಚ್ಚಳ ಮಾಡಲಾಗಿದೆ.

ಆನ್‌ಲೈನ್ ಗೇಮ್ಸ್‌ಗಳಲ್ಲಿ ರೂ.10 ಸಾವಿರ ಅಥವಾ ಅದಕ್ಕಿಂತ ಹೆಚ್ಚು ಹಣವನ್ನು ಗೆದ್ದರೆ ಅದಕ್ಕೆ ಶೇ.30ರಷ್ಟು ತೆರಿಗೆ ವಿಧಿಸಲಾಗುತ್ತದೆ. ಗೆದ್ದ ಹಣದಲ್ಲಿ ಶೇ.30 ತೆರಿಗೆ ಕಳೆದು ಬಹುಮಾನ ಸಿಗುತ್ತದೆ. ರೂ.5 ಲಕ್ಷಕ್ಕಿಂತ ಅಧಿಕ ಪ್ರೀಮಿಯಂ ಪಾವತಿಸುವ ಜೀವ ವಿಮೆ ಪಾಲಿಸಿಗಳ ಅವಧಿ ಮುಗಿದಾಗ ಪಾಲಿಸಿದಾರರಿಗೆ ವಿಮಾ ಮೊತ್ತಕ್ಕೆ ಇನ್ನು ಮುಂದೆ ತೆರಿಗೆ ಪಾವತಿಸಬೇಕಾಗುತ್ತದೆ. ಏ.1ರ ನಂತರ ಖರೀದಿಸುವ ಜೀವವಿಮಾ ಪಾಲಿಸಿಗಳು ಮೆಚೂರ್ ಆದ ಬಳಿಕ ಸಿಗುವಹಣಕ್ಕೆ ತೆರಿಗೆ ವಿಧಿಸಲಾಗುತ್ತದೆ.

ಚಿನ್ನದ ಮಾರಾಟಕ್ಕೆ ಸಂಖ್ಯೆ ಮತ್ತು ಅಲ್ಫಾಬೆಟ್‌ಗಳ ಮಿಶ್ರಣ ಒಳಗೊಂಡ 6 ಅಂಕಿಗಳ ಹಾಲ್ ಮಾರ್ಕ್ ಕಡ್ಡಾಯಗೊಳಿಸಲಾಗಿದೆ. ಅಲ್ಲದೆ, ಎಲೆಕ್ಟ್ರಾನಿಕ್ ರೂಪದ ಚಿನ್ನವನ್ನು ಭೌತಿಕ ಚಿನ್ನವಾಗಿ ಪರಿವರ್ತಿಸಿದರೆ ಅಥವಾ ಭೌತಿಕ ರೂಪದಲ್ಲಿರುವ ಚಿನ್ನವನ್ನು ಎಲೆಕ್ಟ್ರಾನಿಕ್ ರೂಪಕ್ಕೆ ಬದಲಾಯಿಸಿದರೆ ಅದಕ್ಕೆ ತಗಲುವ ಕ್ಯಾಪಿಟಲ್ ಗೇನ್ಸ್‌ಗೆ ತೆರಿಗೆ ವಿಧಿಸುವುದಿಲ್ಲ. ರಾಷ್ಟ್ರೀಯ ಹೆದ್ದಾರಿ ಮತ್ತು ಎಕ್ಸ್‌ಪ್ರೆಸ್ ವೇಗಳಲ್ಲಿ ಸಂಚರಿಸುವ ವಾಹನ ಮಾಲೀಕರು ಏ.1ರಿಂದ ಹೆಚ್ಚಿನ ಟೋಲ್ ಕಟ್ಟಬೇಕಾಗಿ ಬರಲಿದೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವೂ ಟೋಲ್ ಶುಲ್ಕವನ್ನು ಶೇ.7ರವರೆಗೂ ಹೆಚ್ಚಳ ಮಾಡಿದೆ. ಕಳೆದ ವರ್ಷ ಹೆದ್ದಾರಿಗಳ ಟೋಲ್ ಮೂಲಕ ರೂ.33881 ಕೋಟಿ ಸಂಗ್ರಹ ಮಾಡಲಾಗಿತ್ತು. ಇದು ಹಿಂದಿನ ವರ್ಷಕ್ಕಿಂತ ಶೇ.21ರಷ್ಟು ಹೆಚ್ಚಳವಾಗಿದೆ.

ಈ ಬಾರಿ ಹಿರಿಯರ ಉಳಿತಾಯದಲ್ಲಿ ಬಾರಿ ಅನುಕೂಲ ಮಾಡಿಕೊಡಲಾಗಿದೆ. ಉಳಿತಾಯ ಯೋಜನೆಯಡಿ ಇರಿಸಬಹುದಾದ ಠೇವಣಿಯ ಮೊತ್ತವನ್ನು ಈಗಿರುವ 15 ಲಕ್ಷ ರೂ.ನಿಂದ 30 ಲಕ್ಷ ರೂಗೆ ಹೆಚ್ಚಳ ಮಾಡಲಾಗಿದೆ. ಈ ಯೋಜನೆಯಲ್ಲಿ ಹಿರಿಯ ನಾಗರಿಕರು ಠೇವಣಿ ಇರಿಸಿದರೆ ಅದಕ್ಕೆ ಸರ್ಕಾರ ಅತ್ಯಂತ ಗರಿಷ್ಠ ಬಡ್ಡಿ ನೀಡುತ್ತದೆ. ಯಾವುದೇ ಯುಪಿಐ ವ್ಯಾಲೆಟ್ ಬಳಸಿಕೊಂಡು ಪಿಪಿಐಗೆ ಮಾಡುವ ರೂ.2000ಗಿಂತ ಹೆಚ್ಚಿನ ವಹಿವಾಟಿಗೆ ಇನ್ನು ಮುಂದೆ ಶೇ.1.1ರಷ್ಟು ಅಂತರ್ಬಳಕೆ ಶುಲ್ಕವನ್ನು ವಿಧಿಸಲಾಗುತ್ತದೆ. ಎಲ್ಲಾ ಬ್ಯಾಂಕ್ ಖಾತೆಯಿಂದ ಇನ್ನೊಂದು ಬ್ಯಾಂಕ್ ಖಾತೆ, ಯುಪಿಐನಿಂದ ಮಾಡುವ ಇತರೆ ಖರೀದಿಗೆ ಈ ಶುಲ್ಕ ಅನ್ವಯವಾಗದು. ಆದರೆ, ಇದು ಗ್ರಾಹಕರಿಗೆ ಹೊರೆ ಆಗದು. ವ್ಯಾಪಾರಿಗಳಿಗೆ ಅನ್ವಯವಾಗಲಿದೆ.

ಗೃಹ ಬಳಕೆ ಸಿಲಿಂಡರ್ ಬದಲಾವಣೆಯಿಲ್ಲ

2022ರಲ್ಲಿ ದೇಶೀಯ ಎಲ್‌ಪಿಜಿ ಸಿಲಿಂಡರ್‌ಗಳ ದರವನ್ನು ನಾಲ್ಕು ಬಾರಿ ಹೆಚ್ಚಿಸಲಾಯಿತು. ಈ ವರ್ಷದ ಜನವರಿಯಲ್ಲಿ, ವಾಣಿಜ್ಯ ಸಿಲಿಂಡರ್‌ಗಳ ಬೆಲೆಯನ್ನು ದೆಹಲಿಯಲ್ಲಿ 1,768 ರೂಪಾಯಿಗೆ ಹೆಚ್ಚಿಸಲಾಗಿತ್ತು. ಮಾರ್ಚ್ 1ರಂದು ಕಮರ್ಷಿಯಲ್ ಸಿಲಿಂಡರ್‌ಗಳ ಬೆಲೆ 350 ರೂಪಾಯಿ 50 ಪೈಸೆ ಹಾಗೂ ಗೃಹ ಬಳಕೆ ಸಿಲಿಂಡರ್ ಬೆಲೆ 50 ರೂಪಾಯಿ ಹೆಚ್ಚಳವಾಗಿತ್ತು. ಜನವರಿಯಲ್ಲಿ ಕಮರ್ಷಿಯಲ್ ಸಿಲಿಂಡರ್ ಬೆಲೆ 25 ರೂಪಾಯಿ ಹೆಚ್ಚಳವಾಗಿತ್ತು. ಕಳೆದ ವರ್ಷ, ಏಪ್ರಿಲ್ ಆರಂಭದಲ್ಲಿ 19 ಕೆಜಿ ವಾಣಿಜ್ಯ ಗ್ಯಾಸ್ ಸಿಲಿಂಡರ್ ಬೆಲೆ ದೆಹಲಿಯಲ್ಲಿ 2,253 ಆಗಿತ್ತು. ಒಂದು ವರ್ಷದಲ್ಲಿ, ವಾಣಿಜ್ಯ ಸಿಲಿಂಡರ್‌ಗಳ ಬೆಲೆ ರಾಷ್ಟ್ರ ರಾಜಧಾನಿಯೊಂದರಲ್ಲೇ 225 ರೂಪಾಯಿ ಇಳಿಕೆ ಕಂಡಿದೆ. ಭಾರತದಲ್ಲಿ LPG ಬೆಲೆಗಳನ್ನು ದೇಶೀಯ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ನಿರ್ಧರಿಸುತ್ತವೆ. ಪ್ರತಿ ತಿಂಗಳು ಬೆಲೆಯಲ್ಲಿ ಪರಿಷ್ಕರಣೆ ಯಾಗುತ್ತಿರುತ್ತದೆ. ಸ್ಥಳೀಯ ತೆರಿಗೆಗಳಿಂದಾಗಿ ದೇಶೀಯ ಅಡುಗೆ ಅನಿಲ ವೆಚ್ಚಗಳು ರಾಜ್ಯದಿಂದ ರಾಜ್ಯಕ್ಕೆ ಬದಲಾಗುತ್ತವೆ. ಪ್ರತಿ ಕುಟುಂಬವು ವರ್ಷಕ್ಕೆ ಸಬ್ಸಿಡಿ ದರದಲ್ಲಿ 12 ಸಿಲಿಂಡರ್‌ಗಳಿಗೆ ಅರ್ಹವಾಗಿರುತ್ತದೆ. ಇದನ್ನು ಮೀರಿ, ಸಿಲಿಂಡರ್‌ಗಳನ್ನು ಮಾರುಕಟ್ಟೆ ಮೌಲ್ಯದಲ್ಲಿ ಖರೀದಿಸಬಹುದಾಗಿದೆ.

ಪೆಟ್ರೋಲ್–ಡೀಸೆಲ್ ಬೆಲೆಯಲ್ಲಿ ಯಥಾಸ್ಥಿತಿ: ಆರ್ಥಿಕ ವರ್ಷದ ಆರಂಭ ದಿನ ಪೆಟ್ರೋಲ್–ಡೀಸೆಲ್ ಬೆಲೆಯಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ. ರಾಜಧಾನಿ ಬೆಂಗಳೂರಿನಲ್ಲಿ ಇಂದು 101 ರೂಪಾಯಿ 94 ಪೈಸೆ ಪೆಟ್ರೋಲ್‌ಗಿದ್ದರೆ, ಡೀಸೆಲ್ ಬೆಲೆ 87 ರೂಪಾಯಿ 89 ಪೈಸೆಯಾಗಿದೆ. ದೇಶದ ರಾಜಧಾನಿ ದೆಹಲಿಯಲ್ಲಿ ಪೆಟ್ರೋಲ್ ದರ 96 ರೂಪಾಯಿ 72 ಪೈಸೆಯಾಗಿದೆ. ಡೀಸೆಲ್ ಬೆಲೆ 89 ರೂಪಾಯಿ 62 ಪೈಸೆಯಾಗಿದೆ.

ಮೈಸೂರಲ್ಲಿ ವಿವಿಧೆಡೆ ಡಾ.ಶಿವಕುಮಾರ ಸ್ವಾಮೀಜಿಗಳ ಜಯಂತಿ ಭಕ್ತಿ–ಭಾವದ ಆಚರಣೆ



ಮೈಸೂರು, ಏ.1(ಎನ್‌ಪಿಎನ್)– ನಡೆದಾಡುವ ದೇವರು, ತ್ರಿವಿಧ ದಾಸೋಹಿ ಎಂದೇ ಹೆಸರುವಾಸಿಯಾಗಿದ್ದ ಡಾ.ಶಿವಕುಮಾರ ಸ್ವಾಮೀಜಿ ಅವರ 116ನೇ ಜಯಂತೋತ್ಸವವನ್ನು ಮೈಸೂರಿನ ವಿವಿಧೆಡೆ ಭಕ್ತಿ–ಭಾವದಿಂದ ಶನಿವಾರ ಆಚರಿಸಲಾಯಿತು.

ಬನ್ನಿಮಂಟಪ ಕೆಎಸ್‌ಆರ್‌ಟಿಸಿ ಆವರಣ: ಮೈಸೂರು ಬನ್ನಿಮಂಟಪದ ಕೆಎಸ್‌ಆರ್‌ಟಿಸಿ ಡಿಪೋದಲ್ಲಿ ವೀರಶೈವ–ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶ್ರೀ ಶಿವಕುಮಾರ ಸ್ವಾಮೀಜಿ ಜಯಂತಿ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರ ನುಡಿನಮನ ಕಾರ್ಯಕ್ರಮದಲ್ಲಿ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು.

ನಂತರ ಮೈಸೂರು ನಿಜಗುಣ ಸತ್ಸಂಗ ಬಳಗದ ಸಿ.ಪಿ.ರಾಮಶೇಷು ಮಾತನಾಡಿ, ಕೆಎಸ್‌ಆರ್‌ಟಿಸಿ ನೌಕರರು ತ್ರಿವಿಧ ದಾಸೋಹಿ, ಪದ್ಮವಿಭೂಷಣ ಡಾ.ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಹಾಗೂ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರಿಗೆ ನುಡಿನಮನ ಸಲ್ಲಿಸುತ್ತಿರುವುದು ಉತ್ತಮ ಸಂಗತಿ ಎಂದರು. ಶ್ರೀ ಸಿದ್ದೇಶ್ವರ ಸ್ವಾಮೀಜಿ ಅವರು ತಮ್ಮ ಜೀವಿತಾವಧಿಯಲ್ಲಿ ಯಾವುದಕ್ಕೂ ಆಸೆ ಪಟ್ಟವರಲ್ಲ. ಮಠ ಕಟ್ಟಿಕೊಡುತ್ತೀವಿ, ಹೊಸ ಬಟ್ಟೆ ಕೊಡುತ್ತೀವಿ ಎಂದು ಭಕ್ತರು ಪ್ರಾರ್ಥಿಸಿದರೂ ತೆಗೆದುಕೊಂಡವರಲ್ಲ. ಎಲ್ಲವನ್ನು ನಯವಾಗಿ ತಿರಸ್ಕಾರ ಮಾಡುತ್ತಿದ್ದರು. ಒಂದರ್ಥದಲ್ಲಿ 'ಬೇಡ' ಎಂಬ ದೀಕ್ಷೆ ಪಡೆದಿದ್ದರೇನೋ ಎಂಬಂತೆ ಬದುಕಿದವರು ಸಿದ್ದೇಶ್ವರ ಸ್ವಾಮೀಜಿ. ಇಂದಿನ ಪೀಳಿಗೆ ಅವರ ತತ್ವಾದರ್ಶಗಳನ್ನು ಮೈಗೂಡಿಸಿ ಕೊಂಡು ಉತ್ತಮ ಜೀವನ ಕಟ್ಟಿಕೊಳ್ಳುವಂತೆ ಸಲಹೆ ನೀಡಿದರು. ತ್ರಿವಿಧ ದಾಸೋಹಿ ಶ್ರೀ ಶಿವಕುಮಾರ ಸ್ವಾಮೀಜಿ ಅವರು ಜೀವಿತಾವಧಿಯಲ್ಲಿ ದಿನನಿತ್ಯ ಸಾವಿರಾರು ಮಂದಿಗೆ ಶಿಕ್ಷಣ, ದಾಸೋಹ ನೀಡಿದ್ದಾರೆ. ಅದರಂತೆ ಧಾರ್ಮಿಕ ಸೇವೆಯಲ್ಲಿ ತೊಡಗಿಸಿಕೊಂಡು ಇಂದಿನ ಪೀಳಿಗೆಗೆ ನಡೆದಾಡುವ ದೇವರೆಂದು ಪ್ರಸಿದ್ಧಿ ಹೊಂದಿದ್ದರು. ಶ್ರೀಗಳ 116ನೇ ಜಯಂತಿಯನ್ನು ಕೆಎಸ್‌ಆರ್‌ಟಿಸಿ ನೌಕರರು ಅರ್ಥಪೂರ್ಣವಾಗಿ ಆಚರಿಸಿರುವುದು ಉತ್ತಮ ಬೆಳವಣಿಗೆ ಎಂದು ತಿಳಿಸಿದರು.

ಕೋವಿಡ್–19 ಸಂದರ್ಭದಲ್ಲಿ ವೇತನ ಇಲ್ಲದ ದಿನಗಳಲ್ಲಿ ಕೆಎಸ್‌ಆರ್‌ಟಿಸಿ ನೌಕರರಿಗೆ ಉಚಿತ ದಾಸೋಹ ಸೇವೆ ಮಾಡಿ, ದಿನನಿತ್ಯ ಸಾವಿರಾರು ನೌಕರರ ಹಸಿವು ನೀಗಿಸಿದ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದ ಮುಂಭಾಗದಲ್ಲಿರುವ ಅನ್ನಪೂರ್ಣೇಶ್ವರಿ ಮೆಸ್ ಮಾಲೀಕರಾದ ಮೈತ್ರಿ ಅರುಣ್ ಅವರನ್ನು ಈ ವೇಳೆ ಸನ್ಮಾನಿಸಲಾಯಿತು.

ಮೈಸೂರು ಅರಮನೆ ಜಪಕಟ್ಟೆ ಮಠದ ಶ್ರೀ ಮುಮ್ಮಡಿ ಚಂದ್ರಶೇಖರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಈ ವೇಳೆ ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಮರಿಗೌಡ(ಪ್ರಭಾರ), ವಿಭಾಗೀಯ ಯಾಂತ್ರಿಕ ಅಭಿಯಂತರ ಚಂದ್ರಪ್ಪ, ವೀರಶೈವ–ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಮಾಜಿ ಅಧ್ಯಕ್ಷ ಸಿ.ಡಿ.ಬಸವರಾಜು, ಎಂ.ಕೆ. ಸ್ವಾಮಿ, ಜಾಗತಿಕ ಲಿಂಗಾಯತ ಮಹಾಸಭಾ ರಾಜ್ಯ ಕಾರ್ಯದರ್ಶಿ ಶರಣ ಮಹದೇವಪ್ಪ, ಮುಖಂಡ ಗುರುಸ್ವಾಮಿ, ಬಸವಬಳಗಗಳ ಒಕ್ಕೂಟದ ಅಧ್ಯಕ್ಷ ಸಿ.ಡಿ.ಲಿಂಗರಾಜು, ಅಧ್ಯಕ್ಷ ಎಂ.ಪಿ.ನಾಗಪ್ರಸಾದ್, ಕಾರ್ಯದರ್ಶಿ ಮಹಾಂತೇಶ್ ಇತರರಿದ್ದರು. ಅಲ್ಲದೆ, ನಗರ ವಿವಿಧೆಡೆ ಅರ್ಥಪೂರ್ಣವಾಗಿ ಆಚರಿಸಲಾಯಿತು. ನಂತರ ಸಾವಿರಾರು ಮಂದಿಗೆ ಅನ್ನಸಂತರ್ಪಣೆಯೂ ಇತ್ತು.

ವಿಶ್ವಮಾನವ ಜೋಡಿ ರಸ್ತೆಯಲ್ಲಿ ಆಚರಣೆ: ಕುವೆಂಪುನಗರದ ವಿಶ್ವಮಾನವ ಜೋಡಿರಸ್ತೆಯಲ್ಲಿರುವ ಶ್ರೀ ಸಿದ್ದಗಂಗಾ ಶಿವಕುಮಾರಸ್ವಾಮೀಜಿ ವೃತ್ತದಲ್ಲಿ ಡಾ.ಶಿವಕುಮಾರ ಸ್ವಾಮೀಜಿ ದಾಸೋಹ ಬಳಗದ ವತಿಯಿಂದ ನಡೆದ ಪೂಜ್ಯರ 116ನೇ ಜಯಂತಿ ಅಂಗವಾಗಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಈ ವೇಳೆ ಬಳಗದ ಸಂಚಾಲಕ ಎನ್.ಜಿ.ಗಿರೀಶ್, ಚಿದಾನಂದ್, ಶಿವಾ ದೇವಾಲಯದ ನಿರ್ದೇಶಕ ಸುರೇಶ್ ವಾಲಿ, ಸೇಫ್‌ವ್ಹೀಲ್ ಪ್ರಶಾಂತ್, ಮುಖಂಡ ಗುರುಸ್ವಾಮಿ, ಮಹಿಳಾ ಮುಖಂಡರಾದ ಮಂಗಳ ಮುದ್ದುಮಾದಪ್ಪ, ಜಯಗೌಡ ಸೇರಿದಂತೆ ಇತರರಿದ್ದರು. ಅನ್ನಸಂತರ್ಪಣೆಯೂ ನಡೆಯಿತು.

ಕೃಷ್ಣರಾಜ ಯುವಬಳಗದಿಂದ ಆಚರಣೆ: ಸಿದ್ದಗಂಗಾ ಮಠದ ಶ್ರೀ ಶಿವಕುಮಾರ ಸ್ವಾಮೀಜಿ ಅವರ ಜಯಂತಿ ಅಂಗವಾಗಿ ಮೈಸೂರು ನಂಜುಮಳಿಗೆ ವೃತ್ತದಲ್ಲಿ ಗೋವುಗಳಿಗೆ ಮೇವು ತಿನ್ನಿಸುವ ಮೂಲಕ ಕೃಷ್ಣರಾಜ ಯುವಬಳಗ ಅರ್ಥಪೂರ್ಣವಾಗಿ ಆಚರಿಸಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಹೇಮಾ ನಂದೀಶ್, ಜೀವಧಾರ ರಕ್ತನಿಧಿ ಕೇಂದ್ರದ ಗಿರೀಶ್, ಅಪೂರ್ವ ಸುರೇಶ್ ಸೇರಿದಂತೆ ಇತರರಿದ್ದರು.

'ಬೆಳಗಿನೊಳಗು ಮಹಾದೇವಿಯಕ್ಕ' ಕಾದಂಬರಿ ಬಿಡುಗಡೆ



ಮೈಸೂರು, ಏ.1(ಎಸ್‌ಪಿಎನ್)– ಹಿರಿಯ ಕಾದಂಬರಿಗಾರ್ತಿ ಡಾ.ಎಚ್.ಎಸ್.ಅನುಪಮಾ ರಚಿತ 'ಬೆಳಗಿನೊಳಗು ಮಹಾದೇವಿಯಕ್ಕ' ಕಾದಂಬರಿಯ 2ನೇ ಮುದ್ರಣವನ್ನು ಹಿರಿಯ ಸಾಹಿತಿ ಪ್ರೊ.ಅರವಿಂದ ಮಾಲಗತ್ತಿ ಶನಿವಾರ ಬಿಡುಗಡೆಗೊಳಿಸಿದರು. ಮೈಸೂರು ಜೆಎಲ್‌ಬಿ ರಸ್ತೆಯಲ್ಲಿ ಎಂಜಿನಿಯರ್‌ಗಳ ಸಂಸ್ಥೆಗಳ ಸಭಾಂಗಣದಲ್ಲಿ ಅಂಗಳ ಸಾಹಿತ್ಯ ಬಳಗ, ಗದಗಿನ ಲಡಾಯಿ ಪ್ರಕಾಶನ ಹಾಗೂ ಮೈಸೂರಿನ ಮಾನಸಗಂಗೋತ್ರಿ ಸಹಯೋಗದೊಂದಿಗೆ ಆಯೋಜಿಸಿದ್ದ 'ಬೆಳಗಿನೊಳಗು ಮಹಾದೇವಿಯಕ್ಕ' ಕಾದಂಬರಿಯನ್ನು ಬಿಡುಗಡೆಗೊಳಿಸಿದರು.

ವಚನಗಾರ್ತಿ ಅಕ್ಕಮಹಾದೇವಿ ಅವರನ್ನು ಒಂದು ಸೀಮಿತ ಚೌಕಟ್ಟಿನಲ್ಲಿ ಅಧ್ಯಯನ ಮಾಡುವುದನ್ನು ಡಾ.ಎಚ್.ಎಸ್. ಅನುಪಮಾ ರಚಿತ 'ಬೆಳಗಿನೊಳಗು ಮಹಾದೇವಿಯಕ್ಕ' ಕಾದಂಬರಿ ಮುರಿದು ಹಾಕಿದೆ. ಹೀಗಾಗಿ, ಓದುಗರ ದೃಷ್ಟಿಯಲ್ಲಿ ಕಾದಂಬರಿಯ ನೋಟವೇ ಬದಲಾಗಿದೆ. ಐತಿಹಾಸಿಕ ಕೃತಿ ಎನ್ನುವ ಅರಿವು ಪದೇ ಪದೇ ಓದುಗನ ಅರಿವಿಗೆ ಬರುತ್ತದೆ ಎಂದು ತಿಳಿಸಿದರು. 12ನೇ ಶತಮಾನದ ಬಸವಣ್ಣನ ಸಾಮಾಜಿಕ ಚಿಂತನೆಯ ಪರಿಭಾಷೆಯಲ್ಲಿ ಅಕ್ಕಮಹಾದೇವಿಯನ್ನು ವಿಮರ್ಶಕರು ನೋಡಲೇ ಇಲ್ಲ. ಅಕ್ಕನ ವಚನಗಳನ್ನು ಮತ್ತೊಮ್ಮೆ ಓದುವ ಮತ್ತು ಅರ್ಥೈಸುವ ಅಗತ್ಯವಿದೆ ಎಂದು ಸಲಹೆ ನೀಡಿದ ಅವರು ಇದರಲ್ಲಿ ಅಧಿಕೃತತೆ ಇದೆ ಎನ್ನುವುದನ್ನು ಓದುಗರಿಗೆ ಮನವರಿಕೆ ಮಾಡಿಕೊಡುತ್ತದೆ. ಈ ಕಾದಂಬರಿ ಆತ್ಮಕಥೆಯ ಪರಿಭಾಷೆಯನ್ನೂ ಹೊಂದಿದೆ. ಅಕ್ಕ ಮಹಾದೇವಿಯೇ ಲೇಖಕಿ ಡಾ.ಎಚ್.ಎಸ್.ಅನುಪಮಾ ಅವರ ಮುಂದೆ ಕುಳಿತು ಬರೆಸಿದಂತಿದೆ. ಹಾಗಾಗಿ ಇದನ್ನು ಕಾದಂಬರಿ ಎನ್ನುವುದಕ್ಕಿಂತ 'ಅಕ್ಕನ ಆತ್ಮಕಥೆ' ಎನ್ನಬಹುದು ಎಂದು ತಿಳಿಸಿದರು.

ಒಬ್ಬ ಇತಿಹಾಸಕಾರ ಹಾಗೂ ಬರಹಗಾರನಿಗೆ ಇರುವ ದೊಡ್ಡ ವ್ಯತ್ಯಾಸವೇನೆಂದರೆ ಇತಿಹಾಸಕಾರ ಸಾಕ್ಷಿ ಇಲ್ಲದಿದ್ದರೆ ಊಹೆ ಮಾಡಿ ಬಿಟ್ಟುಬಿಡುತ್ತಾರೆ. ಆದರೆ, ಲೇಖಕರಿಗೆ ಸ್ವಾತಂತ್ರ್ಯ ಇರುತ್ತದೆ. ಇದನ್ನು ಲೇಖಕಿ ಅನುಪಮಾ ಚೆನ್ನಾಗಿ ಬಳಸಿಕೊಂಡಿದ್ದಾರೆ. ಈ ಕಾದಂಬರಿಯನ್ನು ಸ್ತ್ರೀವಾದದ ಹಿನ್ನೆಲೆಯಲ್ಲಿ ನೋಡುವ ಅಗತ್ಯವಿಲ್ಲ. ಈ ನಿಟ್ಟಿನಲ್ಲಿ ನಾವು ನೋಡಿದರೆ, ಕೃತಿಗೆ ನಾವೇ ಮಿತಿ ಹಾಕಿದಂತಾಗುತ್ತದೆ. ಇದು ಅಕ್ಕ ಜೀವಪರವಾದ ನಿಲುವು ಹೊಂದಿದ್ದರು ಎಂದು ತಿಳಿಸಿದರು.

ಕಾದಂಬರಿಗಾರ್ತಿ ಡಾ.ಎಚ್.ಎಸ್.ಅನುಪಮಾ ಮಾತನಾಡಿ, 'ಲಕ್ಕುಂಡಿಗೆ ಅಕ್ಕ ಬಂದಿದ್ದಳು ಎನ್ನುವುದು ನನ್ನ ಕಲ್ಪನೆ' ಆದರೆ, ಕಾದಂಬರಿ ಇತಿಹಾಸವಲ್ಲ. ನಾನೇ ಕ್ಷೇತ್ರ ಅಧ್ಯಯನ ಸಂದರ್ಭದಲ್ಲಿ ಒಂದು ರೂಟ್ ಮ್ಯಾಪ್ ಮಾಡಿಕೊಂಡು ಆಕೆ ಎಲ್ಲೆಲ್ಲಿಗೆ ಹೋಗಿರಬಹುದು ಎಂದು ಊಹಿಸಿಕೊಂಡು ಬರೆಯುತ್ತಾ ಹೋದೆ. ಐತಿಹಾಸಿಕ ಅಂಶಗಳ ಜೊತೆಗೆ ಅಲ್ಲಲ್ಲಿ ಸ್ವಾತಂತ್ರ್ಯ ತೆಗೆದುಕೊಂಡು ನನ್ನ ಕಲ್ಪನೆಗಳನ್ನು ಸೇರಿಸಿದ್ದೇನೆ ಎಂದು ಕಾದಂಬರಿ ರಚನೆಯ ಒಳ ಸುಳಿವು ಬಿಚ್ಚಿಟ್ಟರು. ಈ ವೇಳೆ ಪ್ರೊ.ಎಂ.ಉಷಾ, ಪ್ರಕಾಶಕ ಬಸವರಾಜ ಸೂಳಿಬಾವಿ, ಯುವ ಲೇಖಕ ವಿನೋದ್ ಮಹದೇವಪುರ ನಿರೂಪಿಸಿದರು.


ಡಿಕೆಶಿ ವಿರುದ್ಧದ ಸಿಬಿಐ ವಿಚಾರಣೆಗೆ ನೀಡಿದ್ದ ತಡೆಯಾಜ್ಞೆ ವಿಸ್ತರಿಸಿದ ಹೈಕೋರ್ಟ್



ಬೆಂಗಳೂರು, ಏ.1– ಅಕ್ರಮ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿರುದ್ಧದ ಸಿಬಿಐ ವಿಚಾರಣೆಗೆ ನೀಡಿದ್ದ ತಡೆಯಾಜ್ಞೆಯನ್ನು ಹೈಕೋರ್ಟ್ ಏಪ್ರಿಲ್ 6 ರವರೆಗೆ ವಿಸ್ತರಿಸಿದೆ. ತಮ್ಮ ವಿರುದ್ಧದ ವಿಚಾರಣೆಯನ್ನು ರದ್ದುಗೊಳಿಸುವಂತೆ ಕೋರಿ ಡಿಕೆಶಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ಪೀಠ, ಮಧ್ಯಂತರ ತಡೆಯಾಜ್ಞೆಯನ್ನು ವಿಸ್ತರಿಸಿದೆ.

ಶಿವಕುಮಾರ್ ಅವರು ತಮ್ಮ ವಿರುದ್ಧ ಕಾನೂನು ಕ್ರಮ ಜರುಗಿಸಲು ನೀಡಿರುವ ಅನುಮತಿಯನ್ನು ಪ್ರಶ್ನಿಸಿ ಸಲ್ಲಿಸಿರುವ ಇನ್ನೊಂದು ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಏಪ್ರಿಲ್ 6ರವರೆಗೆ ಕಾಲಾವಕಾಶ ನೀಡಿ, ವಿಚಾರಣೆಯನ್ನು ಮುಂದೂಡಿದೆ. ವಿಧಾನಸಭೆ ಚುನಾವಣೆ ದಿನಾಂಕ ಪ್ರಕಟವಾಗಿರುವುದರಿಂದ ಶಿವಕುಮಾರ್ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಸಿಬಿಐಗೆ ಸರ್ಕಾರ ಅನುಮತಿ ನೀಡಿದ್ದರ ವಿರುದ್ಧ ಸಲ್ಲಿಸಿರುವ ಅರ್ಜಿಗೆ ಆಕ್ಷೇಪಣೆ ಸಲ್ಲಿಸಲು ಇನ್ನಷ್ಟು ಕಾಲಾವಕಾಶ ಬೇಕು ಎಂದು ಸರ್ಕಾರಿ ವಕೀಲರು ನ್ಯಾಯಾಲಯಕ್ಕೆ ತಿಳಿಸಿದ್ದಾರೆ. ಸರ್ಕಾರಿ ವಕೀಲರು ನಾಲ್ಕು ವಾರಗಳ ಕಾಲಾವಕಾಶ ಕೋರಿದ್ದರು. ಆದರೆ ಕೋರ್ಟ್ ಏ.6ರ ವರೆಗೆ ಕಾಲಾವಕಾಶ ನೀಡಿ, ವಿಚಾರಣೆಯನ್ನು ಏಪ್ರಿಲ್ 6ಕ್ಕೆ ಮುಂದೂಡಿದೆ.

ನಡೆದಾಡುವ ದೇವರು ಶಿವಕುಮಾರ ಸ್ವಾಮೀಜಿ ಜನ್ಮದಿನೋತ್ಸವ:
116 ಮಕ್ಕಳಿಗೆ ಸ್ವಾಮೀಜಿ ಹೆಸರು ನಾಮಕರಣ



ತುಮಕೂರು, ಏ.1– ನಡೆದಾಡುವ ದೇವರು ತ್ರಿವಿಧ ದಾಸೋಹಿ ಲಿಂಗೈಕ್ಯ ಶ್ರೀ ಶಿವಕುಮಾರ ಸ್ವಾಮೀಜಿಯವರ 116ನೇ ಜಯಂತಿ ಹಿನ್ನೆಲೆ ಶ್ರೀ ಮಠದಲ್ಲಿ ಪ್ರಾತಃಕಾಲದಿಂದಲೇ ಪೂಜಾ ಕೈಂಕರ್ಯಗಳು ನಡೆದವು. ಜನ್ಮದಿನ ಹಿನ್ನೆಲೆಯಲ್ಲಿ ಶ್ರೀಗಳ ಗದ್ದುಗೆಗೆ ದೀಪಾಲಂಕಾರ, ಪುಷ್ಪಗಳಿಂದ ಅಲಂಕಾರ ಮಾಡಲಾಗಿದ್ದು, ಸಿದ್ದಲಿಂಗಾಶ್ರೀ ಸೇರಿದಂತೆ ವಿವಿಧ ಮಠಾಧೀಶರು ಶಿವಕುಮಾರ ಶ್ರೀಗಳ ಗದ್ದುಗೆಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಪುಷ್ಪಾರ್ಚನೆ ನೆರವೇರಿಸಿದ್ದಾರೆ. ಮಠದಲ್ಲಿಂದು ವಿಶೇಷ ಕಾರ್ಯಕ್ರಮಗಳು ನಡೆಯಲಿದ್ದು, ಲಕ್ಷಾಂತರ ಭಕ್ತರು ಭಾಗವಹಿಸುತ್ತಿದ್ದಾರೆ. ಬೆಳಗ್ಗೆ 11 ಗಂಟೆಗೆ ಗೋಸಲಸಿದ್ದೇಶ್ವರ ವೇದಿಕೆಯಲ್ಲಿ ಅದ್ಧೂರಿ ಸಭಾ ಕಾರ್ಯಕ್ರಮ ನಡೆದಿದ್ದು, ನೀತಿ ಸಂಹಿತೆ ಜಾರಿ ಇರುವ ಹಿನ್ನೆಲೆಯಲ್ಲಿ ರಾಜಕಾರಣಿಗಳು, ಜನಪ್ರತಿನಿಧಿಗಳು ಈ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿಲ್ಲ. ಆದರೆ, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಪ್ರಭಾಕರ್ ಕೋರೆ ಸೇರಿದಂತೆ ವಿವಿಧ ಗಣ್ಯರು ಈ ಸಮಾರಂಭದಲ್ಲಿ ಉಪಸ್ಥಿತರಿದ್ದರು. ಶ್ರೀಗಳ 116ನೇ ಜಯಂತ್ಯುತ್ಸವದ ಪ್ರಯುಕ್ತ ಒಟ್ಟು 116 ಮಕ್ಕಳಿಗೆ ಶಿವಕುಮಾರ ಶ್ರೀಗಳ ಹೆಸರನ್ನು ನಾಮಕರಣ ಮಾಡುವ ಸಲುವಾಗಿ ಈಗಾಗಲೇ ಪೋಷಕರು ಹೆಸರನ್ನ ನೋಂದಾಯಿಸಿಕೊಂಡಿದ್ದು, ಮಠದಲ್ಲಿ ನಾಮಕರಣ ಕಾರ್ಯಕ್ರಮ ಕೂಡ ನಡೆಯಿತು.



ಕನ್ನಡದಲ್ಲಿ ಟ್ವೀಟ್ ಮಾಡಿ ಶ್ರೀಗಳ ಸ್ಮರಿಸಿದ ಮೋದಿ



ಶ್ರೀ ಶಿವಕುಮಾರ ಸ್ವಾಮೀಜಿಗಳ ಜನ್ಮದಿನ ಹಿನ್ನೆಲೆಯಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಕನ್ನಡದಲ್ಲೇ ಟ್ವೀಟ್ ಮಾಡಿ ಶ್ರೀಗಳನ್ನು ಸ್ಮರಿಸಿದ್ದಾರೆ. ತುಮಕೂರು ಭೇಟಿ ವೇಳೆಯ ಭಾಷಣದ ತುಣುಕೊಂದನ್ನು ಮೋದಿ ಹಂಚಿಕೊಂಡಿದ್ದು, ಅದರಲ್ಲಿ ಸಿದ್ದಗಂಗಾ ಶ್ರೀಗಳು ಗುಜರಾತ್‌ನ ನರೇಂದ್ರ ಮೋದಿಯವರ ಮನೆಗೆ ಭೇಟಿ ನೀಡಿ ತುಮಕೂರಿಗೆ ಬನ್ನಿ ಎಂದು ಆಹ್ವಾನ ನೀಡಿರುವುದನ್ನು ಉಲ್ಲೇಖಿಸಿದ್ದಾರೆ.

ಈ ಸಂದರ್ಭದಲ್ಲಿ ನರೇಂದ್ರ ಮೋದಿಯವರು ಗುಜರಾತ್ ಮುಖ್ಯಮಂತ್ರಿಯಾಗಿದ್ದರು. ಪೂಜ್ಯ ಡಾ. ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿಯವರ ಹುಟ್ಟುಹಬ್ಬದ ಈ ವಿಶೇಷ ಸಂದರ್ಭದಲ್ಲಿ ಅವರಿಗೆ ನನ್ನ ನಮನ. ಅವರು ಲಕ್ಷಾಂತರ ಜನರ ಮೇಲೆ ಅಪಾರ ಪ್ರಭಾವ ಬೀರಿದ್ದಾರೆ. ಸಮಾಜಸೇವೆಗೆ ಉನ್ನತ ಸ್ಥಾನ ಮತ್ತು ಜನರನ್ನು ಸಶಕ್ತಗೊಳಿಸುವುದಕ್ಕೆ ಅವರು ಪ್ರಾಮುಖ್ಯತೆ ನೀಡಿದ್ದರು. ಅವರ ಕನಸುಗಳನ್ನು ನನಸಾಗಿಸಲು ನಾವು ಸದಾ ಶ್ರಮಿಸುತ್ತೇವೆ" ಎಂದು ಮೋದಿಯವರು ಟ್ವೀಟ್ ಮಾಡಿದ್ದಾರೆ.

ವಿವಿಧೆಡೆ ಶಿವಕುಮಾರ ಸ್ವಾಮೀಜಿ ಸ್ಮರಣೆ...



ಮೈಸೂರು ಜೆ.ಪಿ.ನಗರದ ಡಾ. ಶಿವಕುಮಾರಸ್ವಾಮಿ ಉದ್ಯಾನವನದಲ್ಲಿ ಶಿವಕುಮಾರ ಸ್ವಾಮಿಗಳ 116ನೇ ಜಯಂತಿಯನ್ನು ಆಚರಿಸಲಾಯಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮಾಜಿ ಮೇಯರ್ ಓಂಕಾರ್ ಪ್ರಸಾದ್, ಮುಖಂಡರಾದ ಕೇಬಲ್ ಶೇಖರ್, ವಕೀಲರಾದ ಶಶಿಕಿರಣ್, ಆರ್.ಡಿ.ವಿಶ್ವನಾಥ್, ಬಾಲು, ತೀರ್ಥಪ್ರಸಾದ್, ಸಿ.ಡಿ. ಬಸವರಾಜು, ಪಾಲಾಕ್ಷ, ರವಿಶಂಕರ್, ಯೋಗೇಶ್ ಉಪ್ಪಾರ್, ರಂಜನ್, ಜಗನ್ನಾಥ್ ಬೋವಿ ಇನ್ನಿತರರು ಉಪಸ್ಥಿತರಿದ್ದರು.



ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ, ವೀರಶೈವ ಲಿಂಗಾಯತ ಸಂಘ–ಸಂಸ್ಥೆಗಳು ಹಾಗೂ ಬಸವ ಬಳಗಗಳ ಒಕ್ಕೂಟದ ವತಿಯಿಂದ ಬಸವೇಶ್ವರ ವೃತ್ತದಲ್ಲಿ ಶ್ರೀಶಿವಕುಮಾರ ಸ್ವಾಮೀಜಿಯವರ 116ನೇ ಜಯಂತಿಯನ್ನು ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಆಚರಿಸಲಾಯಿತು. ಈ ವೇಳೆ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಹಡಜನ ಟಿ.ಲಿಂಗರಾಜು, ಮಹಾಸಭಾ ರಾಜ್ಯ ಕಾರ್ಯಕಾರಿಣಿ ಸದಸ್ಯ ಹೆಚ್.ವಿ.ಬಸವರಾಜು, ಮಹಾಸಭಾ ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಟಿ.ಎಸ್.ಲೋಕೇಶ್, ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್ ಕುಮಾರ್, ತಾಲೂಕು ಮಹಾಸಭಾ ಅಧ್ಯಕ್ಷ ಬಿ.ಕೆ.ನಾಗರಾಜು, ಮೂಗೂರು ನಂಜುಂಡಸ್ವಾಮಿ, ಸಿ.ಗುರುಸ್ವಾಮಿ, ಎಂ.ಹೆಚ್.ಚಂದ್ರಶೇಖರ್, ವೀರೇಶ್, ಡಿ.ಚಂದ್ರಶೇಖರ್, ದೂರ ಶಿವಕುಮಾರ್, ಡಿ.ಪಿ.ಸುರೇಶ್, ಪಾಪು ಅರಸ್, ಗೆಜ್ಜಗಳ್ಳಿ ಶಂಕರ್, ಶಶಿಕಿರಣ್ ಉಪಸ್ಥಿತರಿದ್ದರು.



ಶಿವಕುಮಾರ ಸ್ವಾಮೀಜಿ ಅವರ ಜಯಂತಿಯನ್ನು ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಆಚರಿಸಲಾಯಿತು. ಈ ವೇಳೆ ಮಾಜಿ ಶಾಸಕ ರಮೇಶ್ ಬಾಬು ಬಂಡಿ ಸಿದ್ದೇಗೌಡ, ಚಾಮರಾಜ ಕ್ಷೇತ್ರದ ಕಾಂಗ್ರೆಸ್ ಮುಖಂಡ ಹರೀಶ್‌ಗೌಡ, ಮೈಸೂರು ನಗರ ಪ್ರಚಾರ ಸಮಿತಿ ಅಧ್ಯಕ್ಷ ಅಶೋಕ್, ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಯೋಗೇಶ್, ಮುಖಂಡರಾದ ಅನಂತ್, ನಾರಾಯಣ್, ಮಾದೇಶ್, ರಾಜಣ್ಣ, ಮಾದೇಗೌಡ, ರಾಜೇಶ್, ರವಿಚಂದ್ರ, ಶಿವ ಇದ್ದರು.



ನಡೆದಾಡುವ ದೇವರು, ತ್ರಿವಿಧ ದಾಸೋಹಿ, ಕರ್ನಾಟಕ ರತ್ನ ಡಾ. ಶಿವಕುಮಾರ ಸ್ವಾಮೀಜಿಯವರ 116ನೇ ಜಯಂತಿ ದಿನವನ್ನು ಪವಿತ್ರ ದಿನಾಚರಣೆಯನ್ನಾಗಿ ಗೋಕುಲಂನಲ್ಲಿ ಆಚರಿಸಲಾಯಿತು. ಈ ವೇಳೆ ಮುಖಂಡರಾದ ಪಿ.ಎನ್. ಬಸವರಾಜು, ಜಯಣ್ಣ, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಈ.ಬಸವರಾಜು, ಕಿಟ್ಟಿ, ಸಿ.ಡಿ.ಕುಮಾರ್, ಸಿ.ಸಂತೋಷ್, ಬಿ.ಕುಮಾರ್, ಯೋಗೇಶ್, ಶಿವಣ್ಣ ಇನ್ನಿತರರಿದ್ದಾರೆ.




ನಡೆದಾಡುವ ದೇವರು ಶ್ರೀ ಡಾ.ಶಿವಕುಮಾರ ಸ್ವಾಮೀಜಿಗಳ 116ನೇ ಜಯಂತಿಯನ್ನು ಮೈಸೂರಿನ ಕುವೆಂಪುನಗರದ ಸ್ವಾಮೀಜಿ ಅವರ ವೃತ್ತದಲ್ಲಿ ಪಾನಕ, ಮಜ್ಜಿಗೆ ವಿತರಿಸುವ ಮೂಲಕ ಆಚರಣೆ ಮಾಡಲಾಯಿತು. ಉದ್ಯಮಿ ಯು.ಎಸ್.ಶೇಖರ್, ಕನ್ನಡ ಚಳವಳಿಗಾರ ಮೂಗೂರು ನಂಜುಂಡಸ್ವಾಮಿ, ಸಮಾಜ ಸೇವಕ ಸಾ.ವಿ. ಮಲ್ಲಿಕಾರ್ಜುನ್, ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ ಇನ್ನಿತರರಿದ್ದರು.



ಮೈಸೂರಿನ ಸದ್ವಿದ್ಯಾ ಶಾಲೆಯ ವೃತ್ತದಲ್ಲಿ ಮೈಸೂರು ಯುವ ಬಳಗದ ವತಿಯಿಂದ ಶ್ರೀ ಶಿವಕುಮಾರ ಸ್ವಾಮೀಜಿ ಅವರ 116ನೇ ಜಯಂತಿ ಆಚರಿಸಲಾಯಿತು. ಈ ವೇಳೆ ಮೈಸೂರು ಯುವ ಬಳಗದ ರವಿಚಂದ್ರ, ಗುರುರಾಜ್, ಸಂತೋಷ್, ರವಿಚಂದ್ರ ನವೀನ್ ಲೋಕೇಶ ಆನಂದ್, ಜ್ಞಾನೇಶ, ಮಂಜುನಾಥ್, ಉಮೇಶ್ ಇನ್ನಿತರರಿದ್ದರು.

ಸೂಕ್ತ ಆದೇಶವಿಲ್ಲದೇ ಯಾರೂ ಜೈಲುವಾಸ ಅನುಭವಿಸಬಾರದು



ನವದೆಹಲಿ: ಕಾನೂನಾತ್ಮಕ ಪ್ರಕ್ರಿಯೆ ಪೂರ್ಣಗೊಂಡು, ಸೂಕ್ತ ಆದೇಶವಿರದ ಹೊರತು ಯಾವ ವ್ಯಕ್ತಿಯೂ ಕಾರಾಗೃಹವಾಸ ಅನುಭವಿಸುವಂತಾಗಬಾರದು ಎಂದು ಸುಪ್ರೀಂಕೋರ್ಟ್ ಹೇಳಿದೆ.

ಸುರಕ್ಷತೆಯನ್ನು ಖಾತರಿಪಡಿಸುವುದು ಹಾಗೂ ಅಪರಾಧ ಕೃತ್ಯಗಳನ್ನು ತಡೆಗಟ್ಟುವುದು ಸರ್ಕಾರದ ಕರ್ತವ್ಯವಾಗಿದ್ದರೂ, ವೈಯಕ್ತಿಕ ಸ್ವಾತಂತ್ರ್ಯವು ಗೌಣವಾಗಬಾರದು ಎಂದೂ ಹೇಳಿದೆ.

'ಡಿಫಾಲ್ಟ್ ಜಾಮೀನು' ಕುರಿತ ಅರ್ಜಿಯೊಂದರ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್, ಹೃಷಿಕೇಶರಾಯ್ ಹಾಗೂ ಬಿ.ವಿ.ನಾಗರತ್ನ ಅವರಿದ್ದ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು.

ಯೆಸ್ ಬ್ಯಾಂಕ್‌ಗೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದ ಆರೋಪಿಗಳಾದ ಡಿಎಚ್‌ಎಫ್‌ಎಲ್ ಪ್ರವರ್ತಕರಾದ ಕಪಿಲ್ ವಾಧ್ವಾನ್ ಮತ್ತು ಧೀರಜ್ ವಾಧ್ವಾನ್ ಅವರಿಗೆ ಡಿಫಾಲ್ಟ್ ಜಾಮೀನು ಮಂಜೂರು ಮಾಡಿ ಬಾಂಬೆ ಹೈಕೋರ್ಟ್ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ ಮೇಲ್ಮನವಿ ಸಲ್ಲಿಸಿತ್ತು. ಪ್ರಾಸಿಕ್ಯೂಷನ್ 60 ದಿನಗಳ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸದ ಕಾರಣ ಆರೋಪಿಯು, ಕಾನೂನುಬದ್ಧವಾಗಿ ತಂತಾನೆ ಪಡೆಯಬಹುದಾದ ಜಾಮೀನಿಗೆ 'ಡಿಫಾಲ್ಟ್' ಜಾಮೀನು ಎನ್ನಲಾಗುತ್ತದೆ.

ಡಿಫಾಲ್ಟ್ ಜಾಮೀನು ನೀಡುವ ಸಂದರ್ಭದಲ್ಲಿ, ಆರೋಪಿಯನ್ನು ಕಸ್ಟಡಿಗೆ ಒಪ್ಪಿಸಿದ ದಿನವನ್ನು ಪರಿಗಣಿಸಬೇಕೇ ಅಥವಾ ಬಿಡಬೇಕೇ ಎಂಬ ಬಗ್ಗೆ ನ್ಯಾಯಪೀಠ ಪರಿಶೀಲನೆ ನಡೆಸಿತು. ಪ್ರಾಸಿಕ್ಯೂಷನ್ 60 ದಿನಗಳ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸದಿದ್ದಲ್ಲಿ, ಸಿಆರ್‌ಪಿಸಿ ಸೆಕ್ಷನ್ 167ರ ಪ್ರಕಾರ, ಆರೋಪಿಯು ಡಿಫಾಲ್ಟ್ ಜಾಮೀನು ಪಡೆಯಲು ಅರ್ಹನಾಗುತ್ತಾನೆ. ಕೆಲ ಅಪರಾಧಗಳಿಗೆ ಸಂಬಂಧಿಸಿ, ದೋಷಾರೋಪ ಪಟ್ಟಿ ಸಲ್ಲಿಸುವ ಅವಧಿಯನ್ನು 90 ದಿನಗಳವರೆಗೆ ವಿಸ್ತರಿಸಲು ಅವಕಾಶ ಇದೆ. ಈ ಕುರಿತ ವಾದ–ಪ್ರತಿವಾದಗಳನ್ನು ಆಲಿಸಿದ ನ್ಯಾಯಪೀಠ, 'ಡಿಫಾಲ್ಟ್ ಜಾಮೀನು ನೀಡಲು, ಆರೋಪಿಯನ್ನು ಕಸ್ಟಡಿಗೆ ಒಪ್ಪಿಸಿದ ದಿನವನ್ನೂ ಪರಿಗಣಿಸಬೇಕು' ಎಂದು ಹೇಳಿತು.



ಶನಿವಾರ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಹೂಟಗಳ್ಳಿ ಗ್ರಾಮದಲ್ಲಿ ಪಲಾವ್ ಮಹದೇವ್, ಶಿವಕುಮಾರ್, ಭಾರತಿ, ಚಿಕ್ಕಣ್ಣ, ಸುಧಾರಾಣಿ, ಮೋಹನ್ ಕುಮಾರ್, ಕರೀಗೌಡ, ಸೋಮರಾಜ್, ಸಿದ್ದರಾಜು ಅವರುಗಳು ಜೆಡಿಎಸ್ ತೊರೆದು ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಸಂಭಾವ್ಯ ಅಭ್ಯರ್ಥಿ ಮಾವಿನಹಳ್ಳಿ ಸಿದ್ದೇಗೌಡರ ಸಮ್ಮುಖದಲ್ಲಿ ಕಾಂಗ್ರೆಸ್ ಸೇರ್ಪಡೆಗೊಂಡರು. ಕಾಂಗ್ರೆಸ್ ಮುಖಂಡರಾದ ಬೀರಿಹುಂಡಿ ಬಸವಣ್ಣ, ಮಾದೇಗೌಡ, ಹಿನಕಲ್ ಕೆಂಪನಾಯಕ ಇನ್ನಿತರರು ಉಪಸ್ಥಿತರಿದ್ದರು.

ಜಿಎಸ್‌ಟಿ: ರಾಜ್ಯದಲ್ಲಿ ರೂ. 10,360 ಕೋಟಿ ವರಮಾನ ಸಂಗ್ರಹ

ನವದೆಹಲಿ: ಕರ್ನಾಟಕದಲ್ಲಿ ಮಾರ್ಚ್ ತಿಂಗಳಲ್ಲಿ ರೂ. 10, 360 ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ. ಕಳೆದ ವರ್ಷ ಮಾರ್ಚ್‌ನಲ್ಲಿ ರೂ. 8,750 ಕೋಟಿ ಸಂಗ್ರಹವಾಗಿತ್ತು. ಈ ವರ್ಷದ ಜಿಎಸ್‌ಟಿ ಸಂಗ್ರಹ ಪ್ರಮಾಣ ಶೇ.18ರಷ್ಟು ಹೆಚ್ಚಳವಾಗಿದೆ. 2022–23ನೇ ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ರೂ. 1,18,320 ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಜಿಎಸ್‌ಟಿ ಸಂಗ್ರಹದಲ್ಲಿ ರಾಜ್ಯವು ಶೇ.30ರಷ್ಟು ಪ್ರಗತಿ ಸಾಧಿಸಿದೆ.

ನೀಟ್, ಸಿಇಟಿ ಪ್ರವೇಶ ಪರೀಕ್ಷೆ ಹಿನ್ನೆಲೆಯಲ್ಲಿ
ವಿದ್ಯಾರ್ಥಿಗಳಿಗೆ ಉಚಿತ ಬಸ್ ಸೌಕರ್ಯ ಕಲ್ಪಿಸಿ

ಎಂಎಲ್‌ಸಿ ಮರಿತಿಬ್ಬೇಗೌಡ ಒತ್ತಾಯ



ಮೈಸೂರು,ಏ.1(ಪಿಎಂ)– ನೀಟ್ ಹಾಗೂ ಸಿಇಟಿ ಪ್ರವೇಶ ಪರೀಕ್ಷೆ ಬರೆಯುವ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ಮೇ 22ರವರೆಗೆ ರಾಜ್ಯ ರಸ್ತೆ ಸಾರಿಗೆ ಮತ್ತು ಬಿಎಂಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸುವಂತೆ ಸಾರಿಗೆ ಇಲಾಖೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಲ್ಲಿ ದಕ್ಷಿಣ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ ಒತ್ತಾಯಿಸಿದ್ದಾರೆ.

ರಾಜ್ಯದಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆ ಬರೆಯುವ ಎಲ್ಲಾ ವಿದ್ಯಾರ್ಥಿಗಳಿಗೂ ಉಚಿತ ಬಸ್ ಪ್ರಯಾಣ ವ್ಯವಸ್ಥೆ ಕಲ್ಪಿಸಿರುವುದು ಶ್ಲಾಘನೀಯ. ದ್ವಿತೀಯ ಪಿಯುಸಿ ಪರೀಕ್ಷೆಯು ಮಾ.29ರಂದು ಮುಕ್ತಾಯಗೊಂಡಿದೆ. ಮೇ 7ರಂದು ವೈದ್ಯಕೀಯ ಮತ್ತು ದಂತ ವೈದ್ಯಕೀಯ ಪ್ರವೇಶಾತಿ ಸಂಬಂಧ ನೀಟ್ ಪರೀಕ್ಷೆ ಹಾಗೂ ಮೇ 21ರಂದು ಮತ್ತು ಮೇ 22ರಂದು ಇಂಜಿನಿಯರಿಂಗ್ ಮತ್ತು ಪ್ಯಾರಾ ಮೆಡಿಕಲ್ ಕೋರ್ಸ್‌ಗೆ ಸಿಇಟಿ ಪ್ರವೇಶ ಪರೀಕ್ಷೆ ನಿಗದಿಗೊಳಿಸಲಾಗಿದೆ.

ಪರಿಶಿಷ್ಟ ಜಾತಿ, ವರ್ಗಗಳು ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗಗಳ ಬಡ ವಿದ್ಯಾರ್ಥಿಗಳಿಗೆ ತಾಲೂಕು ಮಟ್ಟದಲ್ಲಿ ಆಯ್ದ ಕೆಲವು ಸರ್ಕಾರಿ ಪಿಯು ಕಾಲೇಜುಗಳಲ್ಲಿ ನೀಟ್, ಸಿಇಟಿ ಪ್ರವೇಶ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳಿಗೆ ಮೇ 20ರವರೆಗೆ ವಿಶೇಷ ಬೋಧನೆ ಮಾಡುವಂತೆ ಪದವಿಪೂರ್ವ ಶಿಕ್ಷಣ ಮಂಡಳಿ ನಿರ್ದೇಶನ ನೀಡಿದೆ. ಕೆಲವು ಖಾಸಗಿ ಪಿಯು ಕಾಲೇಜುಗಳಲ್ಲಿಯೂ ಸಹ ವಿಶೇಷ ಬೋಧನಾ ತರಗತಿಗಳನ್ನು ನಡೆಸಲಾಗುತ್ತಿದೆ. ಆಯ್ದ ಕಾಲೇಜುಗಳಲ್ಲಿ ಬೋಧನೆಗೆ ಅವಕಾಶ ಕಲ್ಪಿಸಿರುವುದರಿಂದ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮೇ 22ರವರೆಗೆ ರಾಜ್ಯ ರಸ್ತೆ ಸಾರಿಗೆ ಹಾಗೂ ಬಿಎಂಟಿಸಿ ಬಸ್‌ಗಳಲ್ಲಿ ಉಚಿತ ಪ್ರಯಾಣಕ್ಕೆ ಅವಕಾಶ ಕಲ್ಪಿಸಲು ಪ್ರಕಟಣೆಯಲ್ಲಿ ಮರಿತಿಬ್ಬೇಗೌಡರು ಆಗ್ರಹಿಸಿದ್ದಾರೆ.

'ಮಿಡಲ್ ಕ್ಲಾಸ್ ಸಂಸಾರ' ನಾಟಕ ಪ್ರದರ್ಶನ

ಮೈಸೂರು, ಏ. 1– ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ವೀರು ಥಿಯೇಟರ್ ಟ್ರಸ್ಟ್ ವತಿಯಿಂದ ಆಯೋಜಿಸಿರುವ ಮಹಾಜನ ಪ್ರಥಮ ದರ್ಜೆ ಕಾಲೇಜು ಸಾರಂತ (ಸಾಂಸ್ಕೃತಿಕ ರಂಗ ತಂಡ) ತಂಡದ ಕಲಾವಿದರಿಂದ 'ಮಿಡಲ್‌ಕ್ಲಾಸ್ ಸಂಸಾರ' ನಾಟಕ ಪ್ರದರ್ಶನವಿದೆ. ನಿರ್ದೇಶನ ಪಿ. ಶ್ರೇಯಸ್ ಅವರದಾಗಿದ್ದು, ಬೆಳಕಿನ ವಿನ್ಯಾಸ ಜೀವನ್ ಹೆಗ್ಗೋಡು ಅವರದಾಗಿದೆ.

ನಿವೃತ್ತ ಕ್ಷೇತ್ರ ಶಿಕ್ಷಣಾಧಿಕಾರಿ ರಾಮಾರಾಧ್ಯರಿಗೆ ಬೀಳ್ಕೊಡುಗೆ



ಮೈಸೂರು, ಏ. 1– ಮೈಸೂರು ನಗರ ದಕ್ಷಿಣ ವಲಯದಲ್ಲಿ ಕಳೆದ ಮೂರು ವರ್ಷಗಳಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳಾಗಿ ಸೇವೆಯನ್ನು ಸಲ್ಲಿಸಿ ನಿವೃತ್ತರಾದ ಆರ್. ರಾಮಾರಾಧ್ಯ ಅವರನ್ನು ಕರ್ನಾಟಕ ರಾಜ್ಯ ಪ್ರೌಢಶಾಲಾ ಶಿಕ್ಷಕರ ಸಂಘ, ದಕ್ಷಿಣ ವಲಯದ ಮೈಸೂರು ವತಿಯಿಂದ ಸನ್ಮಾನಿಸಿ, ಬೀಳ್ಕೊಡಲಾಯಿತು.

ದಕ್ಷಿಣ ವಲಯ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬರಲು ಅವರದೇ ಆದ ಅನೇಕ ರೀತಿಯ ಕಲಿಕಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಲ್ಲಿ ಶಿಕ್ಷಕರನ್ನು ಪ್ರೋತ್ಸಾಹಿಸಿ ಶಿಕ್ಷಕರಿಗೆ ಎಲ್ಲಾ ವಿಷಯಗಳಲ್ಲಿ ಪುನಶ್ಚೇತನ ತರಬೇತಿಗಳನ್ನು ಕೊಡಿಸಲು ಶ್ರಮಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ನಮ್ಮ ಪ್ರೌಢಶಾಲಾ ಶಿಕ್ಷಕರ ಸಂಘ ಪದಾಧಿಕಾರಿಗಳು ಸಕ್ರಿಯವಾಗಿ ಪಾಲ್ಗೊಂಡಿದ್ದು ಫಲಿತಾಂಶ ಉತ್ತಮವಾಗಿ ಬರಲು ಕಾರಣವಾಯಿತು.

ಸಂಘದ ಅಧ್ಯಕ್ಷ ಎನ್.ನಾಗರಾಜು, ಕಾರ್ಯದರ್ಶಿ ವಿ.ನಾಗಸುಂದರ್, ಪದಾಧಿಕಾರಿಗಳಾದ ಜಯರಾಂ ಭಟ್, ಕೆ.ಎಮ್.ಮಹೇಶ್, ಕೃಷ್ಣ, ನಂಜಪ್ಪಸ್ವಾಮಿ, ಹೆಚ್.ನಾಗೇಶ್, ಚಿಂದೇಗೌಡ, ಕವಿತಾ, ಅಶ್ವಿನಿ ನಾಯಕ್, ಮತ್ತಿತರರು ಹಾಜರಿದ್ದರು.

ಕ್ರಿಕೆಟ್ ಕೋಚಿಂಗ್ ಶಿಬಿರ

ಮೈಸೂರು,ಏ.1–ಮೈಸೂರು ಜಿಮ್ ಖಾನ ವತಿಯಿಂದ 16 ವರ್ಷದೊಳಗಿನ ಬಾಲಕರಿಗಾಗಿ ಕ್ರಿಕೆಟ್ ಕೋಚಿಂಗ್ ಶಿಬಿರವನ್ನು ಕೆಆರ್‌ಎಸ್ ರಸ್ತೆಯಲ್ಲಿರುವ ರೈಲ್ವೆ ಮೈದಾನದಲ್ಲಿ ಆಯೋಜಿಸಲಾಗಿದೆ. ಶಿಬಿರವು ಬೆಳಗ್ಗೆ 8.30ಕ್ಕೆ ಉದ್ಘಾಟನೆಗೊಳ್ಳಲಿದೆ. ಅರ್ಜಿ ನಮೂನೆಗಳು ಕೋಚಿಂಗ್ ಮೈದಾನದಲ್ಲಿ ಬೆಳಗ್ಗೆ 6.30ರಿಂದ 8.30ರವರೆಗೆ ಮತ್ತು ಸಂಜೆ 4ರಿಂದ 6ರವರೆಗೆ ಲಭ್ಯವಿರುತ್ತವೆ. ವಿವರಗಳಿಗೆ ಮೊ. 88922 58582, 7019475181 ಸಂಪರ್ಕಿಸಬಹುದು.

ಬಹಿರಂಗ ಹರಾಜು

ಮೈಸೂರು, ಏ.1– ನಗರ ಪ್ರದೇಶದಲ್ಲಿ ಅಗತ್ಯ ವಸ್ತುಗಳ ಕಾಯ್ದೆ ಅಡಿ ವಶಪಡಿಸಿಕೊಳ್ಳಲಾದ ಪಡಿತರ ಧಾನ್ಯವನ್ನು ಏ.10ರಂದು ಬೆಳಿಗ್ಗೆ 11.00 ಮೈಸೂರಿನ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಉತ್ತರ ಗೋದಾಮಿನಲ್ಲಿ ಬಹಿರಂಗ ಹರಾಜು ಮೂಲಕ 13 ಚೀಲಗಳ 6.3 ಕ್ವಿಂಟಾಲ್ ಅಕ್ಕಿಯನ್ನು ವಿಲೇವಾರಿ ಮಾಡಲಾಗುವುದು. ಸದರಿ ಹರಾಜಿನಲ್ಲಿ ಬಿಡ್‌ದಾರರು ಭಾಗವಹಿಸಲು ತಿಳಿಸಲಾಗಿದ್ದು, ದಾಸ್ತಾನನ್ನು ನೋಡಲಿಚ್ಛಿಸುವವರು ಕಚೇರಿ ಕೆಲಸದ ವೇಳೆಯಲ್ಲಿ ಪರಿಶೀಲಿಸಬಹುದು ಎಂದು ಅನೌಪಚಾರಿಕ ಪಡಿತರ ಪ್ರದೇಶದ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ರೆಡೈ ಮೈಸೂರು ವಿಭಾಗದ ನೂತನ ಪದಾಧಿಕಾರಿಗಳ ಪದಗ್ರಹಣ



ಮೈಸೂರು, ಏ.1(ಜಿಎ)–ಮೈಸೂರಿನ ವಿಶ್ವೇಶ್ವರನಗರದಲ್ಲಿರುವ ಎಂಬಿಸಿಟಿ ಸಭಾಂಗಣದಲ್ಲಿ ಕಾನ್ಫೆಡರೇಷನ್ ಆಫ್ ರಿಯಲ್ ಎಸ್ಟೇಟ್ ಡೆವಲಪರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ(ಕ್ರೆಡೈ) ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕ್ರೆಡೈ ಮೈಸೂರು ವಿಭಾಗದ ನೂತನ ಪದಾಧಿಕಾರಿಗಳು ಅಧಿಕಾರ ಸ್ವೀಕರಿಸಿದರು.

ಜಿಎಸ್‌ಎಸ್ ಫೌಂಡೇಷನ್‌ನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀಹರಿ ದ್ವಾರಕನಾಥ್ ಅವರು ಕ್ರೆಡೈ ಮೈಸೂರು ವಿಭಾಗದ ನೂತನ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದರು. ಅವರೊಂದಿಗೆ ನೂತನ ಪದಾಧಿಕಾರಿಗಳು ಮತ್ತು ಕಾರ್ಯಕಾರಿ ಸಮಿತಿ ಸದಸ್ಯರು ಅಧಿಕಾರ ವಹಿಸಿಕೊಂಡರು.

ನಂತರ ಮಾತನಾಡಿದ ಶ್ರೀಹರಿ ಅವರು, ಕ್ರೆಡೈ ಮೈಸೂರು ವಿಭಾಗಕ್ಕೆ ನೂತನ ತಂಡ ಕಾರ್ಯನಿರ್ವಹಿಸಲಿದ್ದು, ಎಲ್ಲಾ ಸದಸ್ಯರ ಸಹಕಾರ ಬೇಕಿದೆ. ನೂತನ ತಂಡದಲ್ಲಿ ಬದ್ಧತೆಯಿಂದ ಕಾರ್ಯ ನಿರ್ವಹಿಸುವ ಪದಾಧಿಕಾರಿಗಳ ತಂಡವೇ ಇದ್ದು, ನಿರೀಕ್ಷೆಗೂ ಮೀರಿ ಉತ್ತಮವಾಗಿ ಕಾರ್ಯನಿರ್ವಹಿಸಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕ್ರೆಡೈನ ರಾಷ್ಟ್ರೀಯ ಉಪಾಧ್ಯಕ್ಷ ಶ್ರೀಧರನ್ ಸ್ವಾಮಿನಾಥನ್ ಮತ್ತು ರಾಜ್ಯದ ಅಧ್ಯಕ್ಷ ಚೈತನ್ಯ ಕುಲಕರ್ಣಿ ಅವರು ಅಧಿಕಾರದ ಬ್ಯಾಡ್ಜ್ ನೀಡುವ ಮೂಲಕ ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಇಂಡಿಯಾ ಲೀಡರ್‌ನ ಅಧ್ಯಕ್ಷ ಡಾ.ಎನ್.ಮುತ್ತುಕುಮಾರ್, ಕ್ರೆಡೈ ಕರ್ನಾಟಕ ರಾಜ್ಯದ ಚುನಾಯಿತ ಅಧ್ಯಕ್ಷ ಟಿ.ಎನ್.ಭಾಸ್ಕರ್, ಕ್ರೆಡೈ ಮೈಸೂರು ಶಾಖೆಯ ಮಾಜಿ ಅಧ್ಯಕ್ಷ ಅಧ್ಯಕ್ಷ ಎನ್.ಎನ್. ಮುರಳೀಧರ, ಮಾಜಿ ಕಾರ್ಯದರ್ಶಿ ಎಂ.ಎಸ್. ಹರೀಶ್ ಶೆಣೈ ಇದ್ದರು.

ನೂತನ ಪದಾಧಿಕಾರಿಗಳು: ಡಿ.ಶ್ರೀಹರಿ–ಅಧ್ಯಕ್ಷ, ಉಪಾಧ್ಯಕ್ಷರು– ಎಂ.ಎಸ್. ಹರೀಶ್‌ಶೆಣೈ, ಎಸ್.ಆರ್.ಸ್ವಾಮಿ, ಕಾರ್ಯದರ್ಶಿ–ಎಲ್.ಅರುಣ್ ಪಂಡಿತ್, ಜಂಟಿ ಕಾರ್ಯದರ್ಶಿ– ಕೆ.ಎನ್.ರವಿಶಂಕರ್, ಖಜಾಂಚಿ– ಎಸ್.ಉದಯ್‌ಕುಮಾರ್.

ಕಾರ್ಯಕಾರಿ ಸಮಿತಿ ಸದಸ್ಯರು: ಟಿ.ಎನ್. ಹೇಮಂತ್, ಎಂ.ಸಿ.ಮಲ್ಲಿಕಾರ್ಜುನ್, ಎ.ವಿ.ಶ್ರೀಧರ್, ವಿ.ನಾಗರಾಜ್ ಬೈರಿ, ಡಿ. ಶ್ರೀರಾಮ್, ಬಿ.ಧನಂಜಯ್, ಎಂ.ಎಸ್. ಕುಮಾರಸ್ವಾಮಿ, ಕೆ.ಆರ್.ಪ್ರಭಾಕರ್ ರಾವ್, ಎಸ್.ಪಿ.ಮಧು, ಬಿ.ಆರ್. ಸುಚೇಂದ್ರ, ಎಚ್.ಎಸ್.ಸಂದೀಪ್, ಶಿವಕುಮಾರ್, ಎಂ.ಎಸ್.ನಂಜೇಗೌಡ.

ಮಹಿಳಾ ಘಟಕ: ಅಧ್ಯಕ್ಷರು–ಕಾರ್ತಿ ಶ್ರೀರಾಮ್, ಉಪಾಧ್ಯಕ್ಷರು– ಶ್ರೀವಾಣಿ ಉದಯ್, ಕಾರ್ಯದರ್ಶಿ– ವಿದ್ಯಾ ಅಶ್ವಿನ್, ಜಂಟಿ ಕಾರ್ಯದರ್ಶಿ–ಗೀತ ಶ್ರೀಹರಿ, ಖಜಾಂಚಿ–ದಿವ್ಯಾ ಕುಮಾರಸ್ವಾಮಿ.

ಯುವ ಘಟಕ: ಅಧ್ಯಕ್ಷರು– ಜ್ಞಾನಶ್ಯಾಮ್ ಮುರಳಿ, ಉಪಾಧ್ಯಕ್ಷರು– ನಿಖಿಲ್ ಪಿ.ಕೌಂಡಿನ್ಯ, ಪ್ರಾಜೆಕ್ಟ್ ಕೋಆರ್ಡಿನೇಟರ್–ಎಂ.ಎನ್.ಸಂದೇಶ್.

ಮೈಸೂರು ಮಿತ್ರ ಭಾನುವಾರ 2 ಏಪ್ರಿಲ್ 2023

ಮತದಾರರಲ್ಲಿ ಜಾಗೃತಿ ಮೂಡಿಸಲು ಪ್ರತಿ ಭಾನುವಾರ
ಕೊಡಗು ಮತ್ತು ಚುನಾವಣೆ ವಿಶೇಷ ಕಾರ್ಯಕ್ರಮ

ಏ.9ರಂದು ಕಲಾವಿದರಿಂದ ಕಲಾಕೃತಿಗಳ ರಚನೆ ಮೂಲಕ ಚಾಲನೆ

● ಅಭ್ಯರ್ಥಿಯ ಲೆಕ್ಕಕ್ಕೆ ಬರಲಿದೆ ಸಾಮಾಜಿಕ ಜಾಲತಾಣಗಳ ಪ್ರಚಾರ ● ಪ್ರಚಾರಕ್ಕೂ ಬೇಕು ಅನುಮತಿ ● ಧಾರ್ಮಿಕ ಆಚರಣೆಗಳಿಗೆ ಅಡ್ಡಿಯಿಲ್ಲ ● ಬಂದೂಕುಗಳ ಠೇವಣಿ ಕಡ್ಡಾಯ



ಮಡಿಕೇರಿ,ಏ.1– ವಿಧಾನಸಭಾ ಚುನಾವಣೆಯ ಬಗ್ಗೆ ಮತದಾರರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮುಂಬರುವ ಭಾನುವಾರಗಳಂದು 'ಕೊಡಗು ಮತ್ತು ಚುನಾವಣೆ' ವಿಷಯದ ಮೇಲೆ ದೊಡ್ಡ ಮಟ್ಟದ ವಿಶೇಷ ಕಾರ್ಯಕ್ರಮಗಳನ್ನು ಆಯೋಜಿಸಲು ಜಿಲ್ಲಾಡಳಿತ ಉದ್ದೇಶಿಸಿದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಡಾ.ಬಿ.ಸಿ.ಸತೀಶ ತಿಳಿಸಿದ್ದಾರೆ.

ನಗರದ ಜಿಲ್ಲಾಡಳಿತ ಭವನದ ಸಭಾಂಗಣದಲ್ಲಿ ಏರ್ಪಡಿಸಿದ್ದ 'ಮಾಧ್ಯಮಗಳೊಂದಿಗೆ ಸಂವಾದ'ದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಏ.9ರ ಭಾನುವಾರ ಜಿಲ್ಲೆಯ ಕಲಾವಿದರಿಂದ ಕೊಡಗಿನ ಚುನಾವಣೆಗೆ ಸಂಬಂಧಿಸಿದಂತೆ ಕಲಾಕೃತಿಗಳನ್ನು ರಚಿಸುವ ಮತ್ತು ಅದನ್ನು ಪ್ರದರ್ಶಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಚಿಂತಿಸಲಾಗಿದೆ. ಕಲಾವಿದರ ಕಲಾಕೃತಿಗಳನ್ನು ಗಮನಿಸಿ ಅವುಗಳನ್ನು 'ಡಿಜಿಟಲೈಸ್' ಮಾಡುವ ಮೂಲಕ ಚುನಾವಣಾ ಪ್ರಚಾರಕ್ಕೂ ಬಳಸಿಕೊಳ್ಳುವ ಉದ್ದೇಶವಿರುವುದಾಗಿ ಹೇಳಿದರು.

ಅಭ್ಯರ್ಥಿಯ ಲೆಕ್ಕಕ್ಕೆ ಬರಲಿದೆ: ಸಾಮಾಜಿಕ ಜಾಲತಾಣಗಳಾದ ವ್ಯಾಟ್ಸ್‌ಅಪ್, ಯೂಟ್ಯೂಬ್, ಫೇಸ್ ಬುಕ್, ಟ್ವಿಟ್ಟರ್ ಸೇರಿದಂತೆ ಯಾವುದೇ ಮಾಧ್ಯಮದಲ್ಲಿ ಚುನಾವಣಾ ಘೋಷಿತ ಅಭ್ಯರ್ಥಿಗಳು, ಆಕಾಂಕ್ಷಿಗಳು, ಸ್ವತಂತ್ರ ಅಭ್ಯರ್ಥಿಗಳಾಗಿ ಸ್ಪರ್ಧಿಸುವವರು ಯಾರೇ ಆಗಿರಲಿ ಚುನಾವಣಾ ಪ್ರಚಾರದ ಅಂಶಗಳನ್ನು ಒಳಗೊಂಡ ವಿಚಾರಗಳನ್ನು ಪೋಸ್ಟ್ ಮಾಡುವುದಿದ್ದಲ್ಲಿ, ಇದಕ್ಕೂ ಅನುಮತಿ ಅವಶ್ಯವಾಗಿದೆ. ಚುನಾವಣಾ ನಾಮಪತ್ರ ಸಲ್ಲಿಕೆಯ ಬಳಿಕ ಈ ರೀತಿ ಸಾಮಾಜಿಕ ಜಾಲತಾಣದಲ್ಲಿ ಪ್ರಚಾರ ಮಾಡಿದ ವೆಚ್ಚವೂ ಅಭ್ಯರ್ಥಿಯ ಲೆಕ್ಕಕ್ಕೆ ಒಳಪಡಲಿದೆ ಎಂದು ಜಿಲ್ಲಾಧಿಕಾರಿ ಸ್ಪಷ್ಟಪಡಿಸಿದರು.

ಚುನಾವಣಾ ನೀತಿ ಸಂಹಿತೆಗೆ ಅನುಗುಣವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಚುನಾವಣೆಗೆ ಸಂಬಂಧಿಸಿದ ಯಾವುದೇ ವಿಚಾರಗಳನ್ನು ಹಾಕುವುದಿದ್ದಲ್ಲಿ ಅದಕ್ಕೆ ಅನುಮತಿಯನ್ನು ಕಡ್ಡಾಯವಾಗಿರುತ್ತದೆ. ಈ ರೀತಿ ಅನುಮತಿ ಪಡೆಯದೆ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ ಕೆಲವರಿಗೆ ಈಗಾಗಲೆ ಕಾರಣ ಕೇಳುವ ನೋಟಿಸ್ ನೀಡಿ ಅವರ ಅಭಿಪ್ರಾಯವನ್ನು ಪಡೆಯಲಾಗಿದೆ ಎಂದು ಮಾಹಿತಿ ನೀಡಿದರು.

ಪ್ರಚಾರಕ್ಕೂ ಅನುಮತಿ: ಚುನಾವಣೆ ಹಿನ್ನೆಲೆಯಲ್ಲಿ ತಮ್ಮ ಪಕ್ಷದ ಗುರುತು, ಬಾವುಟಗಳನ್ನು, ಬ್ಯಾನರ್‌ಗಳನ್ನು ಅಳವಡಿಸುವುದಿದ್ದಲ್ಲಿ, ಆಯಾ ಖಾಸಗಿ ಜಾಗ ಮಾಲೀಕರ ಒಪ್ಪಿಗೆಯೊಂದಿಗೆ 'ಡಿಸ್ಟ್ರಿಕ್ಟ್ ಮಿಡಿಯಾ ಸರ್ಟಿಫಿಕೇಶನ್ ಅಂಡ್ ಮಾನಿಟರಿಂಗ್ ಕಮಿಟಿ'ಯಿಂದ ಅನುಮತಿ ಪಡೆಯುವುದು ಅತ್ಯವಶ್ಯವೆಂದು ತಿಳಿಸಿದರು.

ಧಾರ್ಮಿಕ ಆಚರಣೆಗಳಿಗೆ ಅಡ್ಡಿಯಿಲ್ಲ: ವಿವಾಹ ಸಮಾರಂಭ ಮೊದಲಾದ ಖಾಸಗಿ ಕಾರ್ಯಕ್ರಮಗಳ ಆಯೋಜನೆಗೆ ಯಾವುದೇ ನಿರ್ಬಂಧಗಳಿಲ್ಲ. ಸಾರ್ವಜನಿಕವಾಗಿ ಆಚರಿಸುವ ದೇವರ ಉತ್ಸವಗಳಲ್ಲಿ ನಡೆಸುವ ಮೆರವಣಿಗೆ ಮೊದಲಾದವುಗಳಿಗೆ ಅನುಮತಿಯನ್ನು ಪಡೆದುಕೊಳ್ಳಬೇಕು. ಪ್ರಸಾದ ವಿತರಣೆ ಬಿಟ್ಟರೆ ಯಾವುದೇ ಕಾರಣಕ್ಕು ಅನ್ನದಾನಕ್ಕೆ ಅವಕಾಶ ಇರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದರು.

ಮಾಧ್ಯಮಗಳಿಗೆ ನಿರ್ಬಂಧವಿಲ್ಲ: ಮುದ್ರಣ ಮತ್ತು ದೃಶ್ಯ ವಾಹಿನಿಗಳಲ್ಲಿ ಚುನಾವಣೆ ಸಂಬಂಧವಾದ ಸುದ್ದಿಗಳನ್ನು ಪ್ರಕಟಿಸುವುದಕ್ಕೆ ಯಾವುದೇ ನಿರ್ಬಂಧವಿಲ್ಲ. ಅಭ್ಯರ್ಥಿಗಳ ಸಂದರ್ಶನವನ್ನು ಪ್ರಕಟಿಸುವ ಅಥವಾ ದೃಶ್ಯ ವಾಹಿನಿಗಳಲ್ಲಿ ಬಿತ್ತರ ಮಾಡುವ ಸಂದರ್ಭ ಎಲ್ಲಾ ಪಕ್ಷಗಳಿಗೂ ಸಮಾನ ಅವಕಾಶವನ್ನು ನೀಡುವುದು ಅವಶ್ಯವಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದರು.

ಬಂದೂಕುಗಳ ಠೇವಣಿ: ಚುನಾವಣಾ ಅವಧಿಯಲ್ಲಿ ಬಂದೂಕು ಪರವಾನಗಿ ಹೊಂದಿರುವವರು ಸಮೀಪದ ಠಾಣೆಗಳಲ್ಲಿ ಬಂದೂಕುಗಳನ್ನು ಠೇವಣಿ ಇರಿಸಬೇಕಾಗುತ್ತದೆ ಎಂದು ಅವರು ತಿಳಿಸಿದರು. ಜಿಲ್ಲಾ ಪಂಚಾಯಿತಿ ಸಿಇಓ ಡಾ.ಎಸ್.ಆಕಾಶ್ ಮಾತನಾಡಿ, ಚುನಾವಣಾ ಸಂದರ್ಭ ಮಹಿಳೆಯರೇ ನಿರ್ವಹಿಸುವ 'ಸಖಿ ಬೂತ್'ಗಳನ್ನು ತೆರೆಯಲಾಗುತ್ತದೆಂದು ಮಾಹಿತಿ ನೀಡಿದರು.

ಕಟ್ಟುನಿಟ್ಟಿನ ತಪಾಸಣೆ: ಸಭೆಯಲ್ಲಿ ಉಪಸ್ಥಿತರಿದ್ದ ಡಿವೈಎಸ್‌ಪಿ ಸುಂದರ ರಾಜ್ ಅವರು, ಜಿಲ್ಲೆಯ ಅಂತರರಾಜ್ಯ ಮತ್ತು ಅಂತರ ಜಿಲ್ಲಾ ಗಡಿಗಳಲ್ಲಿ ಕಟ್ಟುನಿಟ್ಟಿನ ತಪಾಸಣಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಪೆರುಂಬಾಡಿಯಲ್ಲಿದ್ದ ಚೆಕ್ ಪೋಸ್ಟ್‌ನ್ನು ಮಾಕುಟ್ಟಕ್ಕೆ ಸ್ಥಳಾಂತರಿಸಲಾಗಿದೆ ಎಂದು ಮಾಹಿತಿ ನೀಡಿದರು. ಸಂವಾದದಲ್ಲಿ ಎಡಿಸಿ ಡಾ.ನಂಜುಂಡೇಗೌಡ, ಜಿಲ್ಲಾ ವಾರ್ತಾಧಿಕಾರಿ ಚಿನ್ನಸ್ವಾಮಿ, ವಿವಿಧ ಪತ್ರಿಕೆಗಳು ಹಾಗೂ ಮಾಧ್ಯಮಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

ದಾಖಲೆ ಇಲ್ಲದ 245 ಸೀರೆ ವಶ

ಮಡಿಕೇರಿ,ಏ.1– ಯಾವುದೇ ದಾಖಲೆಗಳನ್ನು ಹೊಂದಿರದ 245 ಸೀರೆಗಳನ್ನು ದಕ್ಷಿಣ ಕೊಡಗಿನ ಗೋಣಿಕೊಪ್ಪಲಿನಲ್ಲಿ ಚುನಾವಣಾ ಕರ್ತವ್ಯನಿರತ ಕೊಡಗು ಜಿಲ್ಲಾ ಪೊಲೀಸರು ವಶಪಡಿಸಿಕೊಂಡಿದ್ದಾರೆ. ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರರಾಜ್ ಅವರು ಈ ಬಗ್ಗೆ ಮಾಹಿತಿ ನೀಡಿದ್ದು, ಚುನಾವಣಾ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಸೂಕ್ತ ದಾಖಲೆಗಳಿಲ್ಲದ ಹಿನ್ನೆಲೆ ವ್ಯಕ್ತಿಯೊಬ್ಬರಿಂದ ಸೀರೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದು ಚುನಾವಣಾ ಹಿನ್ನೆಲೆಗೆ ಸಂಬಂಧಿಸಿದ್ದೆಯೇ ಎನ್ನುವ ಬಗ್ಗೆ ತನಿಖೆ ನಡೆಯುತ್ತಿರುವುದಾಗಿ ತಿಳಿಸಿದ್ದಾರೆ.

ಗ್ರಾಮ ದೇವರ ಉತ್ಸವ ಮುಂದೂಡಿಕೆ

ಗುಡ್ಡೆಹೊಸೂರು, ಏ.1– ಇಲ್ಲಿನ ಬೊಳ್ಳುರು ಗ್ರಾಮದ ಶ್ರೀ ಬಸವೇಶ್ವರ ಮತ್ತು ಶ್ರೀ ಚಾಮುಂಡೇಶ್ವರಿ ದೇವರ ವಾರ್ಷಿಕ ಮಹಾ ಪೂಜೆಯು ಏ.3 ಮತ್ತು 4 ರಂದು ಏರ್ಪಡಿಸಲಾಗಿತ್ತು. ಆದರೆ ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಈ ಪೂಜಾ ಕಾರ್ಯವನ್ನು ಮೇ 13ರ ನಂತರ ನಡೆಸಲು ತೀರ್ಮಾನಿಸಲಾಗಿದೆ. ಎಂದು ದೇವಸ್ಥಾನ ಆಡಳಿತ ಮಂಡಳಿ ತಿಳಿಸಿದೆ.

ಮಾದರಿ ನೀತಿ ಸಂಹಿತೆ ಉಲ್ಲಂಘನೆ ಆರೋಪ
ಶಾಸಕರಾದ ಬೋಪಯ್ಯ, ಅಪ್ಪಚ್ಚು ರಂಜನ್‌ಗೆ ನೋಟೀಸ್


ಕೆ.ಜಿ.ಬೋಪಯ್ಯ


ಅಪ್ಪಚ್ಚು ರಂಜನ್


ಮಡಿಕೇರಿ, ಏ.1– ಸಾಮಾಜಿಕ ಜಾಲತಾಣದಲ್ಲಿ ಪೂರ್ವಾನುಮತಿ ಇಲ್ಲದೆ ಸಂದೇಶ ಕಳುಹಿಸಿರುವ ಹಿನ್ನೆಲೆಯಲ್ಲಿ ಮಾದರಿ ನೀತಿ–ಸಂಹಿತೆ ಉಲ್ಲಂಘನೆಯಾಗಿದೆ ಎಂದು ವಿರಾಜಪೇಟೆ ಶಾಸಕ ಕೆ.ಜಿ. ಬೋಪಯ್ಯ ಮತ್ತು ಮಡಿಕೇರಿ ಶಾಸಕ ಎಂ.ಪಿ.ಅಪ್ಪಚ್ಚು ರಂಜನ್ ಅವರಿಗೆ ಆಯಾ ಕ್ಷೇತ್ರದ ಚುನಾವಣಾಧಿಕಾರಿಗಳು ಕಾರಣ ಕೇಳಿ ನೋಟೀಸ್ ನೀಡಿದ್ದಾರೆ.

ಕೆ.ಜಿ.ಬೋಪಯ್ಯ ಅವರು ಎಸ್‌ಎಸ್‌ಎಲ್‌ಸಿ ಮಕ್ಕಳಿಗೆ ಶುಭಾಶಯ ಕೋರಿದ ರಾಜಕೀಯ ಪ್ರೇರಿತ ಚಿತ್ರವನ್ನು ಯಾವುದೇ ಪೂರ್ವಾನುಮತಿ ಪಡೆಯದೆ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿರುವುದರಿಂದ ಮಾದರಿ ನೀತಿ ಸಂಹಿತೆ ಉಲ್ಲಂಘನೆಯಾಗಿದೆ ಎಂದು ನೋಟೀಸ್ ನೀಡಲಾಗಿದ್ದು, ವಿವರಣೆ ನೀಡುವಂತೆ ಸೂಚಿಸಲಾಗಿದೆ.

ಇದೇ ರೀತಿ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್ ಅವರು ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಯಾವುದೇ ಪೂರ್ವಾನುಮತಿ ಪಡೆಯದೆ ರಾಜಕೀಯ ಪಕ್ಷದ ಚಿಹ್ನೆಯನ್ನು ಬಳಸಿ ಶ್ರೀ ಶಿವಕುಮಾರ ಸ್ವಾಮೀಜಿಗಳ ಜನ್ಮ ಜಯಂತಿಯಂದು ಅವರಿಗೆ 'ನನ್ನ ಶತಕೋಟಿ ನಮನಗಳು' ಎಂದು ಪೋಸ್ಟ್ ಹಾಕಿರುವುದರೊಂದಿಗೆ ಡಾ. ಕೇಶವ ಬಲರಾಮ ಹೆಡ್ಗೆವಾರ್ ಗುರೂಜಿರವರ ಜಯಂತಿಯಂದು ಅವರಿಗೆ 'ನನ್ನ ಗೌರವಪೂರ್ವಕ ಪ್ರಣಾಮಗಳು' ಎಂದು ಶುಭಾಶಯ ಕೋರಿರುವ ಪೋಸ್ಟ್ ಹಾಕಿರುವುದು ಮಾದರಿ ನೀತಿ ಸಂಹಿತೆಯ ಉಲ್ಲಂಘನೆಯಾಗಿದೆ ಎಂದು ತಿಳಿಸಿ ನೋಟಿಸ್ ನೀಡಲಾಗಿದೆ.

ಮತ್ತೊಬ್ಬರಿಗೆ ನೋಟೀಸ್: ಜನರಲ್ ಕೆಎಸ್.ತಿಮ್ಮಯ್ಯ ಅವರ ಜನ್ಮದಿನದ ಸಂದರ್ಭ ಸಾಮಾಜಿಕ ಜಾಲತಾಣದಲ್ಲಿ ಶುಭಕೋರಿದ ಹಿನ್ನೆಲೆ ಶ್ರೀಮಂಗಲದ ನಾಲ್ಕೇರಿ ಗ್ರಾಮದ ಸಚಿನ್ ಚೆರಿಯಪಂಡ ಎಂಬವರಿಗೂ ನೋಟೀಸ್ ನೀಡಲಾಗಿದೆ. ರಾಜಕೀಯ ಪ್ರೇರಿತ ಚಿತ್ರವನ್ನು ಹಂಚಿಕೊಳ್ಳಲಾಗಿದೆ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಕೊಡವ ಕುಟುಂಬಗಳ ಅಪ್ಪಚೆಟ್ಟೋಳಂಡ ಹಾಕಿ ಉತ್ಸವ
ಪಂದ್ಯದಿಂದ ಹೊರಬಿದ್ದ ಚಾಂಪಿಯನ್ ಅಂಜಪರವಂಡ ತಂಡ



ನಾಪೋಕ್ಲು, ಏ.1– ಇಲ್ಲಿನ ಜನರಲ್ ತಿಮ್ಮಯ್ಯ ತಾಲೂಕು ಕ್ರೀಡಾಂಗಣದ ಮೈದಾನದಲ್ಲಿ ಕೊಡವ ಕುಟುಂಬಗಳ ನಡುವಿನ 23ನೇ ವರ್ಷದ ಕೌಟುಂಬಿಕ ಹಾಕಿ ಅಪ್ಪಚೆಟ್ಟೋಳಂಡ ಪಂದ್ಯದಲ್ಲಿ 2008 ಮತ್ತು 2013 ರಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದ್ದ ಅಂಜಪರವಂಡ ತಂಡ ಪಂದ್ಯದಿಂದ ಹೊರಬಿದ್ದಿದೆ.

ವಿವರ : ಚೊಟ್ಟೆಯಣಮಾಡ ತಂಡ ಪಾಲೆಯಡ ತಂಡದ ವಿರುದ್ಧ 4–0 ಗೋಲುಗಳ ಅಂತರದಲ್ಲಿ ಗೆಲುವು ದಕ್ಕಿಸಿಕೊಂಡಿತು, ಕೊಲ್ಲೀರ ತಂಡವು ಅಂಜಪರವಂಡ ವಿರುದ್ಧ 4–3 ಗೋಲುಗಳ ಅಂತರದಲ್ಲಿ ಗೆಲುವು ಪಡೆದುಕೊಂಡಿತು. ಕಂಬೀರಂಡ ಬೊಳಕಾಂಡ ವಿರುದ್ಧ 4–0 ದಾಖಲಿಸಿ ಗೆಲುವಿನ ನಗೆ ಬೀರಿದವು.

ಕುಪ್ಪಂಡ ಚೀರುಮಂಡಂಡ ತಂಡದ ವಿರುದ್ಧ 5–2 ಗೋಲುಗಳಿಂದ ಜಯಭೇರಿ ಬಾರಿಸಿತು. ಕಲ್ಯಾಟಂಡ ಕೋಣಿಯಂಡ 4–3 ವಿರುದ್ಧ ಗೋಲುಗಳಲ್ಲಿ, ಕರಿನೆರವಂಡ 2–1 ಕೊಕ್ಕಂಡ ಗೆಲುವು ಪಡೆದುಕೊಂಡಿತ್ತು.

ಕೂತಂಡ ಮತ್ರಂಡ ತಂಡವನ್ನು 3–0 ಗೋಲುಗಳ ಅಂತರದಲ್ಲಿ ಸೋಲಿಸಿತು. ಬೊಪ್ಪೇರಿಯಂಡ ಕುಂಡ್ಯೋಳಂಡ 2–0 ತಂಡವನ್ನು ಗೋಲುಗಳಲ್ಲಿ ಜಯಿಸಿತು. ಪೆಮ್ಮಂಡ ಚಂದೂರ ವಿರುದ್ಧ 5–4 ಅಂತರದಲ್ಲಿ ಗೆಲುವು ಸಾಧಿಸಿತು. ತೀತಿಮಾಡ ವಾಟೇರಿರ ವಿರುದ್ಧ 3–2 ಗೋಲು ಹೊಡೆದು ಗೆಲುವಿನ ನಗೆ ಬೀರಿತು. ಮಾಚಿಮಂಡ ತಂಡ ಮಣವಟ್ಟೀರ 3–2 ಗೋಲುಗಳನ್ನು ಹೊಡೆಯುದರ ಮೂಲಕ ಗೆಲುವು ಪಡೆದುಕೊಂಡಿತ್ತು. ಪುಟ್ಟಿಚಂಡ ಬೊಟ್ಟೋಳಂಡ ವಿರುದ್ಧ 1–0 ಗೋಲು, ನಾಳಿಯಂಡ ಚಪ್ಪಂಡ ವಿರುದ್ಧ 2–0 ಗೋಲುಗಳ ಮೂಲಕ ಗೆಲುವು ಪಡೆಯಿತು.

ಪಳಂಗಂಡ ತಂಡವು ಚೋಕಿರ ವಿರುದ್ಧ 5–0 ಗೋಲುಗಳಿಂದ, ಬೊಳ್ಳಂಡ ಅಜ್ಜಮಾಡ ತಂಡದ ವಿರುದ್ಧ 3–1 ಗೋಲು ಹೊಡೆದು ಗೆಲುವು ಸಾಧಿಸಿತು. ಮುಕ್ಕಾಟೀರ(ಕಡಗದಾಳು) ತಂಡ ಮಂಡೇಡ ವಿರುದ್ಧ 5–1 ಗೋಲುಗಳಲ್ಲಿ ಜಯಿಸಿತು. ಮುಕ್ಕಾಟೀರ(ಹರಿಹರ) ನಾಪಂಡ ತಂಡದ ವಿರುದ್ಧ 2–1 ಅಂತರದಲ್ಲಿ ಗೆಲುವು ಪಡೆದುಕೊಂಡು ಮುಂದಿನ ಹಂತ ಪ್ರವೇಶಿಸಿತು.

ವಿರಾಜಪೇಟೆ ಗಡಿ ಭಾಗದಲ್ಲಿ ಕಟ್ಟುನಿಟ್ಟಿನ ತಪಾಸಣೆ

24 ಗಂಟೆ ಕಾರ್ಯನಿರ್ವಹಿಸುವ ಕಂಟ್ರೋಲ್ ರೂಂ ಸ್ಥಾಪನೆ




ವಿರಾಜಪೇಟೆ, ಏ.1– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ವಿರಾಜಪೇಟೆ ತಾಲೂಕು ಗಡಿಭಾಗವಾದ ಮಾಕುಟ್ಟ ಚೆಕ್‌ಪೋಸ್ಟ್‌ಗಳಲ್ಲಿ ಪೊಲೀಸರು ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಕಟ್ಟುನಿಟ್ಟಿನ ತಪಾಸಣೆ ನಡೆಸುತ್ತಿದ್ದಾರೆ. ಕರ್ನಾಟಕ ಮತ್ತು ಕೇರಳವನ್ನು ಸಂಪರ್ಕಿಸುವ ಎಲ್ಲಾ ಒಳ ರಸ್ತೆಗಳಲ್ಲಿ ಪೊಲೀಸ್ ಬೀಟ್ ಮಾಡಲಾಗುತ್ತಿದ್ದು, ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸ್ ಇಲಾಖೆ ಜಂಟಿಯಾಗಿ ಚೆಕ್ ಪೋಸ್ಟ್‌ನಲ್ಲಿ ಜಿಲ್ಲೆಗೆ ಆಗಮಿಸುವ ಮತ್ತು ಹೊರಹೋಗುವ ವಾಹನ ತಪಾಸಣೆ ಮಾಡುತ್ತಿದ್ದಾರೆ.

ಇದಲ್ಲದೆ ಅಕ್ರಮ ಹಣ ಸಾಗಣೆ, ವಸ್ತು ಸಾಗಾಟ ಸೇರಿದಂತೆ ಎಲ್ಲಾ ಬಗೆಯ ಅಕ್ರಮಗಳನ್ನು ತಡೆಯಲು ಕ್ರಮ ಕೈಗೊಳ್ಳಲಾಗಿದೆ. ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಂಚಾರಿ ದಳ ರಚಿಸಲಾಗಿದ್ದು, ಪ್ರತೀ ತಂಡದಲ್ಲಿ ಪೊಲೀಸರು ಮತ್ತು ಇತರ ಅಧಿಕಾರಿಗಳಿದ್ದಾರೆ.

ತಾಲೂಕು ಕೇಂದ್ರಗಳಲ್ಲಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ 24 ಗಂಟೆ ಕೆಲಸ ಮಾಡುವ ಕಂಟ್ರೋಲ್ ರೂಂ ತೆರೆಯಲಾಗಿದೆ. ಸಾರ್ವಜನಿಕರು, ರಾಜಕೀಯ ಪಕ್ಷಗಳು ಇದರ ಮೂಲಕ ಮಾಹಿತಿ ಪಡೆಯುವ ಇಲ್ಲವೇ ಮಾಹಿತಿ ನೀಡುವ ಕೆಲಸ ಮಾಡಬಹುದು. ಮಾದರಿ ನೀತಿ ಸಂಹಿತೆ ಜಾರಿಯಾಗಿರುವುದರಿಂದ ಸಾರ್ವಜನಿಕರು ಯಾವುದೇ ಉದ್ದೇಶಕ್ಕೆ ಹಣ ಕೊಂಡೊಯ್ಯುವಾಗ ಎಚ್ಚರವಹಿಸಬೇಕಾಗಿದೆ. ಆದಾಯ ತೆರಿಗೆ ಇಲಾಖೆಯ ನಿಯಮಗಳ ಪ್ರಕಾರ ಯಾವುದೇ ಹಣವನ್ನು ಒಯ್ಯುವಾಗ ಅದರ ಮೂಲವನ್ನು ತಿಳಿಸುವ ದಾಖಲೆ ಅಗತ್ಯ, ಮದುವೆ, ಚಿನ್ನಾಭರಣ ಖರೀದಿ, ಉಡುಪು ಖರೀದಿ ಸೇರಿದಂತೆ ಯಾವುದೇ ಉದ್ದೇಶಕ್ಕೂ ಹಣ ಕೊಂಡೊಯ್ಯುವ ಸಂದರ್ಭ ನಿಯಮ ಪಾಲಿಸಬೇಕಾಗಿದೆ.

ಕಾಂಗ್ರೆಸ್‌ಗೆ ಅಧಿಕಾರ ಖಚಿತ

ಕಾರ್ಯಕರ್ತರ ಸಭೆಯಲ್ಲಿ ಅಭ್ಯರ್ಥಿ ಗಣೇಶ್ ಪ್ರಸಾದ್ ಭವಿಷ್ಯ



ಗುಂಡ್ಲುಪೇಟೆ, ಏ.1– ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತವಾಗಿದ್ದು ಅಭಿವೃದ್ಧಿಗಾಗಿ ಕ್ಷೇತ್ರದ ಜನತೆ ನನ್ನನ್ನು ಆಯ್ಕೆ ಮಾಡಿ ಎಂದು ಕಾಂಗ್ರೆಸ್ ಅಭ್ಯರ್ಥಿ ಹೆಚ್.ಎಂ. ಗಣೇಶ್ ಪ್ರಸಾದ್ ಮನವಿ ಮಾಡಿದ್ದಾರೆ.


ಪಟ್ಟಣದ ಖಾಸಗಿ ಕಲ್ಯಾಣ ಮಂಟಪದಲ್ಲಿ ಶನಿವಾರ ಆಯೋಜಿಸಿದ್ದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು. ಎಲ್ಲಾ ಸಮುದಾಯದವರೂ ಕಾಂಗ್ರೆಸ್‌ಗೆ ಬೆಂಬಲ ನೀಡುತ್ತಿದ್ದಾರೆ. ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಏನು ಗ್ಯಾರಂಟಿ ಕೊಟ್ಟಿದೆ ಅದನ್ನ ಮಾತಿಗೆ ತಪ್ಪದೆ ನಡೆದುಕೊಳ್ಳುತ್ತದೆ. ಸಿದ್ದರಾಮಯ್ಯ ಈ ಬಾರಿಯೂ ಗೆಲ್ಲುವುದರ ಜತೆಗೆ ಅವರೇ ಮತ್ತೊಮ್ಮೆ ಮುಖ್ಯಮಂತ್ರಿಯಾಗಲಿದ್ದಾರೆ. ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ನನ್ನನ್ನು ಆಯ್ಕೆ ಮಾಡಿ ಎಂದು ಕೋರಿದರು.

ಕ್ಷೇತ್ರದಲ್ಲಿ ಹೇಳಿಕೊಳ್ಳುವಷ್ಟು ಅಭಿವೃದ್ಧಿ ಹೊಂದಿಲ್ಲ. ನಮ್ಮ ತಂದೆ ಮಾಜಿ ಸಚಿವ ಮಹದೇವಪ್ರಸಾದ್ ಮತ್ತು ತಾಯಿ ಮಾಜಿ ಸಚಿವೆ ಗೀತಾ ಮಹದೇವಪ್ರಸಾದ್ ಅವರ ಕಾಲದಲ್ಲೇ ಅತಿ ಹೆಚ್ಚು ಅಭಿವೃದ್ಧಿ ಆಗಿರುವುದು. ಹಲವಾರು ಅಭಿವೃದ್ಧಿ ಕಾರ್ಯಗಳನ್ನು ಅವರು ಸರ್ಕಾರದಿಂದ ಅನುದಾನ ತಂದು ಮಾಡಿಸಿ ಕಾರ್ಯಾರಂಭ ಮಾಡಿದ್ದರು. ಅದು ಈಗಲೂ ಜನತೆಗೆ ಗೊತ್ತಿದೆ. ಬಿಜೆಪಿ ಕೇವಲ ಸುಳ್ಳು ಹೇಳಿಕೊಂಡು ಅಭಿವೃದ್ಧಿ ಮಾಡಿರುವಂತೆ ಬಿಂಬಿಸುತ್ತಿದೆ ಎಂದು ಟೀಕಿಸಿದರು. ಚಾಮುಲ್ ನಿರ್ದೇಶಕ ಹೆಚ್.ಎಸ್. ನಂಜುಂಡಪ್ರಸಾದ್ ಮಾತನಾಡಿ, ಶಾಸಕ ಸಿ.ಎಸ್.ನಿರಂಜನಕುಮಾರ್ ಕ್ಷೇತ್ರದ ಅಭಿವೃದ್ಧಿಗಿಂತ ತಮ್ಮ ಅಭಿವೃದ್ಧಿಯನ್ನು ಹೆಚ್ಚು ಮಾಡಿ ಕೊಂಡಿದ್ದಾರೆ. ಅವರು ಅಭಿವೃದ್ಧಿ ಶಿಖರವನ್ನು ಮುಟ್ಟಿದ್ದಾರೆ. ಅವರಿಗೆ ಕ್ಷೇತ್ರದ ಜನತೆಯ ಮತ್ತು ಅಭಿವೃದ್ಧಿಯ ಚಿಂತೆ ಇಲ್ಲ ಎಂದು ವ್ಯಂಗ್ಯವಾಡಿದರು.

ಇದೇ ಸಂದರ್ಭದಲ್ಲಿ ವಿವಿಧ ಗ್ರಾಮದ ಮಡಿವಾಳ ಸಮುದಾಯದ ಹಲವಾರು ಮಂದಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರ್ಪಡೆಗೊಂಡರು. ಕಾರ್ಯಕ್ರಮದಲ್ಲಿ ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್.ನಂಜಪ್ಪ, ಎಪಿಎಂಸಿ ಸದಸ್ಯ ಆರ್.ಎಸ್.ನಾಗರಾಜು, ತಾಪಂ ಮಾಜಿ ಅಧ್ಯಕ್ಷ ಎಸ್.ಎಸ್.ಮಧುಶಂಕರ್, ಜಿಪಂ ಮಾಜಿ ಸದಸ್ಯ ಕಬ್ಬಳ್ಳಿ ಮಹೇಶ್, ಮಂಚಳ್ಳಿ ಲೋಕೇಶ್ ಎಚ್.ಎನ್. ಬಸವರಾಜು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿಎಂ ಮುನಿರಾಜು, ರಾಜಶೇಖರ್ ಸೇರಿದಂತೆ ಹಲವರು ಇದ್ದರು.

ಚಾ.ನಗರ ಚಿತ್ರಣ ಬದಲಾವಣೆಗಾಗಿ ನನ್ನನ್ನು ಬೆಂಬಲಿಸಿ

ಮಂಗಲ ಗ್ರಾಪಂ ವ್ಯಾಪ್ತಿಯ ಗ್ರಾಮಗಳಿಗೆ ಭೇಟಿ ನೀಡಿ ವಾಟಾಳ್ ಮನವಿ



ಚಾಮರಾಜನಗರ, ಏ.1– ಚಾಮರಾಜನಗರ ವಿಧಾನಸಭಾ ಕ್ಷೇತ್ರದ ಮಂಗಲ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳಿಗೆ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಭೇಟಿ ನೀಡಿ ಈ ಬಾರಿ ಚುನಾವಣೆಯಲ್ಲಿ ನನ್ನನ್ನು ಬೆಂಬಲಿಸುವಂತೆ ಜನತೆಯಲ್ಲಿ ಮನವಿ ಮಾಡಿದರು.

ಮಂಗಲ, ಮಂಗಲದ ಹೊಸೂರು, ಕರಡಿಮೋಳೆ ಇನ್ನಿತರ ಗ್ರಾಮಗಳಲ್ಲಿ ಭೇಟಿ ನೀಡಿ ಜನರೊಂದಿಗೆ ಮಾತನಾಡಿದ ವಾಟಾಳ್ ನಾಗರಾಜ್, ಚುನಾವಣೆ ಎಂದರೆ ಜಾತಿ, ಹಣವಾಗಿದ್ದು, ಇದು ಪ್ರಜಾಪ್ರಭುತ್ವಕ್ಕೆ ವಿರೋಧವಾಗಿದೆ. ಯಾವುದೇ ಕಾರಣಕ್ಕೂ ಜಾತಿ, ಹಣ ನಡೆಯಬಾರದು. ಇದು ಕಾನೂನು ಬದ್ಧ ಚುನಾವಣೆಯಾಗಿದೆ. ಇಲ್ಲಿ ಜಾತಿ ತರುವುದು, ಹಣ ತೆಗೆದುಕೊಳ್ಳುವುದಾದರೆ ಚುನಾವಣೆಗೆ ಅಪಚಾರ ಮಾಡಿದಂತಾಗುತ್ತದೆ. ಪವಿತ್ರವಾದಂತಹ ಚುನಾವಣೆಗೆ ಚಾಮರಾಜನಗರದ ಉದ್ದಗಲಕ್ಕೂ ಯಾರು ಅಪಚಾರ ಮಾಡಬಾರದು ಎಂದರು.

ಕಾವೇರಿ ನೀರು ಕುಡಿಯುತ್ತಿದ್ದೀರಿ. ಆ ಋಣಕ್ಕಾದರೂ ವಾಟಾಳ್‌ಗೆ ಓಟು ಹಾಕಬೇಕು. ನಾನು ಶಾಸಕನಾಗಿದ್ದ ಸಂದರ್ಭದಲ್ಲಿ ಕ್ಷೇತ್ರಕ್ಕೆ ಬಹಳಷ್ಟು ಕೆಲಸ ಮಾಡಿಕೊಟ್ಟಿದ್ದೇನೆ. ಚಾಮರಾಜನಗರ ಜಿಲ್ಲೆ ಮಾಡಿದ್ದು, ಜೋಡಿರಸ್ತೆ, ಕ್ರೀಡಾಂಗಣ ಮಾಡಿದ್ದು ನಾನು. ಪಟ್ಟಣ, ಗ್ರಾಮಾಂತರ ಪ್ರದೇಶಕ್ಕೆ ಕಾವೇರಿ ಕುಡಿಯುವ ನೀರು ಕೊಟ್ಟ ಪರಿಣಾಮದಿಂದ ತಂಪಾಗಿದೆ. ಇಲ್ಲದಿದ್ದರೆ ತುಂಬಾ ಕಷ್ಟ ಅನುಭವಿಸಬೇಕಾಗುತ್ತಿತ್ತು. ಕಾವೇರಿ ನೀರನ್ನು ಜಾತಿ ನೋಡಿ, ಹಣ ನೋಡಿ ಕೊಡಲಿಲ್ಲ. ಹೋರಾಟ ಮಾಡಿ ಕಾವೇರಿ ನೀರು ತಂದು ಕೊಟ್ಟಿದ್ದೇನೆ. ಇದನ್ನು ಅರ್ಥ ಮಾಡಿಕೊಂಡಾದರೂ ಚಾಮರಾಜನಗರ ಜನತೆ ನನ್ನನ್ನು ಬೆಂಬಲಿಸಬೇಕು ಎಂದರು.

ಚಾಮರಾಜನಗರಕ್ಕೆ ಒಂದು ಹೊಸ ಶಕ್ತಿ ಕೊಡಬೇಕಿದೆ: ನಾನು ಈ ಬಾರಿ ಚುನಾವಣೆಯಲ್ಲಿ ಗೆದ್ದರೆ 50 ಸಾವಿರ ಮನೆಗಳನ್ನು ಮಂಜೂರು ಮಾಡಿಸುತ್ತೇನೆ. 2ನೇ ಹಂತದ ಕಾವೇರಿ ಕುಡಿಯುವ ನೀರಿನ ಯೋಜನೆ ಜಾರಿಗೆ ಹೋರಾಟ ಮಾಡ್ತೀನಿ. ಚಾಮರಾಜನಗರ ಚಿತ್ರಣವನ್ನೇ ಬದಲಾವಣೆ ಮಾಡುತ್ತೇನೆ. ಚಾಮರಾಜನಗರವನ್ನು ಯಾರು ಬೇಕಾದರೂ ಕೊಂಡುಕೊಂಡು ಹೋಗಬಹುದು ಎಂದು ತಿಳಿದುಕೊಂಡಿದ್ದಾರೆ. ಇದು ಅಸಾಧ್ಯ. ಚಾಮರಾಜನಗರ ವ್ಯಾಪಾರ ವಸ್ತುವಲ್ಲ. ಇಲ್ಲಿಯ ಜನರು ಆದರ್ಶ. ಇಲ್ಲಿ ಜನತೆ ಪ್ರಾಮಾಣಿಕರು, ಇಲ್ಲಿಯ ಜನರು ನನಗೆ ವೋಟು ಹಾಕುವುದರಿಂದ ರಾಜ್ಯಕ್ಕೆ, ಕನ್ನಡಿಗರಿಗೆ, ಚಾಮರಾಜನಗರಕ್ಕೆ ಅನುಕೂಲವಾಗುತ್ತದೆ ಆದ್ದರಿಂದ ಚಾಮರಾಜನಗರಕ್ಕೆ ಒಂದು ಹೊಸಶಕ್ತಿ ಕೊಡಬೇಕಿದೆ ಎಂದರು.

ಈ ಸಂದರ್ಭದಲ್ಲಿ ವರದನಾಯಕ, ಪಾರ್ಥಸಾರಥಿ, ಶಿವಲಿಂಗಮೂರ್ತಿ, ಗೋಪಾಲನಾಯಕ, ಕುಮಾರ್, ಮಹೇಶ್, ಶಿವಣ್ಣ, ಸಂಜು ಇತರರು ಭಾಗವಹಿಸಿದ್ದರು.

ಏ.4, ಮಾಂಸ ಮಾರಾಟ ನಿಷೇಧ

ಚಾಮರಾಜನಗರ, ಏ.1– ಚಾಮರಾಜನಗರ ನಗರಸಭಾ ವ್ಯಾಪ್ತಿಯಲ್ಲಿ ಏಪ್ರಿಲ್ 4ರಂದು ಶ್ರೀ ಮಹಾವೀರ ಜಯಂತಿ ಪ್ರಯುಕ್ತ ಮಾಂಸ ಮಾರಾಟ ಹಾಗೂ ಪ್ರಾಣಿ ವಧೆಯನ್ನು ನಿಷೇಧಿಸಲಾಗಿದೆ.

ಅಂದು ಮಾಂಸ ಮಾರಾಟ, ಪ್ರಾಣಿ ವಧೆ ಮಾಡುವುದು ಕಂಡು ಬಂದಲ್ಲಿ ಸಂಬಂಧಪಟ್ಟವರ ಉದ್ದಿಮೆ ಪರವಾನಗಿಯನ್ನು ರದ್ದುಪಡಿಸಿ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಮನ ಆದರ್ಶಗಳು ಎಲ್ಲಾ ಕಾಲಕ್ಕೂ ಅನ್ವಯ: ನ್ಯಾಯಾಧೀಶ ಶ್ರೀಧರ್



ಚಾಮರಾಜನಗರ, ಏ.1– ಮರ್ಯಾದಾ ಪುರುಷೋತ್ತಮ ಶ್ರೀರಾಮನ ಆದರ್ಶಗಳು ಎಲ್ಲಾ ಕಾಲಕ್ಕೂ ಅನ್ವಯವಾಗುವಂತಹವು, ಆದ್ದರಿಂದಲೇ ರಾಮರಾಜ್ಯದ ಪರಿಕಲ್ಪನೆಯನ್ನು ಪ್ರತಿಯೊಬ್ಬರು ಹೇಳುತ್ತಾರೆ ಎಂದು ಜಿಲ್ಲಾ ಸಿವಿಲ್ ನ್ಯಾಯಾಧೀಶ ಶ್ರೀಧರ್ ಹೇಳಿದರು. ನಗರದ ಮಾರಿಗುಡಿ ಬಳಿ ಇರುವ ಕಾರ್ಯಸಿದ್ಧಿ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಶ್ರೀರಾಮನವಮಿಗೆ ಚಾಲನೆ ನೀಡಿ ಮಾತನಾಡಿದ ಅವರು, ಶ್ರೀರಾಮನ ಕೆಲ ಆದರ್ಶ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಸುಖೀ ಸಮಾಜವನ್ನು ಕಾಣಬಹುದು ಎಂದರು.

ತಂದೆ ತಾಯಿಗಳಿಗೆ ತಕ್ಕ ಮಗನಾಗಿ, ಆದರ್ಶ ಪತಿಯಾಗಿ, ಸಮಾಜ ಸುಧಾರಕನಾಗಿ ರಾಜ್ಯಭಾರ ಮಾಡಿದ ಶ್ರೀರಾಮ ಪ್ರತಿಯೊಬ್ಬನಿಗೂ ಆದರ್ಶ ಪುರುಷನಾಗಿದ್ದಾನೆ, ಶ್ರೀರಾಮನು ಧರ್ಮ ಮಾರ್ಗವನ್ನು ಅರ್ಧಕ್ಕೆ ಬಿಡದೆ ಸಮಾಜದ ಮುಂದೆ ತಾನೊಬ್ಬ ಪರಿಪೂರ್ಣ ವ್ಯಕ್ತಿ ಎಂದು ಸಾಬೀತುಪಡಿಸಿದನು. ರಾಮ ಉಳಿದವರಿಗಿಂತ ದುರಾಸೆ, ದ್ವೇಷ ಮತ್ತು ದುಶ್ಚಟಗಳಿಲ್ಲದ ಆದರ್ಶ ಮಾನವನ ಪ್ರತಿರೂಪ ಎಂದೇ ಹೇಳಲಾಗುತ್ತದೆ ಎಂದರು.

ಪ್ರಜಾಪಿತ ಬ್ರಹ್ಮಾಕುಮಾರೀಯ ದಾನೇಶ್ವರಿ ಅಕ್ಕ ಮಾತನಾಡಿ, ಧರ್ಮವನ್ನು ರಕ್ಷಿಸಲು ಮತ್ತು ಉತ್ತಮ ನಡತೆಯ ಮಾದರಿಯನ್ನು ಹೊಂದಿಸಲು ಅವರು ತಮ್ಮ ಇಡೀ ಜೀವನವನ್ನು ಪಣಕ್ಕಿಟ್ಟರು, ಈ ಕಾರಣದಿಂದ ಅವನನ್ನು ಮರ್ಯಾದಾ ಪುರುಷೋತ್ತಮ ಶ್ರೀರಾಮ ಎಂದು ಕರೆಯುತ್ತಾರೆ ಎಂದರು. ಶ್ರೀರಾಮನು ಎಲ್ಲರೂ ಸಂತೋಷಪಡುವ ಮತ್ತು ಸಂತೃಪ್ತರಾಗಿರುವ ರಾಜ್ಯವನ್ನು ಸ್ಥಾಪಿಸುವಲ್ಲಿ ಯಶಸ್ವಿಯಾದರು. ತ್ರೇತಾಯುಗದಲ್ಲಿ ಭೂಮಿಯ ಮೇಲೆ ರಾಕ್ಷಸ ಶಕ್ತಿಗಳ ಮತ್ತು ದುಷ್ಟ ಜನಗಳ ಅಟ್ಟಹಾಸವು ಮಿತಿಮೀರಿದಾಗ ಮಹಾಪುರುಷರು ಜನಿಸುತ್ತಾರೆ ಎಂದರು.

ಈ ಸಂದರ್ಭದಲ್ಲಿ ಸಾರ್ವಜನಿಕರಿಗೆ ಪಾನಕ, ಮಜ್ಜಿಗೆ ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ನ್ಯಾಯಾಧೀಶರಾದ ಚಂಪಕ, ರಾಮಕೃಷ್ಣ ಭಾರದ್ವಾಜ್, ಅನಂತಪ್ರಸಾದ್, ವೆಂಕಟನಾಗಪ್ಪ ಶೆಟ್ಟಿ, ಬಾಲಸುಬ್ರಹ್ಮಣ್ಯಂ, ಅನಿಲ್ ದೀಕ್ಷಿತ್, ಶಂಕರ ರುದ್ರಭೂಮಿಯ ಸತೀಶ್, ಚಿಕ್ಕಣ್ಣ, ರಘುನಾಥ್, ಪವನ್ ಇತರರು ಇದ್ದರು.

ಸಿದ್ದಗಂಗಾ ಶ್ರೀಗಳ ಜಯಂತಿ ಪ್ರಯುಕ್ತ ಪಾನಕ, ಮಜ್ಜಿಗೆ ವಿತರಣೆ



ಚಾಮರಾಜನಗರ, ಏ.1– ಸಿದ್ದಗಂಗಾ ಶ್ರೀ ಶಿವಕುಮಾರ ಮಹಾಸ್ವಾಮಿಗಳ 116ನೇ ಜಯಂತಿ ಪ್ರಯುಕ್ತ ಕೆ.ಜಿ.ಮಂಜುನಾಥ್ (ಇಂಚರ ಗ್ರೂಪ್) ವತಿಯಿಂದ ಸಾರ್ವಜನಿಕರಿಗೆ ನೀರು ಮಜ್ಜಿಗೆ, ಪಾನಕ ವಿತರಿಸಲಾಯಿತು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಇಂಚರ್ ಉಪಹಾರ್ ಮಹಾಮನೆಯ ಆವರಣದಲ್ಲಿ ಪಾನಕ, ಮಜ್ಜಿಗೆ ವಿತರಿಸಿದ ಕೆ.ಜಿ.ಮಂಜುನಾಥ್ ಮಾತನಾಡಿ, ನಡೆದಾಡುವ ದೇವರು, ತ್ರಿವಿಧ ದಾಸೋಹಿ, ಸಿದ್ಧಗಂಗಾ ಶ್ರೀ ಶಿವಕುಮಾರ ಅವರು ಲಕ್ಷಾಂತರ ಮಕ್ಕಳಿಗೆ ಆಶ್ರಯ, ದಾಸೋಹ, ಅಕ್ಷರ ನೀಡುವ ಮೂಲಕ ಇಡೀ ವಿಶ್ವಕ್ಕೆ ಆದರ್ಶರಾಗಿದ್ದರು, ಶ್ರೀಗಳ 116ನೇ ಜಯಂತಿ ಪ್ರಯುಕ್ತ ಪಾನಕ, ಮಜ್ಜಿಗೆ ವಿತರಿಸಲಾಗಿದೆ. ಅವರನ್ನು ಸ್ಮರಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದರು.

ಈ ಸಂದರ್ಭದಲ್ಲಿ ನಾಗರತ್ನಮ್ಮ, ಉಮಾ, ಈಶ್ವರ್ ರಕ್ಷಿತ್, ಶಂಕರ್ ಇಂಚರ್ ಗ್ರೂಪ್ ತಂಡ ಹಾಜರಿದ್ದರು.

ಚಾ.ನಗರ ವಿವಿಗೆ ಅಂಬೇಡ್ಕರ್ ವಿವಿ ಎಂದು ನಾಮಕರಣ ಮಾಡಲು ಆಗ್ರಹ



ಚಾಮರಾಜನಗರ, ಏ.1– ಚಾಮರಾಜನಗರ ವಿಶ್ವವಿದ್ಯಾನಿಲಯ ಎಂಬ ನಾಮಕರಣ ಕೈಬಿಟ್ಟು, ಹಾಲಿ ವಿಶ್ವವಿದ್ಯಾನಿಲಯಕ್ಕೆ ಡಾ.ಬಿ.ಆರ್. ಅಂಬೇಡ್ಕರ್ ವಿಶ್ವವಿದ್ಯಾನಿಲಯ ಎಂದು ನಾಮಕರಣ ಮಾಡುವಂತೆ ಆಗ್ರಹಿಸಿ ಜಿಲ್ಲಾ ಜನಹಿತಾ ಶಕ್ತಿ ಹೋರಾಟ ವೇದಿಕೆ, ದಸಂಸ ಜಿಲ್ಲಾ ಒಕ್ಕೂಟ ವತಿಯಿಂದ ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಗಂಗಾಧರ್ ಅವರ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಚಾಮರಾಜನಗರ ಲೋಕಸಭೆ ಮೀಸಲು ಕ್ಷೇತ್ರವಾಗಿದ್ದು, ಹೊಸದಾಗಿ ಮಂಜೂರು ಮಾಡಿರುವ ಚಾಮರಾಜನಗರ ವಿವಿಗೆ ಅಂಬೇಡ್ಕರ್ ವಿಶ್ವವಿದ್ಯಾನಿಲಯ ಎಂದು ನಾಮಕರಣ ಮಾಡಬೇಕು ಎಂದು ಈ ಭಾಗದ ಜನರ ಆಶಯವಾಗಿತ್ತು. ಆದರೆ ರಾಜ್ಯ ಸರಕಾರ ಇದಕ್ಕೆ ವಿರುದ್ಧವಾಗಿ ನಡೆದುಕೊಂಡಿರುವುದು ಖಂಡನೀಯ. ಮಾ.28 ರಂದು ನಡೆದ ಉದ್ಘಾಟನಾ ಸಮಾರಂಭದ ಶಿಲಾನ್ಯಾಸ ನಾಮಫಲಕದಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯ, ಸುವರ್ಣಗಂಗೋತ್ರಿ ಎಂದು ಹೆಸರನ್ನು ಅಳವಡಿಸಲಾಗಿದೆ. ಅಂಬೇಡ್ಕರ್ ಹೆಸರನ್ನು ಎಲ್ಲಿಯೂ ಪ್ರಸ್ತಾಪಿಸಿಲ್ಲ. ಸುವರ್ಣಗಂಗೋತ್ರಿ ಹೆಸರು ಬಳಕೆಗೆ ಸಿಂಡಿಕೇಟ್ ಸಭೆಯಲ್ಲಿ ಅನುಮತಿ ನೀಡಿಲ್ಲ. ಆಗಿದ್ದರೂ, ಸುವರ್ಣಗಂಗೋತ್ರಿ ಹೆಸರು ಚಾಲ್ತಿಯಲ್ಲಿದೆ. ಈಗಾಗಲೇ ಮಹಾನ್ ವ್ಯಕ್ತಿಗಳು ಸಾಧಕರ ಹೆಸರಿನಲ್ಲಿ ಹಲವಾರು ವಿಶ್ವವಿದ್ಯಾನಿಲಯಗಳು ಸ್ಥಾಪನೆಯಾಗಿವೆ. ಚಾಮರಾಜನಗರ ವಿವಿ ನಾಮಕರಣ ಕೈಬಿಟ್ಟು, ಹೊಸ ವಿವಿಗೆ ಅಂಬೇಡ್ಕರ್ ವಿಶ್ವವಿದ್ಯಾನಿಲಯ ಎಂದು ಸರಕಾರ ಮರುನಾಮಕರಣ ಮಾಡಬೇಕು, ಇಲ್ಲದಿದ್ದಲ್ಲಿ ದಲಿತ ಸಂಘಟನೆಗಳು ಬೀದಿಗಿಳಿದು ಪ್ರತಿಭಟನೆ ನಡೆಸಲಿವೆ ಎಂದು ಜಿಲ್ಲಾ ಜನಹಿತಾಶಕ್ತಿ ಹೋರಾಟ ಸಮಿತಿ ವೇದಿಕೆ ಅಧ್ಯಕ್ಷ ರಾಮಸಮುದ್ರ ಸುರೇಶ್, ದಸಂಸ ಜಿಲ್ಲಾ ಸಂಚಾಲಕ ಯರಿಯೂರು ರಾಜಣ್ಣ, ಕೆ.ಎಂ.ನಾಗರಾಜು, ಸಿದ್ದರಾಜು ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಅರಕಲಗೂಡು ಜೆಡಿಎಸ್ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಬಿಜೆಪಿಗೆ ಸೇರ್ಪಡೆ

ನವದೆಹಲಿ, ಏ.1– ನಿನ್ನೆಯಷ್ಟೇ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಅರಕಲಗೂಡು



ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮಾಜಿ ಶಾಸಕ ಎ.ಟಿ.ರಾಮಸ್ವಾಮಿ ಅವರು ಶನಿವಾರ ದೆಹಲಿಯಲ್ಲಿ ಬಿಜೆಪಿ ಸೇರ್ಪಡೆಯಾಗಿದ್ದಾರೆ.

ಇಂದು ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಅನುರಾಗ್ ಠಾಕೂರ್ ಅವರ ಸಮ್ಮುಖದಲ್ಲಿ ಎಟಿ ರಾಮಸ್ವಾಮಿ ಅವರು ಬಿಜೆಪಿ ಸೇರ್ಪಡೆಯಾದರು. ಅನುರಾಗ್ ಠಾಕೂರ್ ಅವರು ರಾಮಸ್ವಾಮಿ ಅವರಿಗೆ ಪಕ್ಷದ ಸದಸ್ಯತ್ವ ರಸೀದಿ ನೀಡಿ, ಶಾಲು ಹೊದಿಸಿ ಪಕ್ಷಕ್ಕೆ ಬರ ಮಾಡಿಕೊಂಡರು. ಬಳಿಕ ಮಾತನಾಡಿದ ಎ.ಟಿ ರಾಮಸ್ವಾಮಿ ಅವರು, ಅತ್ಯಂತ ಸಂತೋಷದಿಂದ ಪಕ್ಷವನ್ನು ಸೇರಿದ್ದೇನೆ. ಇಂದು ಸಂಜೆ ಅಥವಾ ನಾಳೆ ಮೋದಿ, ಅಮಿತ್ ಶಾ, ನಡ್ಡಾ ಅವರನ್ನು ಭೇಟಿಯಾಗುತ್ತಿದ್ದೇನೆ ಎಂದರು.

ಒಂದನೇ ಪುಟದಿಂದ

ವೈರಮುಡಿ ವೈಭವದ ಉತ್ಸವ

ಪೂಜೆ, ಪುನಸ್ಕಾರ ನೆರವೇರಿಸಿ, ಜಿಲ್ಲಾಡಳಿತ ಹಾಗೂ ಪೊಲೀಸ್ ಇಲಾಖೆ ಸಮ್ಮುಖದಲ್ಲಿ ವಜ್ರಖಚಿತ ಅಮೂಲ್ಯ ಆಭರಣ ಹೊರತರಲಾಯಿತು. ಈ ಸಂದರ್ಭ ಮೇಲುಕೋಟೆ ಸ್ಥಾನಿಕ ಅರ್ಚಕರು ಸಹ ಉಪಸ್ಥಿತರಿದ್ದರು.

ಜಿಲ್ಲಾ ಖಜಾನೆಯಿಂದ ಹೊರಟ ವಜ್ರಖಚಿತ ವೈರಮುಡಿ: ರಾಜಮುಡಿ–ವೈರಮುಡಿ ತಿರುವಾಭರಣ ಪೆಟ್ಟಿಗೆಗೆ ಬೆಳಗ್ಗೆ 8 ಗಂಟೆಗೆ ಮಂಡ್ಯದ ಶ್ರೀಲಕ್ಷ್ಮೀ ಜನಾರ್ಧನಸ್ವಾಮಿ ಸನ್ನಿಧಿಯಲ್ಲಿ ಪ್ರಥಮ ಪೂಜೆಯಾದರೆ, ಮೇಲುಕೋಟೆ ಹೊರವಲಯದಲ್ಲಿರುವ ವೀರಾಂಜನೇಯಸ್ವಾಮಿ ಸನ್ನಿಧಿಯಲ್ಲಿ ಸಂಜೆ ಪೂಜೆ ಮಾಡಿದ ನಂತರ ಚಿನ್ನದ ಪಲ್ಲಕ್ಕಿಯಲ್ಲಿರಿಸಿ ಮೆರವಣಿಗೆ ಮೂಲಕ ದೇವಾಲಯಕ್ಕೆ ತರಲಾಯಿತು. ಮಂಡ್ಯ ನಗರದಿಂದ ಹೊರಟ ವಜ್ರಖಚಿತ ವೈರಮುಡಿಗೆ ರಸ್ತೆಯುದ್ದಕ್ಕೂ ಭಕ್ತರು ಸಾಲಾಗಿ ನಿಂತು ದರ್ಶನ ಪಡೆದು ಪುನೀತರಾದರು. ಬಳಿಕ ಮೇಲುಕೋಟೆಯ ಯತಿರಾಜ ದಾಸರ್ ಗುರುಪೀಠದಿಂದ ಬದರೀನಾರಾಯಣಸ್ವಾಮಿ ಸನ್ನಿಧಿಯ ಮುಂಭಾಗ ಕೊನೆಯ ಪೂಜೆ ನೆರವೇರಿಸಿ, ನಂತರ ತಿರುವಾಭರಣ ಪೆಟ್ಟಿಗೆಗಳು ದೇವಾಲಯ ತಲುಪಿತು.

ಅಲ್ಲಿ ವೈರಮುಡಿ ತಿರುವಾಭರಣ ಪೆಟ್ಟಿಗೆಯನ್ನು ತೆರೆಯದೆ ನೇರವಾಗಿ ಚೆಲುವನಾರಾಯಣನ ಧಾರಣೆಗೆ ನೀಡಲಾಯಿತು. ನಂತರ ರಾಜಮುಡಿ ತಿರುವಾಭರಣಪೆಟ್ಟಿಗೆಯನ್ನು ತೆರೆದು ಶಂಖ, ಚಕ್ರ, ಗಧಾಂಗಿ ಪದ್ಮಪೀಠ, ಶಿರಚಕ್ರ, ಅಭಯಹಸ್ತ, ಕರ್ಣಾಭರಣ, ಗಂಡುಭೇರುಂಡ ಪದಕಗಳನ್ನು ಒಳಗೊಂಡ 16 ಬಗೆಯ ಆಭರಣಗಳನ್ನು ಪರಿಶೀಲಿಸಿ ಉತ್ಸವದ ಅಲಂಕಾರಕ್ಕಾಗಿ ಎಲ್ಲಾ ಸ್ಥಾನಿಕರು ಅರ್ಚಕರಿಗೆ ಹಸ್ತಾಂತರ ಮಾಡಲಾಯಿತು. ಜಿಲ್ಲಾಧಿಕಾರಿ ಡಾ.ಹೆಚ್.ಎನ್.ಗೋಪಾಲ ಕೃಷ್ಣ, ಅಪರ ಜಿಲ್ಲಾಧಿಕಾರಿ ಡಾ.ಹೆಚ್.ಎಲ್.ನಾಗರಾಜು, ಎಸ್ಪಿ ಯತೀಶ್ ಸಮಕ್ಷಮ ನಡೆದ ಆಭರಣ ಹಸ್ತಾಂತರ ಪ್ರಕ್ರಿಯೆಯಲ್ಲಿ ದೇವಾಲಯದ ಸ್ಥಾನಿಕರಾದ ಕರಗಂ ನಾರಾಯಣ ಅಯ್ಯಂಗಾರ್, ಸಜ್ಜೆಹಟ್ಟಿ ತಿರುನಾರಾಯಣ, ಅಯ್ಯಂಗಾರ್, ಸ್ಥಾನಾಚಾರ್ಯ ಶ್ರೀನಿವಾಸನರಸಿಂಹನ್ ಗುರೂಜಿ, ಅರ್ಚಕ ವರದರಾಜಭಟ್ ಸೇರಿದಂತೆ ಹಲವರು ಭಾಗಿಯಾಗಿದ್ದರು. ನಿತ್ಯಾರಾಧನೆ, ಯಾಗಶಾಲೆಯ ನಂತರ ಶ್ರೀದೇವಿ–ಭೂದೇವಿ ಸಮೇತನಾಗಿ ಗರುಡಾರೂಢನಾದ ಚೆಲುವನಾರಾಯಣಸ್ವಾಮಿಗೆ ವೈರಮುಡಿ ಕಿರೀಟ ಧಾರಣೆ ಮಾಡಲಾಯಿತು. ರಾತ್ರಿ 8ಗಂಟೆಗೆ ಗರುಡದೇವನ ಮೆರವಣಿಗೆ ನಂತರ ಚೆಲುವನಾರಾಯಣಸ್ವಾಮಿಗೆ ಮಹಾಮಂಗಳಾರತಿ ನೆರವೇರಿಸಿ ವೈರಮುಡಿ ಉತ್ಸವಕ್ಕೆ ಚಾಲನೆ ನೀಡಲಾಯಿತು. ದೇವಾಲಯದ ಮುಂಭಾಗ ನಿರ್ಮಿಸಿದ ನಡುಚಪ್ಪರದ ಮಂಟಪದಲ್ಲಿ ಸ್ವಾಮಿಗೆ ಎರಡನೇ ಸಲ ಮಹಾಮಂಗಳಾರತಿ ನೆರವೇರಿಸಲಾಯಿತು.

ಬಳಿಕ ವೈರಮುಡಿ ಉತ್ಸವ ರಥಬೀದಿ, ಮಾರಿಗುಡಿಬೀದಿ, ರಾಜಬೀದಿಗಳಲ್ಲಿ ಸಾಗಿದ ನಂತರ ರಾಜ ಒಡೆಯರ್ ನಿರ್ಮಿಸಿದ ವಾಹನೋತ್ಸವ ಮಂಟಪದಲ್ಲಿ ಮುಕ್ತಾಯವಾಯಿತು. ನಂತರ ಚೆಲುವನಾರಾಯಣಸ್ವಾಮಿಗೆ ರಾಜಮುಡಿ ಧರಿಸಿ ಉತ್ಸವ ನೆರವೇರಿಸಿದ ನಂತರ ಪಡಿಯೇತ್ತ ನಡೆದು ವೈರಮುಡಿ ಉತ್ಸವ ಸಂಪನ್ನಗೊಂಡಿತು. ಹೈಕೋರ್ಟ್‌ನ ಹಲವು ನ್ಯಾಯಮೂರ್ತಿಗಳು, ಹಿರಿಯ ಐಎಎಸ್ ಅಧಿಕಾರಿ ಕುಮಾರನಾಯಕ್, ಸರ್ಕಾರದ ಕಾರ್ಯದರ್ಶಿ ಉಮಾ ಶಂಕರ್, ಯತಿರಾಜಜೀಯರ್ ಸೇರಿದಂತೆ ಹಲವು ಗಣ್ಯರು ಭಾಗಿಯಾಗಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯತೀಶ್ ನೇತೃತ್ವದಲ್ಲಿ ಸಜ್ಜುಗೊಂಡಿದ್ದ 1500ಕ್ಕೂ ಹೆಚ್ಚಿನ ಪೊಲೀಸ್ ಸಿಬ್ಬಂದಿಯ ಭದ್ರತೆ ಇತ್ತು. 8 ಕಡೆ ಅಳವಡಿಸಿದ್ದ ಎಲ್‌ಇಡಿ ಪರದೆಗಳ ಮೂಲಕವೂ ಭಕ್ತರು ಉತ್ಸವ ಕಣ್ತುಂಬಿಕೊಂಡರು. ಕಲ್ಯಾಣಿ ಮತ್ತು ರಾಜಬೀದಿಯಿಂದ ಪೊಲೀಸ್ ಠಾಣೆಯವರೆಗೆ ಮಾಡಿದ್ದ ದೀಪಾಲಂಕಾರ ಆಕರ್ಷಕವಾಗಿತ್ತು. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ 150ಕ್ಕೂ ಹೆಚ್ಚುವರಿ ಬಸ್ ನಿಯೋಜಿಸಿ ಭಕ್ತರಿಗೆ ಅನುಕೂಲ ಮಾಡಿಕೊಡಲಾಗಿತ್ತು. ಗ್ರಾಪಂನಿಂದ ಮಾಡಿದ್ದ ಕುಡಿಯುವ ನೀರಿನ ಪೂರೈಕೆ, ಸ್ವಚ್ಛತಾ ಕಾರ್ಯ, ವೈದ್ಯಕೀಯ ಸೇವೆಗಳು ಸಮರ್ಪಕವಾಗಿದ್ದವು.

ಚುನಾವಣಾ ಕಾವಿನ ನಡುವೆಯೂ ಮಂಡ್ಯ, ಮೈಸೂರು, ಬೆಂಗಳೂರು ಸೇರಿದಂತೆ ಅಕ್ಕಪಕ್ಕದ ಜಿಲ್ಲೆಗಳು ಹಾಗೂ ಹೊರರಾಜ್ಯಗಳಾದ ತಮಿಳುನಾಡು, ಕೇರಳ, ಆಂಧ್ರ ಪ್ರದೇಶ, ತೆಲಂಗಾಣದಿಂದಲೂ ಲಕ್ಷಾಂತರ ಭಕ್ತರು ವೈರಮುಡಿ ಕಣ್ತುಂಬಿಕೊಳ್ಳಲು ಆಗಮಿಸಿದ್ದರು. ಜೊತೆಗೆ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಶಿಷ್ಟಾಚಾರ ಪಾಲನೆಯಾಗದಿರುವ ಹಿನ್ನಲೆಯಲ್ಲಿ ಅನೇಕ ರಾಜಕೀಯ ಗಣ್ಯರು ಈ ಬಾರಿಯ ವೈರಮುಡಿ ಉತ್ಸವದಿಂದ ದೂರ ಉಳಿದರು.

ಹೈಕೋರ್ಟ್ ಆದೇಶ ಉಲ್ಲಂಘನೆ

ಸ್ಥಾನಿಕರು ಕಿರೀಟ ತರುವ ವಿಚಾರದ ಗೊಂದಲ ಪರಿಹರಿಸುವಲ್ಲಿ ಈ ಸಲವೂ ಜಿಲ್ಲಾಡಳಿತ ವಿಫಲವಾಗಿದೆ. ಜಿಲ್ಲಾಧಿಕಾರಿಗಳು ನ್ಯಾಯಾಲಯದಲ್ಲಿ ವಿಚಾರಣೆ ನಡೆಸಿ 40 ದಿನಗಳ ಹಿಂದೆಯೇ ಆದೇಶ ಕಾಯ್ದಿರಿಸಿದ್ದ ಕಾರಣ ವೈರಮುಡಿ–ರಾಜಮುಡಿ ಕಿರೀಟತರುವ ಸ್ಥಾನಿಕರ ನಡುವಿನ ಗೊಂದಲ ಈ ವರ್ಷ ಬಗೆಹರಿಯುತ್ತದೆ ಎಂದೇ ನಂಬಲಾಗಿತ್ತು. ಪ್ರಥಮ ಸ್ಥಾನಿಕ ಕರಗಂ ನಾರಾಯಣಯ್ಯಂಗಾರ್ ಹಾಕಿದ ಒತ್ತಡ ಹಾಗೂ ಲಾಬಿಗೆ ಮಣಿದ ಡಿಸಿ ಯಾವುದೇ ಆದೇಶ ನೀಡದೆ ಏಕಪಕ್ಷೀಯವಾಗಿ ಪ್ರಥಮ ಸ್ಥಾನಿಕರನ್ನು ಮಾತ್ರ ಮೌಖಿಕ ಸೂಚನೆ ಮೇಲೆ ಕಿರೀಟ ತರುವ ಪ್ರಕ್ರಿಯಲ್ಲಿ ಭಾಗವಹಿಸಲು ಸೂಚಿಸಿದ ಕಾರಣ ಮತ್ತೆ ಹೈಕೋರ್ಟ್ ನಿರ್ದೇಶನಗಳು ಮತ್ತು ದೇಗುಲದ ಕೈಪಿಡಿ ನಿಯಮ ಉಲ್ಲಂಘನೆಗೆ ಅವಕಾಶ ನೀಡಿದಂತಾಯಿತು.

ಪಂಚ ಮಹಾರಥೋತ್ಸವ

125 ಅಡಿ ಎತ್ತರಕ್ಕೆ ನಿರ್ಮಿಸಲಾಗುತ್ತಿತ್ತು. ಈಗ 90 ಅಡಿ ಎತ್ತರಕ್ಕೆ ಸೀಮಿತಗೊಳಿಸಲಾಗಿದೆ. ಈ ರಥವನ್ನು ಗೌತಮ ಮಹರ್ಷಿಗಳೇ ನಿರ್ಮಿಸಿರುವುದಾಗಿ ಐತಿಹ್ಯವಿರುವ ಕಾರಣ ಗೌತಮ ರಥೋತ್ಸವವೆಂದೇ ಕರೆಯಲಾಗುತ್ತದೆ. ಈ ಜಾತ್ರೆಯಲ್ಲಿ ಭಾಗವಹಿಸಿದ ಭಕ್ತರ ಬೇಡಿಕೆಯನ್ನು ಶ್ರೀಕಂಠೇಶ್ವರನು ಈಡೇರಿಸುತ್ತಾನೆಂಬ ಪ್ರತೀತಿ ಇರುವುದರಿಂದ ನವ ವಧು–ವರರು ರಥಕ್ಕೆ ಹಣ್ಣು ಧವನ ಸಮರ್ಪಿಸುವ ವಾಡಿಕೆ ಬಹಳ ವರ್ಷದಿಂದ ನಡೆದು ಬಂದಿದೆ. ಈಗಾಗಲೇ ಗೌತಮ ರಥ ಹಾಗೂ ಅಮ್ಮನವರ ರಥಕ್ಕೆ ಹೊಸ ಚಕ್ರ ಅಳವಡಿಸಲಾಗಿದೆ. ಬೇರೆ ರಥಗಳ ಚಕ್ರಗಳ ದುರಸ್ತಿ ಮಾಡಿ ಬಣ್ಣ ಬಣ್ಣದ ಬಟ್ಟೆಯ ಬಾವುಟಗಳನ್ನು ಕಟ್ಟಿ, ರಥಗಳನ್ನು ಸಿಂಗರಿಸುವ ಕಾರ್ಯದಲ್ಲಿ ಸಿಬ್ಬಂದಿ ತೊಡಗಿದ್ದಾರೆ. ಮಂಗಳೂರಿನಿಂದ ಹೊಸದಾಗಿ 100 ಮೀಟರ್ ಹಗ್ಗ ತರಿಸಲಾಗಿದೆ. ರಥದ ತಂಡಕ್ಕೆ ಸಮವಸ್ತ್ರ ನೀಡಲಾಗಿದೆ.

ಜಾತ್ರೆಗೆ ಲಕ್ಷಾಂತರ ಜನರು ಸೇರುವ ಹಿನ್ನೆಲೆ ಮೂಲ ಸೌಕರ್ಯಗಳಾದ ಕುಡಿಯುವ ನೀರು, ಶೌಚಾಲಯ, ನೆರಳಿನ ವ್ಯವಸ್ಥೆ ಹಾಗೂ ಬರುವ ಭಕ್ತರಿಗೆ ರಾತ್ರಿ ಮತ್ತು ಬೆಳಗ್ಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲು ದೇವಾಲಯದ ಆಡಳಿತ ಮುಂದಾಗಿದೆ. 200 ತಾತ್ಕಾಲಿಕ ಶೌಚಾಲಯ ಹಾಗೂ ಕಪಿಲಾ ನದಿ ತೀರದಲ್ಲಿ ಬಟ್ಟೆ ಬದಲಿಸಲು ತಾತ್ಕಾಲಿಕ ಶೆಡ್ ನಿರ್ಮಿಸಲಾಗಿದೆ. ಭದ್ರತೆ ಅಂಗವಾಗಿ 9 ಕಡೆ ವಾಚ್ ಟವರ್ ನಿರ್ಮಿಸಲಾಗಿದೆ. ಗಿರಿಜಾ ಕಲ್ಯಾಣ, ಬಸ್ ನಿಲ್ದಾಣ, ರೈಲು ನಿಲ್ದಾಣ, ದೇವಾಲಯದ ವಾಣಿಜ್ಯ ಸಂಕೀರ್ಣದ ಬಳಿ ತಾತ್ಕಾಲಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಜೊತೆಗೆ ಸಂಘ ಸಂಸ್ಥೆಗಳು ರಥ ಚಲಿಸಿದ ನಂತರ ಮಜ್ಜಿಗೆ, ಪಾನಕ, ಬಾತ್, ಲಾಡು, ವಿತರಿಸಲಿವೆ. ಈ ಬಾರಿ ಪ್ರಸಾದ ವಿತರಣೆ ಮಾಡುವವರು ಕಡ್ಡಾಯವಾಗಿ ಅನುಮತಿ ಪಡೆಯಬೇಕಾಗಿರುವ ಕಾರಣ ಈಗಾಗಲೇ ಸಾಕಷ್ಟು ಅರ್ಜಿ ಸಲ್ಲಿಕೆಯಾಗಿವೆ.

ವಿದ್ಯುತ್ ದೀಪಾಲಂಕಾರ: ಜಾತ್ರಾ ಮಹೋತ್ಸವದ ಅಂಗವಾಗಿ ನಗರದ ಪ್ರಮುಖ ಬೀದಿಗಳನ್ನು ವಿದ್ಯುತ್ ದೀಪಗಳಿಂದ ಅಲಂಕೃತಗೊಳಿಸಲಾಗಿದೆ. ದೇವಾಲಯದ ಆವರಣದ ಸುತ್ತಲೂ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿದೆ. ಏ.4ರ ಮಂಗಳವಾರ ರಾತ್ರಿ 7 ಗಂಟೆಗೆ ತೆಪ್ಪೋತ್ಸವ ನಡೆಯಲಿದ್ದು, ಲಕ್ಷಾಂತರ ಭಕ್ತರು ಇದಕ್ಕೆ ಸಾಕ್ಷಿಯಾಗಲಿದ್ದಾರೆ. ಏ.6 ರಂದು ಮಹಾಸಂಪ್ರೋಕ್ಷಣೆ ಪೂರ್ವಕ ನಂದಿವಾಹನ ಮತ್ತು ಶಯನೋತ್ಸವ ನಡೆಯುವುದರೊಂದಿಗೆ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಡಿ.ಕೆ.ಶಿವಕುಮಾರ್ 'ಕೈ' ಚಳಕ

ಕೆಲವು ನಾಯಕರ ಜೊತೆ ಚರ್ಚೆ ಮಾಡಿದ್ದೇನೆ. ಅವರಿಗೆ ಕೆಲವು ಭರವಸೆಯಿತ್ತಿದ್ದೇನೆ ಎಂಬ ಮಾಹಿತಿಯನ್ನು ಖರ್ಗೆಯವರ ಗಮನಕ್ಕೆ ತಂದಿದ್ದಾರೆ. ಶಿವಕುಮಾರ್ ಅವರ ಈ ನಿರ್ಣಯಕ್ಕೆ ರಾಜ್ಯ ಉಸ್ತುವಾರಿ ಹೊಣೆ ಹೊತ್ತ ರಣದೀಪ್‌ಸಿಂಗ್ ಸುರ್ಜೆವಾಲ್ ಕೂಡ ಬೆಂಬಲ ವ್ಯಕ್ತಪಡಿಸಿದ್ದಾರೆ. ಕೇಂದ್ರೀಯ ಚುನಾವಣಾ ಸಮಿತಿ ಏಪ್ರಿಲ್ 3 ಮತ್ತು 4ರಂದು ದೆಹಲಿಯಲ್ಲಿ ಸಭೆ ಸೇರಲಿದೆ. ಸಭೆಯಲ್ಲಿ ಕೆಲವು ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಪ್ರಕಟಿಸದೇ ಹಾಗೆಯೇ ಉಳಿಸಿಕೊಳ್ಳಲಿದೆ ಎನ್ನಲಾಗಿದೆ.

ಬಿಜೆಪಿ ಕೂಡ ಏ.4ರಂದೇ ತನ್ನ ಮೊದಲ ಪಟ್ಟಿ ಬಿಡುಗಡೆಗೊಳ್ಳುವ ಸಾಧ್ಯತೆ ಇದ್ದು, ಅದನ್ನು ಗಮನದಲ್ಲಿಟ್ಟುಕೊಂಡೇ ಕಾಂಗ್ರೆಸ್ 2ನೇ ಪಟ್ಟಿ ಸಿದ್ಧಗೊಳ್ಳಲಿದೆ. ಇದರ ನಡುವೆ ವಿಧಾನಸಭೆಯ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ವರುಣಾ ಕ್ಷೇತ್ರದ ಜೊತೆಗೆ ಕೋಲಾರ ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ಮಾಡಿಕೊಡುವ ಸಾಧ್ಯತೆ ಇದೆ. ಸ್ಕ್ರೀನಿಂಗ್ ಕಮಿಟಿಯಲ್ಲಿ ಕೋಲಾರ ಕ್ಷೇತ್ರಕ್ಕೆ ಸಿದ್ದರಾಮಯ್ಯ ಅವರ ಒಂದೇ ಹೆಸರನ್ನೇ ವರಿಷ್ಠರಿಗೆ ಶಿಫಾರಸ್ಸು ಮಾಡಿದ್ದಾರೆ ಎನ್ನಲಾಗಿದೆ. ಈ ಬಗ್ಗೆಯು ಶಿವಕುಮಾರ್ ಖರ್ಗೆಯವರ ಬಳಿ ಸಮಾಲೋಚನೆ ಮಾಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಸೆನ್ ಪೊಲೀಸರ ಯಶಸ್ವಿ ಕಾರ್ಯಾಚರಣೆ

ಮರಳಿ ಮಾಲೀಕರ ಕೈಸೇರಿದ 15 ಮೊಬೈಲ್ ಫೋನ್‌ಗಳು

ನೂತನ ಸಿಇಐಆರ್ ತಂತ್ರಾಂಶದ ಮೂಲಕ ಮೊಬೈಲ್‌ಗಳ ಯಶಸ್ವಿ ಪತ್ತೆ ಕಾರ್ಯ



ಮೈಸೂರು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ತಮ್ಮ ಕಚೇರಿ ಸಭಾಂಗಣದಲ್ಲಿ ಮಾಲೀಕರಿಗೆ ಮೊಬೈಲ್ ಫೋನ್‌ಗಳನ್ನು ಹಿಂದಿರುಗಿಸಿದರು. ಡಿಸಿಪಿ ಎಂ. ಮುತ್ತುರಾಜ್, ಸೆನ್ ಠಾಣೆ ಇನ್ಸ್‌ಪೆಕ್ಟರ್ ಯೋಗಾನಂಜಪ್ಪ ಅವರನ್ನು ಚಿತ್ರದಲ್ಲಿ ಕಾಣಬಹುದು.

ಪತ್ತೆ ಹೇಗೆ

ಮೊಬೈಲ್ ಕಳೆದುಕೊಂಡವರು ತಕ್ಷಣ www.ceir.gov.in ವೆಬ್‌ಸೈಟ್ ಓಪನ್ ಮಾಡಿ ಮೊಬೈಲ್ ನಂಬರ್, ಸಿಮ್ ಕಾರ್ಡ್ ನಂಬರ್, ಆಧಾರ್ ನಂಬರ್ ಹಾಗೂ ದೂರಿನ ಸ್ವೀಕೃತಿ ಸಂಖ್ಯೆಯನ್ನು ಅಪ್‌ಲೋಡ್ ಮಾಡುತ್ತಿದ್ದಂತೆಯೇ ಆ ಮೊಬೈಲ್ ಸಿಮ್ ಕಾರ್ಡ್ ನಿಷ್ಕ್ರಿಯವಾಗುತ್ತದೆ. ನಂತರ ಮೊಬೈಲ್ ಹೊಂದಿದ ವ್ಯಕ್ತಿ ಅದರ ಸಿಮ್ ಕಾರ್ಡ್ ತೆಗೆದು ಮತ್ತೊಂದು ಸಿಮ್ ಹಾಕಿಕೊಳ್ಳುತ್ತಾನೆ. ಹೀಗೆ ಅಳವಡಿಸಿಕೊಳ್ಳುತ್ತಿದ್ದಂತೆಯೇ ಮೊಬೈಲ್ ಹೊಂದಿದ ವ್ಯಕ್ತಿಯ ವಿಳಾಸ, ಮೊಬೈಲ್ ಸಂಖ್ಯೆಯಿಂದ ಪೊಲೀಸರಿಗೆ ಮಾಹಿತಿ ತಲುಪುತ್ತದೆ. ಕೂಡಲೇ ಪೊಲೀಸರು ಆ ವ್ಯಕ್ತಿಯನ್ನು ಸಂಪರ್ಕಿಸಿ ಮೊಬೈಲ್ ಅನ್ನು ವಶಪಡಿಸಿಕೊಳ್ಳುತ್ತಾರೆ. ಈ ನೂತನ ತಂತ್ರಾಂಶವು ಪೊಲೀಸರಿಗಷ್ಟೇ ಅಲ್ಲದೆ, ಸಾರ್ವಜನಿಕರಿಗೂ ಬಳಸಲು ಲಭ್ಯವಿದೆ. ಇದರಿಂದ ಕಳೆದು ಹೋದ ಮೊಬೈಲ್ ಫೋನ್ ಡಿವೈಸ್‌ಗಳನ್ನು ಸುಲಭವಾಗಿ ಪತ್ತೆ ಮಾಡಬಹುದಾಗಿದೆ

ಮೈಸೂರು, ಏ. 1(ಆರ್‌ಕೆ)– ಹೊಸದಾಗಿ ಪರಿಚಯಿಸಿರುವ ಸೆಂಟ್ರಲ್ ಇಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ (ಸಿಇಐಆರ್) ಟೆಲಿ ಕಮ್ಯುನಿಕೇಷನ್ ಸಾಫ್ಟ್‌ವೇರ್ ಬಳಸಿ ಕಳುವಾಗಿದ್ದ 15 ಮೊಬೈಲ್ ಫೋನ್‌ಗಳನ್ನು ಸೆನ್ ಠಾಣೆ ಪೊಲೀಸರು ಜಪ್ತಿ ಮಾಡಿದ್ದಾರೆ.

ಮೈಸೂರಿನ ನಜರ್‌ಬಾದ್‌ನಲ್ಲಿರುವ ಪೊಲೀಸ್ ಆಯುಕ್ತರ ಕಚೇರಿ ಸಭಾಂಗಣದಲ್ಲಿ ಇಂದು ಆಯುಕ್ತ ಬಿ. ರಮೇಶ್ ಹೀಗೆ ಜಪ್ತಿ ಮಾಡಲಾದ ಕಳವಾಗಿದ್ದ ಸುಮಾರು 3 ಲಕ್ಷ ರೂ. ಮೌಲ್ಯದ ವಿವಿಧ ಕಂಪನಿಯ 15 ಮೊಬೈಲ್ ಫೋನ್‌ಗಳನ್ನು ಅವುಗಳ ಮಾಲೀಕರಿಗೆ ಹಸ್ತಾಂತರಿಸಿದರು. ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ. ಮುತ್ತುರಾಜ್, ಸೆನ್ ಠಾಣೆ ಇನ್ಸ್‌ಪೆಕ್ಟರ್ ಯೋಗಾನಂಜಪ್ಪ, ಸಬ್ ಇನ್ಸ್‌ಪೆಕ್ಟರ್ ಸಿದ್ದೇಶ್ ಹಾಗೂ ತಂಡದ ಪೊಲೀಸರು ಈ ಸಂದರ್ಭ ಉಪಸ್ಥಿತರಿದ್ದರು.

2019ರಲ್ಲಿ ಜಾರಿಗೆ ಬಂದಿರುವ ಸಿಇಐಆರ್ ತಂತ್ರಾಂಶವನ್ನು ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳ ನಂತರ ದೇಶದಲ್ಲಿ ಕರ್ನಾಟಕ ರಾಜ್ಯ ಪೊಲೀಸರು ಅನುಷ್ಠಾನಗೊಳಿಸಿ ಕಳುವಾದ ಅಥವಾ ನಾಪತ್ತೆಯಾದ ಮೊಬೈಲ್ ಡಿವೈಸ್‌ಗಳನ್ನು ಪತ್ತೆ ಮಾಡುತ್ತಿದ್ದಾರೆ. ಮೈಸೂರಿನ ಸೈಬರ್, ಆರ್ಥಿಕ ಅಪರಾಧಗಳು ಮತ್ತು ಮಾದಕ ದ್ರವ್ಯ ಠಾಣೆ ಪೊಲೀಸರು, ತಮಗೆ ಬಂದ ದೂರು ಆಧರಿಸಿ ಕಳೆದುಕೊಂಡವರ ಆಧಾರ್ ಸಂಖ್ಯೆ, ದೂರಿನ ಸ್ವೀಕೃತಿ ಸಂಖ್ಯೆ, ಮೊಬೈಲ್ ಸಂಖ್ಯೆ ಮತ್ತಿತರ ಮಾಹಿತಿಗಳನ್ನು ಸಿಇಐಆರ್ ತಂತ್ರಾಂಶಕ್ಕೆ ಅಪ್‌ಲೋಡ್ ಮಾಡುವ ಮೂಲಕ ಮೊಬೈಲ್‌ಗಳನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ.

ಹೆಚ್.ಡಿ.ಕೋಟೆ ಮೀಸಲು ಕ್ಷೇತ್ರದಲ್ಲಿ ಸ್ಪರ್ಧಿಸಲು ರಾಜಕೀಯ ಪಕ್ಷಗಳು

ಆದಿವಾಸಿ ಸಮುದಾಯದವರಿಗೆ ಟಿಕೆಟ್ ನೀಡಲಿ

ರಾಜ್ಯ ಬುಡಕಟ್ಟು ಹಿತರಕ್ಷಣಾ ಸಂಘದ ರಾಜ್ಯಾಧ್ಯಕ್ಷ ಎಸ್.ಹೆಚ್.ಸುಭಾಷ್ ಮನವಿ



ಮೈಸೂರು,ಏ.1(ಪಿಎಂ)–ಪರಿಶಿಷ್ಟ ಪಂಗಡದಲ್ಲಿ ಒಟ್ಟು 51 ಉಪಜಾತಿಗಳು ಇದ್ದು, ಈ ಪೈಕಿ ಒಂದೇ ನಾಯಕ ಸಮುದಾಯದವರಿಗೆ ರಾಜ್ಯದ 15 ಮೀಸಲು ಕ್ಷೇತ್ರಗಳಲ್ಲಿ ಟಿಕೆಟ್ ನೀಡಿದರೆ ಸಾಮಾಜಿಕ ನ್ಯಾಯ ಪರಿಪಾಲನೆ ಆಗದು. ಈ ನಿಟ್ಟಿನಲ್ಲಿ ಹೆಚ್‌ಡಿ ಕೋಟೆ ಪರಿಶಿಷ್ಟ ಪಂಗಡ ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಆದಿವಾಸಿ ಸಮುದಾಯದವರಿಗೆ ಎಲ್ಲಾ ರಾಜಕೀಯ ಪಕ್ಷಗಳು ಟಿಕೆಟ್ ನೀಡಬೇಕೆಂದು ರಾಜ್ಯ ಬುಡಕಟ್ಟು ಹಿತರಕ್ಷಣಾ ಸಂಘದ ರಾಜ್ಯಾಧ್ಯಕ್ಷ ಎಸ್. ಹೆಚ್. ಸುಭಾಷ್ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಚ್‌ಡಿ ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಆದಿವಾಸಿ ಸಮುದಾಯದವರಿಗೆ ಟಿಕೆಟ್ ನೀಡಲು ರಾಜಕೀಯ ಪಕ್ಷಗಳು ಮುಂದಾಗಬೇಕು. ಪರಿಶಿಷ್ಟ ಪಂಗಡದಲ್ಲಿರುವ ಒಟ್ಟು 51 ಉಪಜಾತಿಗಳಿಗೂ ಸರಿ ಸಮಾನವಾಗಿ ಸಾಮಾಜಿಕ ನ್ಯಾಯ ಕಲ್ಪಿಸಬೇಕು. ಹಾಗಾಗಿ ಎಲ್ಲಾ ಪಕ್ಷದವರು ಆದಿವಾಸಿ ಸೇರಿದಂತೆ ಪರಿಶಿಷ್ಟ ಪಂಗಡದ ಇತರೆ ಸಮುದಾಯದವರಿಗೂ ರಾಜಕೀಯ ಪ್ರಾತಿನಿಧ್ಯ ನೀಡಿ ತಮ್ಮ ಬದ್ಧತೆ ಪ್ರದರ್ಶಿಸಬೇಕು ಎಂದು ಒತ್ತಾಯಿಸಿದರು.

ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ 'ಪರಿವಾರ' ಸಮುದಾಯಕ್ಕೆ 'ನಾಯಕ' ಜಾತಿ ಎಂದು ಮೈಸೂರು ಜಿಲ್ಲೆಯಲ್ಲಿ ಕಾನೂನುಬಾಹಿರವಾಗಿ ಜಾತಿ ಪ್ರಮಾಣ ಪತ್ರ ನೀಡಲಾಗುತ್ತಿದೆ. 'ಪರಿವಾರ' ಜಾತಿ ಇನ್ನೂ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿಯೇ ಇದೆ. ಸರ್ಕಾರ 2022ರ ಅ.30ರಂದು ರಾಜ್ಯಪತ್ರ ಹೊರಡಿಸಿದ್ದು, ಇದರಲ್ಲಿ 'ಪರಿವಾರ ನಾಯಕ' ಜಾತಿಯನ್ನು ಮಾತ್ರ ಹಿಂದುಳಿದ ವರ್ಗಗಳ ಪಟ್ಟಿಯಿಂದ ತೆಗೆದುಹಾಕಿದೆ. ಹಾಗಾಗಿ ತಹಸೀಲ್ದಾರ್ ಅವರು ಯಾವುದೇ ಕಾರಣಕ್ಕೂ ಪರಿವಾರ ಸಮುದಾಯಕ್ಕೆ 'ನಾಯಕ' ಎಂದು ಜಾತಿ ಪ್ರಮಾಣ ಪತ್ರ ನೀಡಬಾರದು. ಈ ಸಂಬಂಧ ಮಾ.31 ರಂದು ಜಿಲ್ಲಾಧಿಕಾರಿಗಳಿಗೆ ಮನವಿ ಕೂಡ ಸಲ್ಲಿಸಿದ್ದೇನೆ ಎಂದು ತಿಳಿಸಿದರು.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜಾತಿ ಪ್ರಮಾಣ ಪತ್ರವನ್ನು ಚುನಾವಣೆಯಲ್ಲಿ ಸ್ಪರ್ಧಿಸುವ ಉದ್ದೇಶಕ್ಕಾಗಿ ನೀಡಬಾರದು. ಎರಡು ಜಾತಿ ಪ್ರಮಾಣ ಪತ್ರ ನೀಡಲು ಅವಕಾಶವಿಲ್ಲ ಎಂದರು. ಆದಿವಾಸಿ ಸಮುದಾಯದ ಮುಖಂಡರಾದ ಮಾದಯ್ಯ, ಜಯಚಂದ್ರ, ಗೋಕುಲ್, ರಮೇಶ್, ತಿಮ್ಮಯ್ಯ ಗೋಷ್ಠಿಯಲ್ಲಿದ್ದರು.

ಶ್ರೀ ಶಿವಕುಮಾರ ಶ್ರೀಗಳ ಜಯಂತಿ ಅಂಗವಾಗಿ ರಕ್ತದಾನ



ಮೈಸೂರು, ಏ.1– ಎಲ್ಲಾ ದಾನಗಳಿಗಿಂತ ಅನ್ನದಾನ, ವಿದ್ಯಾದಾನ ಶ್ರೇಷ್ಠವಾದುದು, ಇಂತಹ ಸತ್ಕಾರ್ಯಕ್ಕೆ ಸಾಕ್ಷಿಯಾಗಿದ್ದ ಸಿದ್ದಗಂಗಾ ಶ್ರೀಗಳು ಕಲಿಯುಗದ ನಡೆದಾಡುವ ದೇವರು ಎಂದೇ ಬಿಂಬಿತರಾಗಿದ್ದರು ಎಂದು ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಹೇಳಿದರು.

ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ ಶ್ರೀ ಶಿವಕುಮಾರ ಮಹಾಸ್ವಾಮಿಗಳ ಭಕ್ತ ವೃಂದ ಹಾಗೂ ಜೀವಧಾರ ರಕ್ತ ನಿಧಿ ಕೇಂದ್ರದ ಸಹಯೋಗದೊಂದಿಗೆ ಶ್ರೀ ಶಿವಕುಮಾರ ಮಹಾಸ್ವಾಮಿಗಳ 116ನೇ ಜಯಂತಿ ಅಂಗವಾಗಿ ಶ್ರೀಗಳ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ, 40 ಮಂದಿ ಭಕ್ತಾದಿಗಳು ಸ್ವಯಂ ಪ್ರೇರಿತ ರಕ್ತದಾನ ಮಾಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶ್ರೀಗಳು ಅನ್ನದಾನದ ಜತೆಗೆ ವಿದ್ಯಾದಾನವನ್ನೂ ನೀಡಿದ ಮಹಾನ್ ಮಾನವತಾವಾದಿ, ಅವರ ಆದರ್ಶಗಳನ್ನು ಎಲ್ಲರೂ ಅಳವಡಿಸಿಕೊಂಡು ಸಮಾಜದ ಏಳಿಗೆಗೆ ಶ್ರಮಿಸಬೇಕು. ಬಸವಣ್ಣನವರ ನಂತರದ ಎರಡನೇ ಯುಗಪುರುಷ ತುಮಕೂರಿನ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ. ಬಸವಣ್ಣವರು ದಾಸೋಹ ಪರಿಕಲ್ಪನೆ ಪ್ರತಿಪಾದಿಸಿದರೆ, ಶಿವಕುಮಾರ ಸ್ವಾಮೀಜಿ ಅದನ್ನು ಅನುಷ್ಠಾನಗೊಳಿಸಿದರು ಎಂದರು. ಇದೇ ಸಂದರ್ಭದಲ್ಲಿ ನಿವೃತ್ತ ಜಿಲ್ಲಾ ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಲಯನ್ ನಾಗೇಶ್ ಮೂರ್ತಿ, ವಿಜಿ, ಸದಾಶಿವ, ರಶ್ಮಿ, ರೇವಜಿತ್, ಶಾರದಾ, ಕೆಂಪಣ್ಣ, ಗಂಗಾ, ಮಧು ಹಾಗೂ ಇನ್ನಿತರರು ಭಾಗವಹಿಸಿದ್ದರು.

ವೀಕೆಂಡ್ ಟ್ರಿಪ್‌ಗೆ ಹೋಗಿದ್ದ ಬೆಂಗಳೂರಿನ ಇಬ್ಬರು ಯುವತಿಯರು, ಓರ್ವ ಯುವಕ ನೀರುಪಾಲು


ಚಿಕ್ಕಬಳ್ಳಾಪುರ, ಏ.1– ವೀಕೆಂಡ್ ಟ್ರಿಪ್‌ಗೆ ತೆರಳಿದ್ದ ಬೆಂಗಳೂರಿನ ಇಬ್ಬರು



ಯುವತಿಯರು ಹಾಗೂ ಓರ್ವ ಯುವಕ ಚಿಕ್ಕಬಳ್ಳಾಪುರದ ಶ್ರೀನಿವಾಸ ಸಾಗರ ಡ್ಯಾಂನಲ್ಲಿ ಮುಳುಗಿ ಸಾವನ್ನಪ್ಪಿರುವ ದಾರುಣ ಘಟನೆ ಶನಿವಾರ ನಡೆದಿದೆ.

ಒಟ್ಟು 6 ವಿದ್ಯಾರ್ಥಿಗಳು ಇಂದು ಬೆಂಗಳೂರಿನಿಂದ ಶ್ರೀನಿವಾಸ ಸಾಗರ ಡ್ಯಾಂ ಟ್ರಿಪ್‌ಗೆ ಹೋಗಿದ್ದು, ಈ ವೇಳೆ ಈಜಲು ನೀರಿಗೆ ಇಳಿದಿದ್ದ ಮೂವರು ವಿದ್ಯಾರ್ಥಿಗಳು ನೀರು ಪಾಲಾಗಿದ್ದಾರೆ. ಮೃತರನ್ನು ಪೂಜಾ, ರಾಧಿಕಾ ಹಾಗೂ ಇಮ್ರಾನ್ ಎಂದು ಗುರುತಿಸಲಾಗಿದೆ. ಬೆಂಗಳೂರಿನಲ್ಲಿ ಡಿ ಫಾರ್ಮಸಿ ಓದುತ್ತಿದ್ದ ಈ ವಿದ್ಯಾರ್ಥಿಗಳು ಬೈಕ್‌ನಲ್ಲಿ ಶ್ರೀನಿವಾಸ ಸಾಗರ ಡ್ಯಾಂಗೆ ತೆರಳಿದ್ದು, ಮಧ್ಯಾಹ್ನದ ವೇಳೆ ಡ್ಯಾಮ್‌ನಲ್ಲಿ ಈಜಲು ಮುಂದಾಗಿದ್ದಾರೆ. ಈ ವೇಳೆ ಡ್ಯಾಮ್‌ನ ಒಳಗಿದ್ದ ಕಲ್ಲಿನ ಮೇಲೆ ನಿಂತುಕೊಂಡು ಒಬ್ಬರನ್ನೊಬ್ಬರು ಕೈ ಹಿಡಿದುಕೊಂಡು ಆಳವಿರುವ ಪ್ರದೇಶಕ್ಕೆ ಹೋಗಿದ್ದಾರೆ. ಆದರೆ, ಈ ವೇಳೆ ಒಬ್ಬರು ಕಾಲುಜಾರಿ ಬಿದ್ದಿದ್ದಾರೆ. ಅವರನ್ನು ರಕ್ಷಣೆ ಮಾಡಲು ಎಲ್ಲರೂ ಕೈ– ಕೈ ಹಿಡಿದುಕೊಂಡು ಸರಪಳಿ ರೀತಿಯಲ್ಲೂ ಮುಂದಾಗಿದ್ದಾರೆ. ಆದರೆ, ಈ ವೇಳೆ ಮೊದಲು ಕಾಲು ಜಾರಿ ಬಿದ್ದ ವಿದ್ಯಾರ್ಥಿನಿಯ ಜೊತೆಗೆ ಮತ್ತಿಬ್ಬರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಉಳಿದಂತೆ ಇನ್ನು ಮೂವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಚುನಾವಣಾಧಿಕಾರಿಗಳ ವಶಕ್ಕೆ ಸರ್ಕಾರಿ ಅತಿಥಿ ಗೃಹಗಳು





ಮೈಸೂರು, ಏ. 1(ಆರ್‌ಕೆ)– ಕರ್ನಾಟಕ ವಿಧಾನಸಭಾ ಚುನಾವಣಾ ವೇಳಾಪಟ್ಟಿ ಪ್ರಕಟವಾದ ದಿನದಿಂದಲೇ ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿರುವುದರಿಂದ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿರುವ ಎಲ್ಲಾ ಸರ್ಕಾರಿ ಅತಿಥಿ ಗೃಹಗಳು, ಐಬಿ, ಟಿಬಿಗಳನ್ನು ತಮ್ಮ ವಶಕ್ಕೆ ಪಡೆದಿದ್ದಾರೆ.


ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಸರ್ಕಾರಿ ಅತಿಥಿ ಗೃಹಗಳಲ್ಲಿ ಅನಧಿಕೃತ ವ್ಯಕ್ತಿಗಳ ವಾಸ್ತವ್ಯ, ಖಾಸಗಿ ಸಭೆ–ಸಮಾರಂಭಗಳು, ವಾಹನಗಳ ನಿಲುಗಡೆ, ಚುನಾವಣಾ ಸಂಬಂಧಿತ ಅಧಿಕಾರಿಗಳು, ಸಿಬ್ಬಂದಿಗಳನ್ನು ಹೊರತುಪಡಿಸಿ ಬೇರೆಯವರ ಪ್ರವೇಶವನ್ನು ನಿಷೇಧಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯ ಚಾಮುಂಡಿ ಗೆಸ್ಟ್ ಹೌಸ್, ಹುಣಸೂರು ರಸ್ತೆಯ ಜಲದರ್ಶಿನಿ ಅತಿಥಿ ಗೃಹ, ನಜರ್‌ಬಾದ್‌ನ ಸರ್ಕಾರಿ ಅತಿಥಿ ಗೃಹ, ರಾಜ್ಯ ಲೋಕೋಪಯೋಗಿ ಇಲಾಖೆ, ಕೇಂದ್ರ ಲೋಕೋಪಯೋಗಿ ಇಲಾಖೆ ಅತಿಥಿ ಗೃಹಗಳನ್ನು ತಮ್ಮ ವಶಕ್ಕೆ ಪಡೆದಿರುವ ಡಾ. ಕೆ.ವಿ. ರಾಜೇಂದ್ರ, ಅವುಗಳ ಗೇಟ್‌ಗಳಿಗೆ ಬೀಗ ಹಾಕಿಸಿ, ಬಂದ್ ಮಾಡಿ ಚುನಾವಣಾ ಪ್ರಕ್ರಿಯೆಗಳಲ್ಲಿ ನಿರತರಾಗಿರುವ ಅಧಿಕಾರಿಗಳು, ಸಿಬ್ಬಂದಿಗಳ ಕಾರ್ಯ ಹಾಗೂ ವಾಸ್ತವ್ಯಕ್ಕೆ ಬಳಸಿಕೊಳ್ಳಲು ತಯಾರಿ ನಡೆಸುತ್ತಿದ್ದಾರೆ.

ಸರ್ಕಾರಿ ಅತಿಥಿ ಗೃಹಗಳಲ್ಲಿರುವ ಶಾಸಕರು, ಸಂಸದರು ಹಾಗೂ ವಿಧಾನಪರಿಷತ್ ಸದಸ್ಯರ ಕಚೇರಿ ನಾಮಫಲಕಗಳ ಪೇಪರ್ ಅಂಟಿಸಿ ಮರೆಮಾಡಲಾಗಿದ್ದು, ಮೇಯರ್, ಉಪ ಮೇಯರ್, ನಿಗಮ–ಮಂಡಳಿ ಅಧ್ಯಕ್ಷರುಗಳ ಕಚೇರಿ ನಾಮಫಲಕಗಳನ್ನು ಕಾಣದಂತೆ ಮುಚ್ಚಿಸಲಾಗಿದೆ.

ವರುಣಾಕ್ಕೆ ವಿಜಯೇಂದ್ರ, ಅಮಿತ್ ಶಾ... ಯಾರೇ ಬರಲಿ ಸಿದ್ದರಾಮಯ್ಯ ಗೆಲುವು ಖಚಿತ

ಕ್ಷೇತ್ರದ ಕಾಂಗ್ರೆಸ್ ವೀರಶೈವ ಲಿಂಗಾಯತ ಮುಖಂಡರ ವಿಶ್ವಾಸ



ಮೈಸೂರು,ಏ.1(ಪಿಎಂ)– ವರುಣಾ ಕ್ಷೇತ್ರದಲ್ಲಿ ಬಿಜೆಪಿಯಿಂದ ಸ್ಪರ್ಧಿಸಲು ಯಡಿಯೂರಪ್ಪ ಪುತ್ರ ವಿಜಯೇಂದ್ರ ಅಥವಾ ಬಿಜೆಪಿ ರಾಷ್ಟ್ರೀಯ ನಾಯಕ ಅಮಿತ್ ಶಾ ಯಾರೇ ಬಂದರೂ ಮಾಜಿ ಮುಖ್ಯಮಂತ್ರಿಗಳೂ ಆದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯನವರು 50 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಜಯ ಸಾಧಿಸಲಿದ್ದಾರೆ ಎಂದು ವರುಣಾ ಕ್ಷೇತ್ರದ ವೀರಶೈವ ಲಿಂಗಾಯತ ಮುಖಂಡರೂ ಆದ ಕ್ಷೇತ್ರದ ಕಾಂಗ್ರೆಸ್ ಮುಖಂಡರು ವಿಶ್ವಾಸ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಕಾರ್ಯದರ್ಶಿ ವರುಣಾ ಮಹೇಶ್, ಸಿದ್ದರಾಮಯ್ಯನವರ ಜನಪರ ಯೋಜನೆಗಳು ಹಾಗೂ ಅವರ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯ ಕ್ಷೇತ್ರದ ಶಾಸಕರಾಗಿ ಮಾಡಿದ ಜನಪರ ಕಾರ್ಯಗಳನ್ನು ಮೆಚ್ಚಿ ನೂರಾರು ಮಂದಿ ವೀರಶೈವ ಲಿಂಗಾಯತ ಮುಖಂಡರು ಸದ್ಯದಲ್ಲೇ ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗಲಿದ್ದಾರೆ ಎಂದರು.

ಸಿದ್ದರಾಮಯ್ಯನವರು 2013ರಲ್ಲಿ ವರುಣಾದಿಂದ ಆಯ್ಕೆಯಾಗಿ ಮುಖ್ಯಮಂತ್ರಿಗಳಾಗಿ ಜನಪರ ಯೋಜನೆಗಳನ್ನು ನೀಡಿ ನುಡಿದಂತೆ ನಡೆದಿದ್ದಾರೆ. ಇಡೀ ರಾಜ್ಯದ ಜನತೆ ಅವರ ಆಡಳಿತ ವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದೆ. ಅಂತೆಯೇ ವರುಣಾ ಕ್ಷೇತ್ರಕ್ಕೂ ಸಾವಿರಾರು ಕೋಟಿ ಅನುದಾನದ ಮೂಲಕ ಮೂಲಸೌಲಭ್ಯ ಕಲ್ಪಿಸಿ, ಕ್ಷೇತ್ರದ ಅಭಿವೃದ್ಧಿಗೆ ನಾಂದಿ ಹಾಡಿದ್ದಾರೆ. ಸಿದ್ದರಾಮಯ್ಯನವರು ಮತ್ತೆ ವರುಣಾದಿಂದ ಸ್ಪರ್ಧಿಸಿ ಆಯ್ಕೆಯಾಗುವ ಮೂಲಕ ಮತ್ತೊಮ್ಮೆ ಮುಖ್ಯಮಂತ್ರಿ ಆಗಬೇಕೆಂಬುದು ಕ್ಷೇತ್ರದ ಎಲ್ಲಾ ಸಮುದಾಯಗಳ ಒತ್ತಾಸೆಯಾಗಿದೆ ಎಂದು ತಿಳಿಸಿದರು.


2018ರಲ್ಲಿ ಸಿದ್ದರಾಮಯ್ಯನವರ ಪುತ್ರ ಡಾ.ಯತೀಂದ್ರ ಸಿದ್ದರಾಮಯ್ಯನವರು 58,616 ಮತಗಳ ಅಂತರದಿಂದ ವರುಣಾ ಕ್ಷೇತ್ರದಲ್ಲಿ ಗೆಲುವು ಸಾಧಿಸಿದರು. ಅಲ್ಲದೆ, ಇವರೂ ಕ್ಷೇತ್ರದ ಅಭಿವೃದ್ಧಿಗೆ ಒತ್ತು ಕೊಟ್ಟರು. ಕ್ಷೇತ್ರದ ಜನತೆಯೊಂದಿಗೆ ಉತ್ತಮ ಒಡನಾಟ ಹೊಂದಿರುವ ಯತೀಂದ್ರ ಅವರೂ 450 ಕೋಟಿ ರೂ.ಗಳಿಗೂ ಅಧಿಕ ಅನುದಾನ ತಂದು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದರು.

ಸ್ಪರ್ಧಿಸಲು ವಿಜಯೇಂದ್ರಗೆ ಸ್ವಾಗತ: ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಪುತ್ರ ವಿಜಯೇಂದ್ರ ಅಥವಾ ಬಿಜೆಪಿ ರಾಷ್ಟ್ರ ನಾಯಕ ಅಮಿತ್ ಶಾ ಸೇರಿದಂತೆ ಯಾರೇ ಬಂದರೂ ವರುಣಾದಲ್ಲಿ ಸಿದ್ದರಾಮಯ್ಯ ಆಯ್ಕೆ ಖಚಿತ. ಬಿಜೆಪಿ ಕಾರ್ಯಕರ್ತರು ವರುಣಾದಲ್ಲಿ ವಿಜಯೇಂದ್ರರನ್ನು ಸ್ಪರ್ಧಿಸುವಂತೆ ಒತ್ತಾಯ ಮಾಡಿದ್ದಾರೆ. ಆದರೆ ಅವರು ಸ್ಪರ್ಧಿಸುವುದಿಲ್ಲವೆಂದು ತಮ್ಮ ಹೈಕಮಾಂಡ್ ಇಚ್ಛೆಗೆ ಬಿಟ್ಟಿದ್ದಾರೆ. ಆದಾಗ್ಯೂ ಅವರ ವರಿಷ್ಠರು ಅವರನ್ನೇ ಸ್ಪರ್ಧೆಗೆ ಇಳಿಸಿದರೂ ಕಾಂಗ್ರೆಸ್‌ಗೆ ಯಾವುದೇ ಆತಂಕವಿಲ್ಲ. ವಿಜಯೇಂದ್ರರನ್ನು ವರುಣಾದಲ್ಲಿ ಸ್ಪರ್ಧಿಸಲು ನಾವೇ ಸ್ವಾಗತ ಮಾಡುತ್ತೇವೆ ಎಂದು ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದರು.

ವರುಣಾದಲ್ಲಿ ವೀರಶೈವ ಲಿಂಗಾಯತ ಸಮುದಾಯ ಸುಮಾರು 63 ಸಾವಿರ ಜನಸಂಖ್ಯೆ ಹೊಂದಿದೆ. ನಾಯಕ ಸಮುದಾಯ 30 ಸಾವಿರಕ್ಕೂ ಹೆಚ್ಚಿದೆ. ಕುರುಬ ಸಮುದಾಯ 33 ಸಾವಿರ, ಪರಿಶಿಷ್ಟ ಜಾತಿ 59 ಸಾವಿರ, ಒಕ್ಕಲಿಗ ಸಮುದಾಯ 12 ಸಾವಿರ ಹಾಗೂ ಇತರೆ 12ರಿಂದ 13 ಸಾವಿರ ಜನಸಂಖ್ಯೆ ಇದೆ. ಎಲ್ಲಾ ಸಮುದಾಯಗಳು ಸಿದ್ದರಾಮಯ್ಯರನ್ನು ಬೆಂಬಲಿಸುವ ವಿಶ್ವಾಸವಿದೆ ಎಂದರು. ವರುಣಾ ಕ್ಷೇತ್ರದ ಕಾಂಗ್ರೆಸ್ ಮತ್ತು ವೀರಶೈವ ಲಿಂಗಾಯತ ಮುಖಂಡರಾದ ಪೂರ್ಣಚಂದ್ರ, ನಂಜುಂಡಸ್ವಾಮಿ, ದೇವಲಾಪುರ ಸಿ.ಮಹೇಶ್, ಹಡಜನ ಮಂಜುನಾಥ್, ಹುಳಿಮಾವು ಪರಶಿವಮೂರ್ತಿ, ದಾಸನೂರು ನಾಗೇಶ್, ಕಿರಾಳ ಗುರುಸ್ವಾಮಿ ಮತ್ತಿತರರು ಗೋಷ್ಠಿಯಲ್ಲಿದ್ದರು.













ಮಳೆ ಅಡ್ಡಿ: ಕೆಕೆಆರ್ ವಿರುದ್ಧ ಪಂಜಾಬ್‌ಗೆ ಜಯ



ಸ್ಕೋರ್ ವಿವರ
ಪಂಜಾಬ್ ಕಿಂಗ್ಸ್
191/5
ಕೋಲ್ಕತ್ತಾ ನೈಟ್ ರೈಡರ್ಸ್
146/7
(ಡಿಎಲ್‌ಎಸ್ ಪ್ರಕಾರ ಪಂಜಾಬ್‌ಗೆ 7 ರನ್ ಜಯ)

ಮೊಹಾಲಿ, ಏ.1– ಮಳೆ ಬಾಧಿತ ಪಂದ್ಯದಲ್ಲಿ ಭಾನುಕಾ ರಾಜಪಕ್ಸೆ ಅರ್ಧಶತಕ ಹಾಗೂ ಹರ್ಷದೀಪ್ ಸಿಂಗ್ ಅವರ ಕರಾರುವಾಕ್ ಬೌಲಿಂಗ್ ದಾಳಿ ನೆರವಿನಿಂದ ಪಂಜಾಬ್ ಕಿಂಗ್ಸ್ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ಡಕ್‌ವರ್ತ್ ಲೂಯಿಸ್ ನಿಯಮದ ಪ್ರಕಾರ 7 ರನ್‌ಗಳಿಂದ ಜಯ ಗಳಿಸಿದೆ.

192 ರನ್ ಟಾರ್ಗೆಟ್ ಪಡೆದ ಕೆಕೆಆರ್ 16 ಓವರ್ ಮುಕ್ತಾಯಕ್ಕೆ 7 ವಿಕೆಟ್ ನಷ್ಟಕ್ಕೆ 146 ರನ್ ಸಿಡಿಸಿತ್ತು. ಈ ವೇಳೆ ಮಳೆ ಬಂದು ಪಂದ್ಯ ಸ್ಥಗಿತಗೊಂಡು ಡಕ್‌ವರ್ತ್ ನಿಯಮದನ್ವಯ ಕೆಕೆಆರ್ 7 ರನ್ ಹಿನ್ನಡೆ ಅನುಭವಿಸಿತ್ತು. ಕೆಲ ಹೊತ್ತು ಕಾದರೂ ಪಂದ್ಯ ಮತ್ತೆ ಆರಂಭ ಗೊಳ್ಳಲಿಲ್ಲ. ಹೀಗಾಗಿ ಡಕ್‌ವರ್ತ್ ನಿಯಮದ ಪ್ರಕಾರ ಪಂಜಾಬ್ ಕಿಂಗ್ಸ್ ಗೆಲುವು ದಾಖಲಿಸಿತು.

ಇಲ್ಲಿನ ಪಿಸಿಎ ಬಿಂದ್ರಾ ಮೈದಾನದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ಕಿಂಗ್ಸ್ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 191 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಪ್ರಭಾಸಿಮ್ರನ್ 23 ರನ್ ಗಳಿಸಿ ಬಹುಬೇಗ ಔಟಾಗಿ ಹಿಂತಿರುಗಿದರು. ಈ ವೇಳೆ 2ನೇ ವಿಕೆಟ್‌ಗೆ ಜೊತೆಯಾದ ನಾಯಕ ಶಿಖರ್ ಧವನ್ ಹಾಗೂ ಭಾನುಕಾ ರಾಜಪಕ್ಸೆ 86ರನ್‌ಗಳ ಜೊತೆಯಾಟ ವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಬಿರುಸಿನ ಆಟವಾಡಿದ ರಾಜಪಕ್ಸೆ ಕೇವಲ 32 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸರ್ ಒಳಗೊಂಡ 50 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ತಾಳ್ಮೆಯ ಆಟವಾಡಿದ ಶಿಖರ್ ಧವನ್ 6 ಬೌಂಡರಿ ಒಳಗೊಂಡ 40 ರನ್ ಗಳಿಸಿದರು. ಉಳಿದಂತೆ ಜಿತೇಶ್ ಶರ್ಮಾ 21, ಸಿಕಂದರ್ ರಾಜಾ 16, ಸ್ಯಾಮ್ ಕರ್ರನ್ 26, ಶಾರೂಖ್ ಖಾನ್ 11 ರನ್ ಗಳಿಸಿದರು. ಕೋಲ್ಕತ್ತಾ ಪರ ಸೌಥಿ 2, ಉಮೇಶ್ ಯಾದವ್, ಸುನೀಲ್ ನರೇನ್ ಹಾಗೂ ವರುಣ್ ಚಕ್ರವರ್ತಿ ತಲಾ ಒಂದೊಂದು ವಿಕೆಟ್ ಕಬಳಿಸಿದರು.

192 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೆಕೆಆರ್‌ಗೆ ಉತ್ತಮ ಆರಂಭ ದೊರೆಯಲಿಲ್ಲ. ತಂಡದ ಮೊತ್ತ 29 ರನ್ ಆಗುವಷ್ಟರಲ್ಲೇ ಮನ್‌ದೀಪ್ ಸಿಂಗ್ 2 ಹಾಗೂ ಅನುಕುಲ್ ರಾಯ್ 4, ರಹೆಮಾನುಲ್ಲಾ ಗುರ್ಬಾಜ್ 27 ರನ್ ಗಳಿಸಿ ಔಟಾದರು. ಈ ವೇಳೆ ಜೊತೆಯಾದ ವೆಂಕಟೇಶ್ ಅಯ್ಯರ್ ಹಾಗೂ ನಾಯಕ ನಿತೀಶ್ ರಾಣಾ ಕೆಕೆಆರ್‌ಗೆ ಆಸರೆ ಯಾದರು. ಆದರೆ ರಾಣಾ 24 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಆಂಡ್ರೆ ರಸೆಲ್ 19 ಡೆತಗಳಲ್ಲಿ 2 ಸಿಕ್ಸರ್, 3ಬೌಂಡರಿ ಒಳಗೊಂಡ 35 ರನ್ ಪೇರಿಸಿ ಪೆವಿಲಿಯನ್ ಸೇರಿಕೊಂಡರು. ಇತ್ತ ವೆಂಕಟೇಶ್ ಅಯ್ಯರ್ 28 ಎಸೆತದಲ್ಲಿ 34 ರನ್ ಸಿಡಿಸಿದರು.

ಶಾರ್ದೂಲ್ ಠಾಕೂರ್ ಹಾಗೂ ಸುನಿಲ್ ನರೈನ್ ಸಿಕ್ಸರ್ ಸಿಡಿಸಿದ ಬೆನ್ನಲ್ಲೇ ಮಳೆ ವಕ್ಕರಿಸಿತು. ಆದರೆ ಪಂದ್ಯ ಮತ್ತೆ ಆರಂಭಿಸಲು ಮಳೆ ಅನುವು ಮಾಡಿಕೊಡಲಿಲ್ಲ. ಹೀಗಾಗಿ ಡಕ್‌ವರ್ತ್ ನಿಯಮದ ಅನ್ವಯ ಪಂಜಾಬ್ ಕಿಂಗ್ಸ್ 7 ರನ್ ಗೆಲುವು ಘೋಷಿಸಲಾಯಿತು. ಪಂಜಾಬ್ ಪರ ಹರ್ಷದೀಪ್ ಸಿಂಗ್ 3, ಸ್ಯಾಮ್ ಕರ್ರನ್, ನಾಥನ್ ಇಲ್ಲಿಸ್, ಸಿಕಂದರ್ ರಾಜಾ ಹಾಗೂ ರಾಹುಲ್ ಚಹರ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಪಂಜಾಬ್ ಪರ ಹರ್ಷ ದೀಪ್ ಸಿಂಗ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.



ಲಖನೌ ವಿರುದ್ಧ ಮುಗ್ಗರಿಸಿದ ಡೆಲ್ಲಿ ಕ್ಯಾಪಿಟಲ್ಸ್

ಸ್ಕೋರ್ ವಿವರ
ಲಕ್ನೋ ಸೂಪರ್ ಜೈಂಟ್ಸ್
193/6
ಡೆಲ್ಲಿ ಕ್ಯಾಪಿಟಲ್ಸ್
143/9
(ಲಕ್ನೋಗೆ 50 ರನ್ ಜಯ)





ಮಾರ್ಕ್ ವುಡ್
ಓವರ್
4
(14 ರನ್)
ವಿಕೆಟ್
5

ಲಖನೌ, ಏ.1– ಮಾರ್ಕ್ ವುಡ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್, ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ 50 ರನ್‌ಗಳ ಅಮೋಘ ಜಯ ಸಾಧಿಸಿದೆ. ಆ ಮೂಲಕ ಲಖನೌ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಇಲ್ಲಿನ ಭಾರತರತ್ನ ಶ್ರೀಅಟಲ್ ಬಿಹಾರಿ ವಾಜಪೇಯಿ ಏಕತಾ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಖನೌ ಸೂಪರ್ ಜೈಂಟ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 193 ರನ್ ಗಳಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ನಾಯಕ ಕೆ.ಎಲ್.ರಾಹುಲ್ 8 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ಜೊತೆಯಾದ ಕೈಲ್ ಮೇಯರ್ಸ್ ಹಾಗೂ ದೀಪಕ್ ಹೂಡಾ 2ನೇ ವಿಕೆಟ್‌ಗೆ 78 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 17 ರನ್ ಗಳಿಸಿದ ದೀಪಕ್ ಹೂಡಾ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಮಿಂಚಿನ ಬ್ಯಾಟಿಂಗ್ ಮಾಡಿದ ಮೇಯರ್ಸ್ 38 ಎಸೆತಗಳಲ್ಲಿ 7 ಸಿಕ್ಸರ್, 2 ಬೌಂಡರಿ ಒಳಗೊಂಡ 73ರನ್ ಗಳಿಸಿ ಅಕ್ಷರ್ ಪಟೇಲ್‌ಗೆ ವಿಕೆಟ್ ಒಪ್ಪಿಸಿದರು. ನಂತರ ಬಂದ ಕೃನಾಲ್ ಪಾಂಡ್ಯ 15, ಸ್ಟೋಯಿನಿಸ್ 12 ರನ್ ಗಳಿಸಿದರೇ, ನಿಕೋಲಸ್ ಪೂರಾನ್ 36, ಆಯುಷ್ ಬಡೋನಿ 18 ರನ್ ಗಳಿಸಿದರು. ಡೆಲ್ಲಿ ಪರ ಬೌಲಿಂಗ್‌ನಲ್ಲಿ ಚೇತನ್ ಸಕಾರಿಯಾ, ಖಲೀಲ್ ಅಹಮದ್ ತಲಾ 2, ಅಕ್ಷರ್ ಪಟೇಲ್ ಹಾಗೂ ಕುಲದೀಪ್ ಯಾದವ್ ತಲಾ ಒಂದೊಂದು ವಿಕೆಟ್ ಪಡೆದರು.

194 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 143 ರನ್ ಗಳಿಸುವ ಮೂಲಕ 50 ರನ್‌ಗಳ ಸೋಲು ಅನುಭವಿಸಿತು. ತಂಡದ ಪರ ನಾಯಕ ಡೇವಿಡ್ ವಾರ್ನರ್ 56, ಪೃಥ್ವಿ ಶಾ 12, ಅಕ್ಷರ್ ಪಟೇಲ್ 16, ರಿಲೇ ರೂಸೋ 30 ರನ್ ಗಳಿಸಿದ್ದು ಬಿಟ್ಟರೇ ಉಳಿದವರಿಂದ ನಿರೀಕ್ಷಿತ ಪ್ರದರ್ಶನ ಮೂಡಿ ಬರಲಿಲ್ಲ. ಪಂದ್ಯದಲ್ಲಿ ಮಾರಕ ಬೌಲಿಂಗ್ ದಾಳಿ ಸಂಘಟಿಸಿದ ಮಾರ್ಕ್ ವುಡ್ 14 ರನ್ ನೀಡಿ 5 ಪ್ರಮುಖ ವಿಕೆಟ್ ಪಡೆದರು. ಉಳಿದಂತೆ ಆವೇಶ್ ಖಾನ್, ರವಿ ಬಿಷ್ಣೋಯಿ ತಲಾ 2 ವಿಕೆಟ್ ಉರುಳಿಸಿದರು. ಲಖನೌ ಪರ ಮಾರ್ಕ್ ವುಡ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಇಂದಿನ ಪಂದ್ಯಗಳು

[ಏಪ್ರಿಲ್ 02]

ಹೈದರಾಬಾದ್ V/S ರಾಜಸ್ಥಾನ್
ಸ್ಥಳ: ರಾಜೀವ್ ಗಾಂಧಿ ಕ್ರೀಡಾಂಗಣ, ಹೈದರಾಬಾದ್
ಸಮಯ: ಮಧ್ಯಾಹ್ನ 3.30

ಬೆಂಗಳೂರು V/S ಮುಂಬೈ
ಸ್ಥಳ: ಎಂ.ಚಿನ್ನಸ್ವಾಮಿ ಕ್ರೀಡಾಂಗಣ, ಬೆಂಗಳೂರು
ಸಮಯ: ರಾತ್ರಿ 7.30

ಡಾ. ಬಾಬು ಜಗಜೀವನ ರಾಮ್, ಡಾ. ಅಂಬೇಡ್ಕರ್ ಜಯಂತಿಯಲ್ಲಿ ರಾಜಕಾರಣಿಗಳ ಭಾಷಣಕ್ಕೆ ಅವಕಾಶವಿಲ್ಲ

● ಆದರೆ ಮಹನೀಯರ ಜಯಂತಿ ಅರ್ಥಪೂರ್ಣ ಆಚರಣೆಗೆ ಜಿಲ್ಲಾಡಳಿತ ನಿರ್ಧಾರ
● ಚುನಾವಣಾ ನೀತಿ ಸಂಹಿತೆ ಜಾರಿ ಹಿನ್ನೆಲೆಯಲ್ಲಿ ಕೆಲ ನಿರ್ಬಂಧ



ಮೈಸೂರು,ಏ.1(ಎಂಟಿವೈ)– ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಏ.5ರಂದು ಡಾ.ಬಾಬು ಜಗಜೀವನ ರಾಮ್ ಹಾಗೂ ಏ.14ರಂದು ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಆಚರಿಸಲು ಸಹಕಾರ ನೀಡುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಮನವಿ ಮಾಡಿದ್ದಾರೆ.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ವಿವಿಧಸಂಘಟನೆಗಳ ಮುಖಂಡರೊಂದಿಗೆ ಸಭೆ ನಡೆಸಿ ಮಾತನಾಡಿದ ಅವರು, ಈಗಾಗಲೇ ರಾಜ್ಯದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದೆ. ಚುನಾವಣಾ ಆಯೋಗ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ಈ ಹಿನ್ನೆಲೆಯಲ್ಲಿ ಮಹನೀಯರ ಜಯಂತಿ ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಆಚರಿಸಬೇಕಾಗಿದೆ. ನೀತಿ ಸಂಹಿತೆ ಉಲ್ಲಂಘನೆಯಾಗದಂತೆ, ಎಲ್ಲಿಯೂ ಲೋಪವಾಗದಂತೆ ಕಾರ್ಯಕ್ರಮ ಆಯೋಜಿಸಬೇಕು. ಇದಕ್ಕೆ ಸಂಘ, ಸಂಸ್ಥೆಗಳ ಸಹಕಾರ ಅಗತ್ಯವಿದೆ ಎಂದರು.

ಜಿಲ್ಲಾಡಳಿತ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಏ.5 ರಂದು ಡಾ.ಬಾಬು ಜಗಜೀವನ ರಾಮ್ ಜಯಂತಿ ಹಾಗೂ ಏ.14ರಂದು ಡಾ.ಬಿ. ಆರ್.ಅಂಬೇಡ್ಕರ್ ಜಯಂತಿಯನ್ನು ಆಚರಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಮಹನೀಯರ ಜಯಂತಿ ಕಾರ್ಯಕ್ರಮದಲ್ಲಿ ಯಾವುದೇ ರಾಜಕೀಯ ಪಕ್ಷಗಳ ಅಭ್ಯರ್ಥಿಗಳನ್ನು ಆಹ್ವಾನಿಸಿ ಭಾಷಣ ಮಾಡಿಸುವುದಕ್ಕೆ ನಿರ್ಬಂಧ ಹೇರಲಾಗಿದೆ. ಮುಖ್ಯ ಭಾಷಣಕಾರರು ರಾಜಕೀಯವಾಗಿ ಮಾತನಾಡಬಾರದು. ಮಹಾನ್ ವ್ಯಕ್ತಿಗಳ ಜಯಂತಿಯನ್ನು ಕೇವಲ ಒಂದು ವರ್ಗ ಮತ್ತು ಒಂದು ಸ್ಥಳಕ್ಕೆ ಸೀಮಿತ ಮಾಡಬಾರದು. ಈ ಮಹಾನ್ ವ್ಯಕ್ತಿಗಳ ತತ್ವ ಹಾಗೂ ಆದರ್ಶಗಳ ಬಗ್ಗೆ ಎಲ್ಲರಿಗೂ ಮನವರಿಕೆ ಮಾಡಬೇಕು. ಎಲ್ಲಾ ಸರ್ಕಾರಿ ನೌಕರರು ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಹಾಜರಿರಬೇಕು. ಆ ಮೂಲಕ ಅರ್ಥಪೂರ್ಣವಾಗಿ ಜಯಂತಿ ಆಚರಿಸಬೇಕು. ಮಹಾನ್ ವ್ಯಕ್ತಿಗಳ ಪುತ್ಥಳಿಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಿ, ಪ್ರತಿದಿನ ಆಚರಣೆ ಮಾಡುವಂತೆ ಸೂಚಿಸಿದರು.

ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮಿಕಾಂತ್ ರೆಡ್ಡಿ, ಜಿ.ಪಂ ಕೆ.ಎಂ.ಗಾಯಿತ್ರಿ, ಎಡಿಸಿ ಕವಿತಾ ರಾಜರಾಂ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ರಂಗೇಗೌಡ ಸೇರಿದಂತೆ ವಿವಿಧ ಸಂಘಟನೆಗಳು ಹಾಗೂ ಸಮುದಾಯದ ಮುಖಂಡರುಗಳು ಪಾಲ್ಗೊಂಡು ವಿವಿಧ ಸಲಹೆ ನೀಡಿದರು.

ಚುನಾವಣೆ ನೀತಿ ಸಂಹಿತೆ ಜಾರಿ ಎಫೆಕ್ಟ್: ಔಷಧ, ಆಂಬುಲೆನ್ಸ್‌ಗಳ ಟೆಂಡರ್ ಪ್ರಕ್ರಿಯೆಯಲ್ಲಿ ವಿಳಂಬ

ಬೆಂಗಳೂರು, ಏ.1– ರಾಜ್ಯ ವಿಧಾನಸಭಾ ಚುನಾವಣೆಗೆ ದಿನಾಂಕ ಘೋಷಣೆಯಾದ ಬೆನ್ನಲ್ಲೇ ಚುನಾವಣಾ ನೀತಿ ಸಂಹಿತೆ ಜಾರಿಯಾಗಿದ್ದು, ಇದರಿಂದಾಗಿ ವಾರ್ಷಿಕ ಔಷಧ ಖರೀದಿ, ಡಯಾಲಿಸಿಸ್ ಮತ್ತು 108 ಆಂಬುಲೆನ್ಸ್‌ಗಳ ಟೆಂಡರ್ ಪ್ರಕ್ರಿಯೆಯಲ್ಲಿ ವಿಳಂಬವಾಗುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಡಿ ರಂದೀಪ್ ಮಾತನಾಡಿ, ಎಲ್ಲಾ ಸೇವೆಗಳು ಬಹುತೇಕ ಉಚಿತ ಮತ್ತು ಆರೋಗ್ಯ ತುರ್ತು ಸೇವೆಯಾಗಿರುವುದರಿಂದ ಚುನಾವಣಾ ನೀತಿ ಸಂಹಿತೆ ಆರೋಗ್ಯ ಯೋಜನೆಗಳ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಈ ಕುರಿತು ಕಾರ್ಯಗಳು ಎಂದಿನಂತೆ ಮುಂದುವರಿಯುತ್ತವೆ. ಆದರೆ, ಟೆಂಡರ್ ಪ್ರಕ್ರಿಯೆಗಳಲ್ಲಿ ವಿಳಂಬವಾಗುವ ಸಾಧ್ಯತೆಗಳಿವೆ ಎಂದು ಹೇಳಿದ್ದಾರೆ.

ನೀತಿ ಸಂಹಿತೆ ಜಾರಿಯು ಆಯುಷ್ಮಾನ್ ಭಾರತ್ ಪ್ರಧಾನ್ ಮಂತ್ರಿ ಜನರೋಗ ಯೋಜನೆ (ABMP JAY)ಗಾಗಿ ಕಾರ್ಡ್‌ಗಳ ವಿತರಣೆಯ ಮೇಲೂ ಬೀರಿದ್ದು, ಚುನಾವಣೆ ಹಿನ್ನೆಲೆಯಲ್ಲಿ ಕಾರ್ಡ್‌ಗಳ ವಿತರಣೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ತಿಳಿದುಬಂದಿದೆ.

ಈ ಕುರಿತು ಪ್ರತಿಕ್ರಿಯೆ ನೀಡಿದ ರಂದೀಪ್ ಅವರು, ಕಾರ್ಡ್ ವಿತರಣೆಯು ತುರ್ತು ಆರೋಗ್ಯ ಯೋಜನೆ ಅಡಿಯಲ್ಲಿ ಬರುವುದರಿಂದ ಕಾರ್ಡ್ ವಿತರಣೆ ಕುರಿತು ಚುನಾವಣಾ ಆಯೋಗ ಪರಿಶೀಲನೆ ನಡೆಸುತ್ತಿದೆ ಎಂದು ಹೇಳಿದ್ದಾರೆ.



ವರುಣಾ ವಿಧಾನಸಭಾ ಕ್ಷೇತ್ರದ ಸುತ್ತೂರಿನಲ್ಲಿ ಶನಿವಾರ ಜಿಲ್ಲಾ ಬಿಜೆಪಿ ಹಿಂದುಳಿದ ಮೋರ್ಚಾ ಸಮಾವೇಶ ನಡೆಯಿತು. ಇದರಲ್ಲಿ ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಮೈಲ್ಯಾಕ್ ಅಧ್ಯಕ್ಷ ರಘು ಕೌಟಿಲ್ಯ, ಜಿಲ್ಲಾ ಗ್ರಾಮಾಂತರ ಬಿಜೆಪಿ ಅಧ್ಯಕ್ಷೆ ಮಂಗಳಾ ಸೋಮಶೇಖರ್, ರಾಜ್ಯ ಹಿಂದುಳಿದ ಮೋರ್ಚಾ ಅಧ್ಯಕ್ಷ ನೆ.ಲ.ನರೇಂದ್ರ ಬಾಬು ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ರಂಗಾಯಣ ಚಿಣ್ಣರ ಮೇಳಕ್ಕೆ ಭಾರೀ ಡಿಮ್ಯಾಂಡು

● ಕೆಲವೇ ಹೊತ್ತಲ್ಲಿ 250 ಅರ್ಜಿ ಖಾಲಿ ಖಾಲಿ
● ರಾತ್ರಿಯಿಂದಲೇ ಅರ್ಜಿ ಪಡೆಯಲು ಸಾಲುಗಟ್ಟಿದ್ದ ಪೋಷಕರು



ಮೈಸೂರು,ಏ.1(ಎಂಟಿವೈ)– ಮೈಸೂರಿನ ರಂಗಾಯಣದಲ್ಲಿ ಪ್ರತಿ ವರ್ಷದಂತೆ ಈ ಬಾರಿಯೂ ಚಿಣ್ಣರ ಮೇಳಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಜನ ರಾತ್ರಿಯಿಂದಲೇ ಸರದಿ ಸಾಲಿನಲ್ಲಿ ನಿಂತುಕೊಂಡು ಅರ್ಜಿ ಪಡೆಯಲು ಮುಗಿಬಿದ್ದರು.

ಈ ಬಾರಿ ಚಿಣ್ಣರ ಮೇಳವನ್ನು 'ನಮ್ಮ ತಾಯಿ ನೆಲ' ಶೀರ್ಷಿಕೆಯಡಿ ಏರ್ಪಡಿಸಲಾಗುತ್ತಿದ್ದು, 7 ವರ್ಷ ತುಂಬಿದ, 14 ವರ್ಷದೊಳಗಿನ 250 ಮಕ್ಕಳಿಗೆ ಮೇಳದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಅರ್ಜಿಗಾಗಿ ನೂರಾರು ಪೋಷಕರು ಮುಗಿಬಿದ್ದರು. ಕೆಲವರು ರಾತ್ರಿಯಿಂದಲೇ ರಂಗಾಯಣದ ಮುಂದೆ ಸರದಿ ಸಾಲಿನಲ್ಲಿ ನಿಂತು ಅರ್ಜಿ ಗಿಟ್ಟಿಸಿದರು. ಬೆಳಗ್ಗೆ 10 ಗಂಟೆಗೆ ರಂಗಾಯಣದ ಕಚೇರಿ ತೆರೆದ ಬಳಿಕ ಸುದಿ ಸಾಲಿನಲ್ಲಿ ನಿಂತಿದ್ದ ಮೊದಲ 250 ಮಂದಿಗೆ ತಲಾ 100 ರೂ. ಅರ್ಜಿ ದರ ಪಡೆದು ವಿತರಿಸಲಾಯಿತು.

ರಂಗಾಯಣದ ಉಪನಿರ್ದೇಶಕಿ ನಿರ್ಮಲಾ ಮಠಪತಿ ನೇತೃತ್ವದಲ್ಲಿ ಪೋಷಕರ ವಿವರ ಪಡೆದು ಚಿಣ್ಣರ ಮೇಳದ ಅರ್ಜಿ ವಿತರಿಸಲಾಯಿತು. ಮೇಳವು ಏ.10ರಿಂದ ಮೇ.5ರವರೆಗೆ ನಡೆಯಲಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ಏ.5 ರ ಸಂಜೆ 5.00 ಗಂಟೆಯೊಳಗೆ ರಂಗಾಯಣದ ಕಚೇರಿಗೆ ಖುದ್ದಾಗಿ ಸಲ್ಲಿಸಬೇಕು. ಚಿಣ್ಣರ ಮೇಳದ ಪ್ರವೇಶ ಶುಲ್ಕ 3 ಸಾವಿರ ರೂ. ನಿಗದಿ ಮಾಡಲಾಗಿದೆ. ಉಪ ನಿರ್ದೇಶಕರು, ರಂಗಾಯಣ ಮೈಸೂರು ಹೆಸರಿಗೆ ಡಿ.ಡಿ.ಯನ್ನು ಅರ್ಜಿಯೊಂದಿಗೆ ಲಗತ್ತಿಸುವುದು. ಮಕ್ಕಳ ಜನ್ಮ ದಿನಾಂಕದ ದೃಢೀಕರಣಕ್ಕಾಗಿ ಆಧಾರ್ ಕಾರ್ಡ್ ಪ್ರತಿ ಅಥವಾ ಹೆಸರು ನಮೂದಿಸಿದ ಜನನ ಪ್ರಮಾಣ ಪತ್ರ ನಕಲು ಪ್ರತಿಯನ್ನು ಅರ್ಜಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸಬೇಕು.

> ಈ ಬಾರಿಯ ಚಿಣ್ಣರ ಮೇಳವನ್ನು 'ನಮ್ಮ ತಾಯಿ ನೆಲ' ಶೀರ್ಷಿಕೆಯಡಿ ಆಚರಿಸಲಾಗುತ್ತಿದೆ. ಏ.10ರಿಂದ ಮೇ.5ರವರೆಗೆ ನಡೆಯಲಿದ್ದು, ಈ ಬಾರಿಯೂ 250 ಮಕ್ಕಳಿಗೆ ಮೇಳದಲ್ಲಿ ಪಾಲ್ಗೊಳ್ಳಲು ಅವಕಾಶವಿದೆ. ಪಾರದರ್ಶಕವಾಗಿ ಮೊದಲು ಬಂದವರಿಗೆ ಆದ್ಯತೆ ಮೇಲೆ ಅರ್ಜಿ ವಿತರಿಸಲಾಗಿದೆ.
> – ನಿರ್ಮಲ ಮಠಪತಿ, ಉಪನಿರ್ದೇಶಕರು, ರಂಗಾಯಣ

ಪರಿಶಿಷ್ಟ ಜಾತಿ ಪಟ್ಟಿಯಿಂದ ಸ್ಪೃಶ್ಯ ಜಾತಿಗಳನ್ನು ಕೈಬಿಡುವ ವಿಚಾರದಲ್ಲಿ

ಮುಖ್ಯ ಕಾರ್ಯದರ್ಶಿಗಳಿಂದ ಸುಪ್ರೀಂಕೋರ್ಟ್ ನಿರ್ದೇಶನ ಉಲ್ಲಂಘನೆ

ಡಾ.ಅಂಬೇಡ್ಕರ್ ಪೀಪಲ್ಸ್ ಪಾರ್ಟಿಯ ಯುವ ಘಟಕದ ರಾಜ್ಯಾಧ್ಯಕ್ಷ ಸಿ.ಎಂ.ಕೃಷ್ಣ ಆರೋಪ



ಮೈಸೂರು,ಏ.1(ಪಿಎಂ)– ಸ್ಪೃಶ್ಯ ಜಾತಿಗಳನ್ನು ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಿಂದ ಕೈಬಿಡುವ ಸಂಬಂಧ ಸುಪ್ರೀಂಕೋರ್ಟ್ ನಿರ್ದೇಶನ ಮತ್ತು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗದ ಆದೇಶವನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಉಲ್ಲಂಘಿಸಿದ್ದಾರೆ ಎಂದು ಡಾ.ಅಂಬೇಡ್ಕರ್ ಪೀಪಲ್ಸ್ ಪಾರ್ಟಿಯ ಯುವ ಘಟಕದ ರಾಜ್ಯಾಧ್ಯಕ್ಷ ಸಿ.ಎಂ.ಕೃಷ್ಣ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ಪೃಶ್ಯ ಜಾತಿಗಳಾದ ಬಂಜಾರ, ಲಂಬಾಣಿ, ಭೋವಿ, ಕೊರಮ ಮತ್ತು ಕೊರಚ ಸಮುದಾಯಗಳನ್ನು ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಿಂದ ಕೈಬಿಡುವಂತೆ ಮಹೇಂದ್ರ ಕುಮಾರ್ ಮಿತ್ರ ನಾನು ಸಿ.ಎಂ.ಕೃಷ್ಣ ಇತರರು ಸುಪ್ರೀಂಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದೆವು. ಈ ಕುರಿತಂತೆ 2020ರ ಫೆ14ರಂದು ಸುಪ್ರೀಂಕೋರ್ಟ್, ಪರಿಶೀಲಿಸಿ ಸಂಬಂಧಿಸಿದ ಪ್ರಾಧಿಕಾರಕ್ಕೆ ಮರಿ ಸಲ್ಲಿಸಲು ಕ್ರಮ ವಹಿಸುವಂತೆ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗಕ್ಕೆ ನಿರ್ದೇಶನ ನೀಡಿತ್ತು ಎಂದರು.

ಅದರಂತೆ 2020ರ ಮಾ.12ರಲ್ಲಿ ರಾಜ್ಯದ ಪರಿಶಿಷ್ಟ ಜಾತಿ ಪಟ್ಟಿಯಿಂದ ಸ್ಪೃಶ್ಯ ಜಾತಿಗಳನ್ನು ಕೈಬಿಡಲು ನಿಯಮಾನುಸಾರ ಪ್ರಸ್ತಾವನೆ ಸಲ್ಲಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗವು ಆದೇಶ ಮಾಡಿತ್ತು. ಆದರೆ ರಾಜಕೀಯ ಪ್ರಭಾವಕ್ಕೆ ಒಳಗಾಗಿ ಮುಖ್ಯ ಕಾರ್ಯದರ್ಶಿಗಳು ವಿಳಂಬ ಧೋರಣೆ ಅನುಸರಿಸಿದ್ದಾರೆ. ಆಯೋಗ ಪ್ರಸ್ತಾವನೆ ಸಲ್ಲಿಸುವಂತೆ ಆದೇಶ ಮಾಡಿದ ಎರಡೂವರೆ ವರ್ಷಗಳ ಬಳಿಕ 2023ರ ಫೆ.16ರಂದು ಪ್ರಸ್ತಾವನೆಗೆ ಬದಲಾಗಿ ಸ್ಪೃಶ್ಯ ಜಾತಿಗಳನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲೇ ಉಳಿಸಬಹುದೆಂದು ಅಭಿಪ್ರಾಯ ಕಳುಹಿಸಿದ್ದಾರೆ. ಹೀಗೆ ಅಭಿಪ್ರಾಯ ಕಳುಹಿಸಲು ಮುಖ್ಯ ಕಾರ್ಯದರ್ಶಿಗಳಿಗೆ ಅಧಿಕಾರವಿಲ್ಲ ಎಂದು ದೂರಿದರು.

ಜವಾಬ್ದಾರಿ ಹುದ್ದೆಯಲ್ಲಿರುವ ಮುಖ್ಯ ಕಾರ್ಯದರ್ಶಿಗಳು, ಸುಪ್ರೀಂಕೋರ್ಟ್ ನಿರ್ದೇಶನಕ್ಕೆ ಯಾವ ರೀತಿ ಪ್ರತಿಕ್ರಿಯೆ ನೀಡಬೇಕೆಂಬುದು ಗೊತ್ತಿಲ್ಲದಿದ್ದರೆ ನಾಚಿಕೆಗೇಡಿನ ಸಂಗತಿ. ಮುಖ್ಯ ಕಾರ್ಯದರ್ಶಿಗಳು ತಮ್ಮ ಹುದ್ದೆಗೆ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು.

ನ್ಯಾಯಾಂಗ ನಿಂದನೆ ದೂರು ದಾಖಲಿಸುವುದಾಗಿ ನೋಟಿಸ್ ನೀಡಿದ ಬಳಿಕ ಮುಖ್ಯ ಕಾರ್ಯದರ್ಶಿಗಳು ಆಯೋಗಕ್ಕೆ ಪ್ರಸ್ತಾವನೆ ಸಲ್ಲಿಸುವ ಬದಲು ಅಭಿಪ್ರಾಯ ಸಲ್ಲಿಸಿದ್ದಾರೆ. ಸಾಮಾಜಿಕ ಅಸ್ಪೃಶ್ಯತೆ ಅನುಭವಿಸಿದ ಸಮುದಾಯಗಳು ಮಾತ್ರವೇ ಪರಿಶಿಷ್ಟ ಜಾತಿ ಪಟ್ಟಿಯಲ್ಲಿರಲು ಅರ್ಹವಾಗಿದ್ದು, ಸದರಿ ಸ್ಪೃಶ್ಯ ಸಮುದಾಯಗಳು 100ಕ್ಕೆ 100ರಷ್ಟು ಪರಿಶಿಷ್ಟ ಜಾತಿ ಪಟ್ಟಿಯಿಂದ ಹೊರಗೆ ಹೋಗಲಿವೆ. ಇದನ್ನು ತಡೆಯಲು ಸಾಧ್ಯವಿಲ್ಲ ಎಂದು ಹೇಳಿದರು.

ಸ್ಪೃಶ್ಯ ಜಾತಿಗಳನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಿದ ಹಿನ್ನೆಲೆಯಲ್ಲಿ ನೈಜ ಪರಿಶಿಷ್ಟ ಜಾತಿ ಜನತೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಹಿಂದುಳಿಯುವಂತೆ ಆಗಿದೆ. ಆದರೆ ಪರಿಶಿಷ್ಟ ಜಾತಿಯ ಜನಪ್ರತಿನಿಧಿಗಳು ಸ್ಪೃಶ್ಯ ಜಾತಿಗಳನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರ್ಪಡೆ ಮಾಡಿದ್ದರ ವಿರುದ್ಧ ಧ್ವನಿ ಎತ್ತದೇ ನಿರ್ಲಕ್ಷ್ಯವಹಿಸಿದರು ಎಂದು ಆರೋಪಿಸಿದರು. ಪಾರ್ಟಿ ಪದಾಧಿಕಾರಿಗಳಾದ ಸುಮಿತ್ರಾ ಕೃಷ್ಣ ಕುಮಾರ್, ಹೆಚ್. ಎಸ್.ಶ್ರೀಕಂಠ, ವೆಂಕಟಾಚಲಯ್ಯ ಗೋಷ್ಠಿಯಲ್ಲಿದ್ದರು.

ಮೈಸೂರು ಮಿತ್ರ ಭಾನುವಾರ 2 ಏಪ್ರಿಲ್ 2023

ರಾಜಕೀಯ ಜೀವನದ ಕೊನೆ ಚುನಾವಣೆಯಲ್ಲಿ ಸ್ಪರ್ಧಿಸಿರುವ

ಮಾಜಿ ಸಿಎಂ ಸಿದ್ದರಾಮಯ್ಯಗೆ ವರುಣಾ ಜನತೆ ಆಶೀರ್ವದಿಸಿ

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮನವಿ



ತಿ.ನರಸೀಪುರ, ಏ.1– ವರುಣಾ ಸೇರಿದಂತೆ ಇಡೀ ರಾಜ್ಯವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ದು ತಮ್ಮ ರಾಜಕೀಯ ಜೀವನದ ಕೊನೆ ಚುನಾವಣೆಯಲ್ಲಿ ಸ್ಪರ್ಧಿಸಿರುವ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಕ್ಷೇತ್ರದ ಜನತೆ ಆಶೀರ್ವಾದ ಮಾಡುವಂತೆ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮನವಿ ಮಾಡಿದರು.

ವರುಣಾ ಕ್ಷೇತ್ರ ವ್ಯಾಪ್ತಿಯ ರಂಗಸಮುದ್ರ, ಹುನುಗನಹಳ್ಳಿ, ಮಾದೇಗೌಡನ ಹುಂಡಿ, ಪಟ್ಟೇಹುಂಡಿ, ಎಳೇಗೌಡನ ಹುಂಡಿ, ಹಿಟ್ಟುವಳ್ಳಿ ಗ್ರಾಮಗಳಲ್ಲಿ ಮನೆ ಮನೆಗೆ ತೆರಳಿ ತಮ್ಮ ತಂದೆ ಸಿದ್ದರಾಮಯ್ಯ ಪರ ಬಿರುಸಿನ ಮತಯಾಚನೆ ಮಾಡಿ ಅವರು ಮಾತನಾಡಿದರು.

ಕ್ಷೇತ್ರದ ಜನತೆ ಸಿದ್ದರಾಮಯ್ಯನವರಿಗೆ 2008ರಿಂದಲೂ ಬೆಂಬಲ ನೀಡುತ್ತಾ ಬಂದಿದ್ದೀರಿ. ಇದು ಅವರಿಗೆ ಕೊನೆ ಚುನಾವಣೆಯಾಗಿದ್ದು, 76 ವರ್ಷದ ಸಿದ್ದರಾಮಯ್ಯನವರು ಇದೊಂದು ಅವಧಿ ಮುಗಿಸಿ ಚುನಾವಣಾ ರಾಜಕೀಯದಿಂದ ನಿವೃತ್ತರಾಗಲಿದ್ದಾರೆ. ಹಾಗಾಗಿ ವರುಣಾ ಕ್ಷೇತ್ರ ಹಾಗೂ ಇಡೀ ರಾಜ್ಯಕ್ಕೆ ಭರಪೂರ ಯೋಜನೆಗಳನ್ನು ನೀಡಿ ಅಭಿವೃದ್ಧಿ ಕೆಲಸ ಮಾಡಿರುವ ನಾಯಕನನ್ನು ಅವರ ಕೊನೆ ಚುನಾವಣೆಯಲ್ಲಿ ಕೈ ಹಿಡಿದು ಆಶೀರ್ವಾದ ಮಾಡುವಂತೆ ಮನವಿ ಮಾಡಿದರು.

ವರುಣಾ ಕ್ಷೇತ್ರ ರಚನೆಯಾದ ಬಳಿಕ ಇಲ್ಲಿನ ಜನತೆ ನನ್ನ ತಂದೆ ಸಿದ್ದರಾಮಯ್ಯನವರನ್ನು 2 ಬಾರಿ, ಒಂದು ಬಾರಿ ನನ್ನನ್ನು ಗೆಲ್ಲಿಸಿ ಅಭಿಮಾನ ತೋರಿದ್ದಾರೆ. ಸಿದ್ದರಾಮಯ್ಯ ಶಾಸಕರಾದ ಬಳಿಕ ಕ್ಷೇತ್ರದ ಅಭಿವೃದ್ಧಿಯ ಚಹರೆಯೇ ಬದಲಾಯಿತು. ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ವರುಣಾ ಕ್ಷೇತ್ರಕ್ಕೆ 2 ಸಾವಿರ ಕೋಟಿ ರೂ. ಅನುದಾನ ನೀಡಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ನಾನು ಶಾಸಕನಾಗಿ ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದರಿಂದ 501 ಕೋಟಿ ರೂ. ಅನುದಾನ ಮಾತ್ರ ಬಂದಿತ್ತು. ಆದ್ದರಿಂದ ಸಿದ್ದರಾಮಯ್ಯ ಕಾಲದಲ್ಲಿ ಆದ ಅಭಿವೃದ್ಧಿ ಕೆಲಸಗಳನ್ನು ಮಾಡಲು ಸಾಧ್ಯವಾಗಲಿಲ್ಲ. ಆದರೆ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿ ನಿಮ್ಮ ಗೌರವಕ್ಕೆ ಚ್ಯುತಿ ಬಾರದ ಹಾಗೆ ಆಡಳಿತ ನಡೆಸಿದ್ದಾರೆ ಎಂದರು.

ಎಲ್ಲಾ ವರ್ಗದ ಜನರ ಅಭಿವೃದ್ಧಿ: ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ಎಲ್ಲಾ ವರ್ಗದವರ ಅನುಕೂಲಕ್ಕಾಗಿ ಅನ್ನ ಭಾಗ್ಯ, ಕ್ಷೀರಭಾಗ್ಯ, ಕೃಷಿಭಾಗ್ಯ, ಕೃಷಿಯಂತ್ರ ಧಾರೆ, ವಿದ್ಯಾಸಿರಿ, ಶೂ ಭಾಗ್ಯ, ಇಂದಿರಾ ಕ್ಯಾಂಟೀನ್, ಮಾತೃಪೂರ್ಣ ಸೇರಿದಂತೆ ಹತ್ತು ಹಲವು ಯೋಜನೆ ಜಾರಿಗೊಳಿಸಿದ್ದರು. ವಿಶೇಷವಾಗಿ ಸಹಕಾರಿ ಬ್ಯಾಂಕ್‌ಗಳಲ್ಲಿ ರೈತರ ಸಾಲಮನ್ನಾ ಮಾಡಿದ್ದರು. ಅದೇ ರೀತಿ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಮನಮೋಹನ್ ಸಿಂಗ್ ಅವರು 29 ಸಾವಿರ ಕೋಟಿ ರೂ. ಸಾಲ ಮನ್ನಾ ಮಾಡಿದ್ದರು. ಆದರೆ ಬಿಜೆಪಿ ಸರ್ಕಾರ ರೈತರ ಯಾವುದೇ ಸಾಲ ಮನ್ನಾ ಮಾಡಿಲ್ಲ. ರೈತರ ಆದಾಯ ದುಪ್ಪಟ್ಟು ಮಾಡುವ ಭರವಸೆ ಕೊಟ್ಟು ರೈತರೇ ಸಾಲದ ಸುಳಿಯಲ್ಲಿ ಸಿಲುಕುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು.

ಕಾಂಗ್ರೆಸ್‌ನಿಂದ ವರ್ಷಕ್ಕೆ 3 ಲಕ್ಷ ಮನೆ: ಬಿಜೆಪಿ ಸರ್ಕಾರಕ್ಕೆ ರೈತರ ಮೇಲೆ ಯಾವುದೇ ಕಾಳಜಿ ಇಲ್ಲ. ನೀರವ್ ಮೋದಿ, ಲಲಿತ್ ಮೋದಿ, ಅಂಬಾನಿ, ಅದಾನಿಯಂತಹ ಶ್ರೀಮಂತರ ಸಾಲ ಮನ್ನಾ ಮಾಡುವ ಸರ್ಕಾರ ರೈತರ ಸಾಲಮನ್ನಾ ಮಾಡುತ್ತಿಲ್ಲ. ಕಾಂಗ್ರೆಸ್ ಸರ್ಕಾರವಿದ್ದಾಗ ಭಾಗ್ಯ ಜ್ಯೋತಿ ಯೋಜನೆಯಡಿ ವಿದ್ಯುತ್ ಬಿಲ್‌ಗಳನ್ನು ಮನ್ನಾ ಮಾಡಲಾಗಿತ್ತು. ವರ್ಷವೊಂದಕ್ಕೆ ಬಡವರಿಗೆ 3 ಲಕ್ಷ ಮನೆಗಳ ನಿರ್ಮಾಣ ಮಾಡಲಾಗುತ್ತಿತ್ತು. ಆದರೆ ಬಿಜೆಪಿ ಸರ್ಕಾರ ಯಾವುದೇ ಮನೆ ನೀಡುತ್ತಿಲ್ಲ. ಬದಲಿಗೆ ನಾವು ಕೊಟ್ಟಂತಹ ಕಾರ್ಯಕ್ರಮಗಳನ್ನು ನಿಲ್ಲಿಸಿದ್ದಾರೆ. ಅಲ್ಲದೇ ಅನ್ನಭಾಗ್ಯ ಯೋಜನೆಯಡಿ ನೀಡುತ್ತಿದ್ದ 7 ಕೆಜಿ ಅಕ್ಕಿಯನ್ನು 5 ಕೆಜಿಗೆ ಇಳಿಸಿದ್ದಾರೆಂದು ಕಿಡಿ ಕಾರಿದರು.

ಶ್ರೀಮಂತರ ಜೇಬು ತುಂಬಿಸುತ್ತಿರುವ ಬಿಜೆಪಿ: ಬಿಜೆಪಿ ಸರ್ಕಾರ ಬಡವರ ಪರ ಯಾವುದೇ ಕಾರ್ಯಕ್ರಮ ರೂಪಿಸಿಲ್ಲ. ಸರ್ಕಾರಿ ಹಣದಿಂದ ಬಡವರಿಗೆ ಯಾವುದೇ ಉಚಿತ ಯೋಜನೆ ಕೊಡಬಾರದೆಂಬುದು ಅವರ ಉದ್ದೇಶ. ಆದರೆ ಶ್ರೀಮಂತರ ಜೇಬು ತುಂಬಿಸುವ ಕೆಲಸ ಮಾಡುತ್ತಿದ್ದಾರೆ. ಮೊದಲ ಬಾರಿಗೆ ಶ್ರೀಮಂತರು ಕಟ್ಟುವ ಕಾರ್ಪೊರೇಟ್ ಟ್ಯಾಕ್ಸ್ ಅನ್ನು ಸರ್ಕಾರ ಶೇ.10 ರಷ್ಟು ಕಡಿಮೆ ಮಾಡಿದೆ. ಆದರೆ ಬಡವರು ಜನ ಸಾಮಾನ್ಯರ ಮೇಲಿರುವ ಜಿಎಸ್‌ಟಿ ಟ್ಯಾಕ್ಸ್ ಅನ್ನು ಹೆಚ್ಚು ಮಾಡಿದ್ದಾರೆ. ಹಾಗಾಗಿ ಪೆಟ್ರೋಲ್, ಡಿಸೇಲ್, ಅಡುಗೆ ಎಣ್ಣೆ, ಗ್ಯಾಸ್ ಬೆಲೆ ಗಗನಕ್ಕೇರಿದೆ ಎಂದರು.

ಪಿ ಕಾರ್ಡ್ ಬ್ಯಾಂಕ್ ರಾಜ್ಯ ನಿರ್ದೇಶಕ ಕೆಂಪಯ್ಯನ ಹುಂಡಿ ಮಹದೇವಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮುದ್ದೇಗೌಡ, ಪುರಸಭಾ ಮಾಜಿ ಅಧ್ಯಕ್ಷರಾದ ಎಸ್. ಮದನ್ ರಾಜ್, ಎನ್ ಸೋಮು, ಮೃಗಾಲಯ ಪ್ರಾಧಿಕಾರದ ಮಾಜಿ ನಿರ್ದೇಶಕ ಅಮ್ಜದ್ ಖಾನ್, ಹೊಸಕೋಟೆ ಗ್ರಾ.ಪಂ. ಅಧ್ಯಕ್ಷ ಆನಂದ್, ಮಾಜಿ ಅಧ್ಯಕ್ಷ ಕೆ. ಅರುಣ್ ಕುಮಾರ್, ಮಹಿಳಾ ಘಟಕದ ಅಧ್ಯಕ್ಷ ಕುಪ್ಯ ಭಾಗ್ಯಮ್ಮ, ಗ್ರಾ.ಪಂ.ಅಧ್ಯಕ್ಷ ರಾಘವೇಂದ್ರ, ಜಿ.ಪಂ.ಮಾಜಿ ಸದಸ್ಯ ಕೆ. ಮಹದೇವ್, ತಾಲೂಕು ಕುರುಬ ಸಂಘದ ಮಾಜಿ ಅಧ್ಯಕ್ಷ ಪ್ರಶಾಂತ್ ಬಾಬು, ಪದವೀಧರ ಸಂಘದ ಜಿಲ್ಲಾಧ್ಯಕ್ಷ ರಮೇಶ್, ಅಮಾಸೆಗೌಡ, ಕೆಸರೆ ಸಿದ್ದು, ಹೊಂಬಾಳೆ ಗೌಡ, ನಾರಾಯಣ್, ವೆಂಕಟೇಶ್ ಮತ್ತಿತರರಿದ್ದರು.

> ಈ ಬಾರಿ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದ್ದು, ಗೃಹಜ್ಯೋತಿ ಯೋಜನೆಯಡಿ ಪ್ರತಿ ಕುಟುಂಬಕ್ಕೆ 200 ಯೂನಿಟ್ ಉಚಿತ ವಿದ್ಯುತ್, ಗೃಹಲಕ್ಷ್ಮಿ ಯೋಜನೆಯಡಿ ಪ್ರತಿ ತಿಂಗಳು ಮನೆ ಯಜಮಾನಿಗೆ 2000 ರೂ., ಅನ್ನಭಾಗ್ಯ ಯೋಜನೆಯಡಿ ಬಿಪಿಎಲ್ ಕುಟುಂಬದ ಪ್ರತಿ ವ್ಯಕ್ತಿಗೆ 10 ಕೆಜಿ ಅಕ್ಕಿ ಕೊಡಲಾಗುತ್ತದೆ. ಯುವನಿಧಿ ಯೋಜನೆಯಲ್ಲಿ ಪ್ರತಿತಿಂಗಳು ಪದವೀಧರರಿಗೆ 3 ಸಾವಿರ ಹಾಗೂ ಡಿಪ್ಲೋಮಾ ಪದವೀಧರರಿಗೆ 1500 ರೂ. ನಿರುದ್ಯೋಗ ಭತ್ಯೆ ನೀಡಲು ಉದ್ದೇಶಿಸಲಾಗಿದ್ದು, ಇದನ್ನು ಸಾಕಾರಗೊಳಿಸಲು ಕಾಂಗ್ರೆಸ್‌ಗೆ ಮತ ನೀಡಿ.
> - ಡಾ.ಯತೀಂದ್ರ ಸಿದ್ದರಾಮಯ್ಯ, ಶಾಸಕ.

ಕೋಮುವಾದಿ ಶಕ್ತಿ ತಡೆಯಲು ಜಾತ್ಯತೀತ ಶಕ್ತಿಗಳ ಬಲ ಹೆಚ್ಚಳ

ದಸಂಸ ಐಕ್ಯತಾ ಚಾಲನ ಸಮಿತಿ ಮುಖಂಡ ಬೆಟ್ಟಯ್ಯ ಕೋಟೆ



ಹೆಚ್.ಡಿ.ಕೋಟೆ, ಏ.1– ವಿಧಾನಸಭಾ ಚುನಾವಣೆಯಲ್ಲಿ ಕೋಮುವಾದಿ ಶಕ್ತಿಗಳನ್ನು ತಡೆಯುವ ಉದ್ದೇಶದಿಂದ ಜಾತ್ಯತೀತ ಶಕ್ತಿಗಳ ಬಲ ಹೆಚ್ಚಿಸಲಾಗುತ್ತಿದೆ ಎಂದು ದಸಂಸ ಐಕ್ಯತಾ ಚಾಲನಾ ಸಮಿತಿ ಮುಖಂಡ ಬೆಟ್ಟಯ್ಯ ಕೋಟೆ ತಿಳಿಸಿದರು.

ಪಟ್ಟಣದಲ್ಲಿ ಶನಿವಾರ ನಡೆದ ದಸಂಸ ಐಕ್ಯತ ಚಾಲನಾ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪ್ರಸ್ತುತ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ಘೋಷಣೆಯಾಗಿದೆ. ದಸಂಸ ಐಕ್ಯತಾ ಚಾಲನಾ ರಾಜ್ಯ ಸಮಿತಿಯಿಂದ 2022ರ ಡಿ.6 ರಂದು ಬೆಂಗಳೂರಿನಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಪುಣ್ಯ ಸ್ಮರಣಾರ್ಥ ರಾಜ್ಯಮಟ್ಟದ ಕಾರ್ಯಕ್ರಮದಲ್ಲಿ ಕೈಗೊಂಡ ನಿರ್ಣಯದಂತೆ ರಾಜ್ಯ ಮತ್ತು ದೇಶದಲ್ಲಿ ಕೋಮುವಾದಿಗಳನ್ನು ಹಿಮ್ಮೆಟ್ಟಿಸುವ ಜವಾಬ್ದಾರಿಯನ್ನು ಎಲ್ಲಾ ಪ್ರಗತಿಪರ ಸಂಘಟನೆಗಳ ನಾಯಕರು ತೆಗೆದುಕೊಂಡಿದ್ದಾರೆ. ಆ ನಿಟ್ಟಿನಲ್ಲಿ ದೇಶದಲ್ಲಿ ಸೌಹಾರ್ದ ಸಮಾಜ ಕಟ್ಟುವಂತ ಜಾತ್ಯತೀತ ಮನೋಭಾವನೆ ಇರುವಂತಹವರನ್ನು ಒಗ್ಗೂಡಿಸಿ ಈ ಚುನಾವಣೆಯಲ್ಲಿ ಜಾತ್ಯತೀತ ಶಕ್ತಿಗಳ ಹೆಚ್ಚು ಮಾಡಬೇಕಾಗಿದ್ದು, ಈ ಬಗ್ಗೆ ಹೆಚ್.ಡಿ.ಕೋಟೆಯ ಎಲ್ಲಾ ದಲಿತ ಸಂಘರ್ಷ ಸಮಿತಿ ಮುಖಂಡರ ಸಭೆ ನಡೆಸಿ ನಿರ್ಣಯ ತೆಗೆದುಕೊಳ್ಳಲಾಗಿದೆ. ಮುಂದಿನ ದಿನಗಳಲ್ಲಿ ಮತ್ತೊಂದು ಸಭೆ ನಡೆಸಿ ಜಾತ್ಯಾತೀತ ವ್ಯಕ್ತಿಗೆ ಬೆಂಬಲ ಕೊಡಬೇಕು ಎಂಬ ನಿರ್ಣಯ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ಸಭೆಯಲ್ಲಿ ಅಕ್ಬರ್ ಪಾಷ, ಹೆಗ್ಗನೂರು ನಿಂಗರಾಜು, ಸಣ್ಣಕುಮಾರ್ ಕೆ.ಎಂ.ಹಳ್ಳಿ, ಅಂತರಸಂತೆ ಗೋವಿಂದರಾಜು, ರಾಜಣ್ಣ ಇಟ್ನಾ, ಹೊಮ್ಮರಗಳ್ಳಿ ಸಿದ್ದರಾಜು, ಮುತ್ತು ಉಯ್ಯಂಬಳ್ಳಿ, ಪುಟ್ಟಮಾದು ಕೋಟೆ, ಸಣ್ಣಸ್ವಾಮಿ ಸರಗೂರು, ದಾಸಯ್ಯ ಹೊಳೆಹುಂಡಿ, ಶಿವಣ್ಣ ನೂರಲಕುಪ್ಪೆ, ನೂರಲಕುಪ್ಪೆ ಉಮೇಶ್, ಆಟೋ ಕುಮಾರ್, ನಿಲುವಾಗಿಲು ಸುರೇಶ್ ಇದ್ದರು.

ಏ.6ಕ್ಕೆ, ಶ್ರೀಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ

ತಿ.ನರಸೀಪುರ, ಏ.1– ಇಲ್ಲಿನ ತ್ರಿವೇಣಿ ಸಂಗಮದ ತಟದಲ್ಲಿರುವ ಪ್ರಸಿದ್ಧ ಶ್ರೀಗುಂಜಾ ನರಸಿಂಹಸ್ವಾಮಿ ಬ್ರಹ್ಮ ರಥೋತ್ಸವ ಏ.6ರಂದು ಬೆಳಗ್ಗೆ 11.45 ರಿಂದ 12.30ರ ಶುಭ ಮುಹೂರ್ತದಲ್ಲಿ ಜರುಗಲಿದೆ. ರಥೋತ್ಸವ ಅಂಗವಾಗಿ ಏ.1 ರಂದು ತಿರುನಾಳ್ ಕಟ್ಟೆ ಉತ್ಸವ, ಅನಂತ ಪೀಠಾರೋಹಣ, ಏ.2 ರಂದು ಹಂಸಾರೋಹಣ, ಏ.3 ರಂದು ಪುಷ್ಪ ಮಂಟಪ ಆರೋಹಣ, ಏ.4ರಂದು ಪ್ರಹ್ಲಾದ ಪರಿಪಾಲನೋತ್ಸವ, ಏ.5ರಂದು ಲಕ್ಷ್ಮಿ ಕಲ್ಯಾಣೋತ್ಸವ, ಗಜೇಂದ್ರ ಪರಿಪಾಲನೋತ್ಸವ, ಏ.6ರಂದು ದಿವ್ಯ ಮಹಾರಥೋತ್ಸವ ನಡೆಯಲಿದ್ದು, ಏ.10ರವರೆಗೂ ಉತ್ಸವಗಳು ನಡೆಯಲಿವೆ. ರಥೋತ್ಸವದಲ್ಲಿ ತಿ.ನರಸೀಪುರ, ಗೋಪಾಲಪುರ, ಆಲಗೂಡು, ಕೆಬ್ಬೆ, ವ್ಯಾಸರಾಜಪುರ ಯಜಮಾನರು, ಗ್ರಾಮಸ್ಥರು ಹಾಗೂ ಭಕ್ತರು ಭಾಗವಹಿಸಲಿದ್ದಾರೆ ಎಂದು ಪಾರುಪತ್ತೆಗಾರ್ ವಿ.ಪ್ರದೀಪ್ ತಿಳಿಸಿದ್ದಾರೆ.

ಎಂ.ನಾರಾಯಣ್‌ಗೆ ಮುಖ್ಯಮಂತ್ರಿ ಪದಕ



ತಿ.ನರಸೀಪುರ, ಏ.1– ಮೈಸೂರು ದಕ್ಷಿಣ ಪೊಲೀಸ್ ಉಪವಿಭಾಗ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮುಖ್ಯಪೇದೆ ಎಂ.ನಾರಾಯಣ್ ಅವರಿಗೆ 2022ನೇ ಸಾಲಿನ ಮುಖ್ಯಮಂತ್ರಿಗಳ ಪದಕ ದೊರೆತಿದೆ. ಇವರು ಈ ಹಿಂದೆ ತಿ.ನರಸೀಪುರ, ಬನ್ನೂರು ಪೊಲೀಸ್ ಠಾಣೆಗಳಲ್ಲಿ ಕಾರ್ಯ ನಿರ್ವಹಿಸಿದ್ದರು.

ವಿಜೃಂಭಣೆಯ ಹುಣಸಮ್ಮ ದೇವಿ ರಥೋತ್ಸವ



ಭೇರ್ಯ, ಏ.1– ಕೆಆರ್.ನಗರ ತಾಲೂಕಿನ ಗಂಧನಹಳ್ಳಿಯಲ್ಲಿ ಗ್ರಾಮದೇವತೆ ಹುಣಸಮ್ಮ ದೇವಿ ರಥೋತ್ಸವ ಶುಕ್ರವಾರ ರಾತ್ರಿ ಸಾವಿರಾರು ಮಹಿಳೆಯರು ತಂಬಿಟ್ಟು ಆರತಿ ಬೆಳಗುವುದರೊಂದಿಗೆ ವಿಜೃಂಭಣೆಯಿಂದ ನಡೆಯಿತು.


ರಥವನ್ನು ಬಗೆ ಬಗೆಯ ಹೂಗಳಿಂದ ಅಲಂಕರಿಸಲಾಗಿತ್ತು. ಇಡೀ ಗ್ರಾಮ ತೆಂಗಿನ ಗರಿ, ಮಾವಿನ ಸೊಪ್ಪಿನ ತೋರಣ, ಬಾಳೆ ಕಂದು, ಅಡಿಕೆ ಹೊಂಬಾಳೆಯಿಂದ ಕಂಗೊಳಿಸಿದರೆ, ವಿದ್ಯುತ್ ದೀಪಾಲಂಕಾರದಿಂದ ಜಗಮಗಿಸುತ್ತಿತ್ತು.

ಸಿಂಗಾರಗೊಂಡಿದ್ದ ರಥಕ್ಕೆ ಹುಣಸಮ್ಮ ದೇವಿ ಉತ್ಸವ ಮೂರ್ತಿ ಪ್ರತಿಷ್ಠಾಪಿಸಿ ಗ್ರಾಮದಲ್ಲಿ 4 ಬಾರಿ ಪ್ರದಕ್ಷಿಣೆ ಹಾಕಲಾಯಿತು. ತಂಬಿಟ್ಟು ಆರತಿ ಬೆಳಗಿದ ಮುತ್ತೈದೆಯರು, ತವರಿಗೆ ಬಂದ ಹೆಣ್ಣುಮಕ್ಕಳು ಹಾಗೂ ಹೊಸದಾಗಿ ಮದುವೆಯಾದ ನವದಂಪತಿಗಳು ಹಣ್ಣು ಜವನ ಎಸೆದು ಪುನೀತರಾದರು.

ಇದಕ್ಕೂ ಮೊದಲು ಕಪ್ಪಡಿ ಕ್ಷೇತ್ರದ ಕಾವೇರಿ ನದಿಯಲ್ಲಿ ಹುಣಸಮ್ಮ ದೇವಿಗೆ ಪೂಜೆ ನೆರವೇರಿಸಿ, ಅಲ್ಲಿಂದ ಗ್ರಾಮಕ್ಕೆ ತಂದು ನಂತರ ಹೂವಿನ ಪಲ್ಲಕ್ಕಿಯಲ್ಲಿ ಕೂರಿಸಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮಂಗಳ ವಾದ್ಯ ಹಾಗೂ ವಿವಿಧ ಕಲಾ ತಂಡದೊಂದಿಗೆ ಮೆರವಣಿಗೆ ಮಾಡಲಾಯಿತು. ಸಾವಿರಾರು ಭಕ್ತರು ಹುಣಸಮ್ಮ ದೇವಿಗೆ ಪೂಜೆಸಲ್ಲಿಸಿ ಇಷ್ಟಾರ್ಥ ಬೇಡಿಕೊಂಡರು.

ಭಕ್ತರಿಗೆ ಕನಕದಾಸ ಯುವಕರ ಸಂಘದಿಂದ ಮಜ್ಜಿಗೆ, ಪಾನಕ, ಕೊಸಂಬರಿ ವಿತರಿಸಲಾಯಿತು. ರಥೋತ್ಸವದಲ್ಲಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಡಿ.ರವಿಶಂಕರ್, ತಾಲೂಕು ಕುರುಬ ಸಂಘದ ಮಾಜಿ ಅಧ್ಯಕ್ಷ ಜಿ.ಎನ್.ಮಲ್ಲೇಗೌಡ, ಗ್ರಾಮದ ದೊಡ್ಡ ಯಜಮಾನ ಜಿ.ಎನ್ ರಘು, ಸಮಾಜ ಸೇವಕ ಜಿ.ಎಸ್.ವೆಂಕಟೇಶ್, ಜಿಲ್ಲಾ ಕುರುಬರ ಸಂಘದ ನಿರ್ದೇಶಕ ಹೇಮಂತ್, ಮುಖಂಡರಾದ ಜಿ.ಕೆ.ಮಹದೇವ್, ಜಿ.ಆರ್‌ಸತೀಶ್, ಎಂ.ನಾಗರಾಜ್, ಮಂಜುನಾಥ ಅರಸ್, ಕೆಂಪರಾಜು, ಶ್ರೀಧರ್, ಅರುಣ್, ಮರೀಗೌಡ, ಸಚ್ಚಿ, ಜಯರಾಜು, ಸಂತೋಷ್, ಹರೀಶ್ ಅಚಾರ್, ಬ್ಯಾಂಕ್ ರವಿ, ಭಾಸ್ಕರ್, ಧನಂಜಯ, ವೈಭವ್, ಮನು, ಲೋಹಿತ್, ಅರ್ಚಕರಾದ ಸುರೇಶ್, ರವಿಶಂಕರ್ ಹಾಗೂ ಎಲ್ಲಾ ಕೋಮಿನ ಮುಖಂಡರು, ಯಜಮಾನರು ಹಾಗೂ ಗ್ರಾಮಸ್ಥರಿದ್ದರು.

ಚಿಕ್ಕಹೆಜ್ಜೂರು ಹಾಡಿ ದೇವಾಲಯದಲ್ಲಿ ವಿಶೇಷ ಪೂಜೆ



ಹುಣಸೂರು, ಏ.1– ತಾಲೂಕಿನ ಚಿಕ್ಕಹೆಜ್ಜೂರು ಗಿರಿಜನ ಹಾಡಿ ಹೆಬ್ಬಾಳ್ಳಯ್ಯ ದೇವಾಲಯದಲ್ಲಿ ವಿಶೇಷ ಪೂಜಾ ಕೈಂಕರ್ಯ ಹಮ್ಮಿಕೊಳ್ಳಲಾಗಿತ್ತು.

ಪೂಜೆಯಲ್ಲಿ ಪಾಲ್ಗೊಂಡ ಹುಣಸೂರು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಜಿ.ಡಿ. ಹರೀಶ್ ಗೌಡ ಮಾತನಾಡಿ, ತಾಲೂಕಿನಲ್ಲಿ ತಮ್ಮದೇ ಆದ ಆಚಾರ–ವಿಚಾರ, ಸಂಸ್ಕೃತಿ, ಪೂಜಾ ವಿಧಾನಗಳ ಮೂಲಕ ಧಾರ್ಮಿಕ ಕಾರ್ಯಕ್ರಮ ನಡೆಸಿಕೊಂಡು ಬರುವುದರಲ್ಲಿ ಗಿರಿಜನರು ಮುಂಚೂಣಿಯಲ್ಲಿದ್ದಾರೆ ಎಂದರು.

ಹಾಡಿಗಳಲ್ಲಿ ವಾಸಿಸುವ ಬಹುತೇಕರಿಗೆ ಸೂರಿಲ್ಲ. ಅಂತಹ ಕುಟುಂಬಗಳನ್ನು ಗುರುತಿಸಿ ಮುಂದಿನ ದಿನಗಳಲ್ಲಿ ಸೂರನ್ನು ಒದಗಿಸಿ ಮೂಲ ಸೌಕರ್ಯ ನೀಡಲಾಗುವುದು. ಆದ್ದರಿಂದ ಗಿರಿಜನರು ಯಾವುದೇ ಮುಖಂಡರ ಮಾತಿಗೆ ಮರುಳಾಗದೆ ಯೋಚಿಸಿ ಮತ ಹಾಕಬೇಕು. ನಿಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಿ ಕೊಡಬೇಕೆಂದು ಮನವಿ ಮಾಡಿದರು. ಗ್ರಾಪಂ ಅಧ್ಯಕ್ಷ ಸುಭಾಷ್, ಸದಸ್ಯರಾದ ಗಾಯಿತ್ರಿ, ತಮ್ಮಯ್ಯ, ಗ್ರಾಮದ ಮುಖಂಡ ಲೋಕೇಶ್, ಚಂದ್ರು, ಕರಿಯಯ್ಯ, ನಾಗೇಶ್, ನಂಜುಂಡ, ಶಿವಣ್ಣ, ಪ್ರಾಣೇಶ್, ಚಂದ್ರು, ನಟರಾಜ್ ಮತ್ತಿತರರಿದ್ದರು.

ಕೋಟೆಯಲ್ಲಿ ಅಪ್ಪಣ್ಣ ಪಕ್ಷ ಸಂಘಟನೆಯಲ್ಲಿ ಸಕ್ರಿಯ



ಹೆಚ್.ಡಿ.ಕೋಟೆ, ಏ.1– ಪಕ್ಷ ಚಟುವಟಿಕೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಹಾಗೂ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಪಂದಿಸಲು ಪಟ್ಟಣದಲ್ಲಿ ಮನೆ ಮಾಡಲಾಗಿದೆ ಎಂದು ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಎಂ.ಅಪ್ಪಣ್ಣ ತಿಳಿಸಿದರು.

ಪಟ್ಟಣದ ಆಸ್ಪತ್ರೆ ಬಡಾವಣೆಯಲ್ಲಿ ನೂತನ ಮನೆ ಗೃಹಪ್ರವೇಶ ಪೂಜಾ ಕಾರ್ಯ ನೆರವೇರಿಸಿ ಮಾತನಾಡಿದ ಅವರು, ಕೋಟೆ ಹಾಗೂ ಸರಗೂರು ತಾಲೂಕಿನ ಸಾರ್ವಜನಿಕರು ತಮ್ಮ ಕೆಲಸ ಕಾರ್ಯಗಳಿಗೆ ನನ್ನನ್ನು ಭೇಟಿ ಮಾಡಲು ಮೈಸೂರಿಗೆ ಬರುತ್ತಿದ್ದರು. ಕೆಲವು ವೇಳೆ ನಾನು ಸಿಗದೆ ನಿರಾಸೆಯಿಂದ ಹಿಂತಿರುಗುತ್ತಿದ್ದರು. ಇದನ್ನು ಮನಗಂಡು ನಾನು ಸ್ಥಳೀಯವಾಗಿ ಜನರಿಗೆ ಸಿಗುವ ಉದ್ದೇಶದಿಂದ ಪಟ್ಟಣದಲ್ಲಿ ಮನೆ ಮಾಡಿದ್ದೇನೆ. ಇನ್ನು ಮುಂದೆ ನನ್ನ ಭೇಟಿಗೆ ಯಾರೂ ಕೂಡ ಮೈಸೂರಿಗೆ ಬರುವ ಅವಶ್ಯಕತೆ ಇಲ್ಲ. ನಾನು ನಿತ್ಯ ಪಟ್ಟಣದಲ್ಲೇ ಸಿಗುತ್ತೇನೆ ಎಂದರು.

ನನಗೆ ಕೋಟೆ ಕ್ಷೇತ್ರದ ಬಿಜೆಪಿ ಟಿಕೆಟ್ ನೀಡುವುದಾಗಿ ವರಿಷ್ಠರು ಭರವಸೆ ನೀಡಿದ್ದಾರೆ. ಹೀಗಾಗಿ ಕಾರ್ಯಕರ್ತರು ತಾಲೂಕಿನ ಹಳ್ಳಿ ಹಳ್ಳಿಗೆ ತೆರಳಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜನಪರ ಯೋಜನೆಗಳ ಬಗ್ಗೆ ತಿಳಿಸಿ, ಪಕ್ಷ ಸಂಘಟಿಸುವ ಮೂಲಕ ಈ ಬಾರಿಯ ಚುನಾವಣೆಯಲ್ಲಿ ಕೋಟೆ ಅರಳಿಸಲು ಶ್ರಮಿಸಬೇಕು ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯ ಎಚ್.ಸಿ.ಲಕ್ಷ್ಮಣ್, ಮೊತ್ತ ಬಸವರಾಜಪ್ಪ ಮಂಜುನಾಥ್, ನಂದೀಶ್, ವಿವೇಕಾನಂದ, ಚನ್ನಪ್ಪ, ಚಂದ್ರಮೌಳಿ, ಮಹೇಶ್, ಸುರೇಶ್, ದೊಡ್ಡ ವೀರನಾಯಕ, ಸುನಂದರಾಜು, ಸುರೇಶ್, ಶಿವನಂಜೇಗೌಡ ಇದ್ದರು.

ನನ್ನ ತಂದೆಗೆ ಸಹಕಾರ ನೀಡಿದಂತೆ ನನಗೂ ಆಶೀರ್ವದಿಸಿ

ನಿಮ್ಮ ನೋವು ನಲಿವುಗಳಿಗೆ ಸ್ಪಂದಿಸುತ್ತೇನೆ: ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್



ನಂಜನಗೂಡು, ಏ.1– ನನ್ನ ತಂದೆಗೆ ಸಹಕಾರ ನೀಡಿದಂತೆ ನನಗೂ ಆಶೀರ್ವಾದ ಮಾಡುವ ಮೂಲಕ ನಿಮ್ಮ ಸೇವೆಗೆ ಅವಕಾಶ ಕಲ್ಪಿಸಿಕೊಡಿ. ಸದಾ ನಿಮ್ಮ ಜೊತೆಯಲ್ಲಿದ್ದು ನಮ್ಮ ತಂದೆಯಂತೆ ನಿಮ್ಮ ನೋವು ನಲಿವುಗಳಿಗೆ ಸ್ಪಂದಿಸುತ್ತೇನೆ ಎಂದು ಕಾಂಗ್ರೆಸ್ ಅಭ್ಯರ್ಥಿ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ನಾಯಕರ ಸಮುದಾಯ ಭವನದಲ್ಲಿ ನಡೆದ ಚುನಾವಣಾ ಪೂರ್ವ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ನನಗೆ ರಾಜಕೀಯ ಹೊಸದು. ಆದ್ದರಿಂದ ಕೆಲವು ಸಣ್ಣಪುಟ್ಟ ತಪ್ಪುಗಳಾಗಿರಬಹುದು. ಸಮುದಾಯದ ಮುಖಂಡರನ್ನು ಗುರ್ತಿಸುವುದು ಕಷ್ಟವಾಗಿರಬಹುದು. ಮುಂದಿನ ದಿನಗಳಲ್ಲಿ ಎಲ್ಲವನ್ನೂ ಸರಿಪಡಿಸಿಕೊಳ್ಳುತ್ತೇನೆ. ನಮ್ಮ ತಂದೆಯವರಿಗೆ ನಂಜನಗೂಡನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಬೇಕು ಎಂಬ ಕನಸಿತ್ತು. ಅವರ ಆಸೆಯಂತೆ ನಂಜನಗೂಡು ಕ್ಷೇತ್ರದ ಜನರ ಸಮಸ್ಯೆ ಬಗೆಹರಿಸಿ ಅವರ ನೋವು ನಲಿವುಗಳಿಗೆ ಸ್ಪಂದಿಸುವ ಮೂಲಕ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದರು.

ಮುಖಂಡ ದೊರೆಸ್ವಾಮಿ ನಾಯಕ ಮಾತನಾಡಿ, ಬಿಜೆಪಿ ಸರ್ಕಾರ ಈ ಹಿಂದೆ ಸಮುದಾಯದ ಶ್ರೀರಾಮುಲು ಅವರನ್ನು ಉಪಮುಖ್ಯಮಂತ್ರಿ ಮಾಡುವ ಆಶ್ವಾಸನೆ ನೀಡಿ, ಅವರಿಗೆ ಒಳ್ಳೆಯ ಖಾತೆ ನೀಡದೆ ವಂಚಿಸಿತು. ಜೊತೆಗೆ ಸಮುದಾಯದ ವಿದ್ಯಾಭ್ಯಾಸಕ್ಕೆ ನೆರವಾಗಿದ್ದ ಅನೇಕ ಯೋಜನೆಗಳನ್ನು, ವಿದ್ಯಾರ್ಥಿ ವೇತನವನ್ನು ಕಡಿತಗೊಳಿಸಿ ದ್ರೋಹವೆಸಗಿದೆ. ಈಗ ಚುನಾವಣೆ ಹೊಸ್ತಿಲಲ್ಲಿ ಮೀಸಲಾತಿ ಹೆಚ್ಚಿಸುವ ಹುಸಿ ಸುಳ್ಳಿನ ಸರಮಾಲೆ ಮೂಲಕ ಜನರನ್ನು ಮರಳು ಮಾಡುತ್ತಿದೆ. ಆದರೆ ಧ್ರುವನಾರಾಯಣ್ ಸಮುದಾಯಕ್ಕೆ ಆಲದ ಮರದಂತೆ ನೆರಳಾಗಿ ಜನರಿಗೆ ಸವಲತ್ತು ತೊರಕಿಸಿಕೊಟ್ಟು ಸಮುದಾಯದ ಅಭಿವೃದ್ಧಿಗೆ ಶ್ರಮಿಸುತ್ತಿದ್ದರು. ಅವರ ಋಣ ನಮ್ಮ ಸಮುದಾಯದ ಮೇಲಿದ್ದು, ಆ ಋಣ ತೀರಿಸಲು ಒಮ್ಮತದಿಂದ ದರ್ಶನ್‌ರನ್ನು ಬೆಂಬಲಿಸಬೇಕು ಎಂದರು.

ಕಳಲೆ ಮಹೇಶ್ ಮಾತನಾಡಿದರು. ಈ ವೇಳೆ ಮಾಜಿ ಶಾಸಕ ಕಳಲೆ ಕೇಶವ ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೇಶ್, ಸಿ.ಎಂ.ಶಂಕರ್, ಮುಖಂಡರಾದ ನಾಗರಾಜು, ನಾಯಕ, ನಾಗರಾಜು, ಮಂಜುನಾಥ್, ನಾಗರಾಜಯ್ಯ, ಲಕ್ಷ್ಮಣ, ಕುಮಾರ ಸ್ವಾಮಿ, ಮಹದೇವನಾಯಕ, ಬಾಲಕೃಷ್ಣ, ಮಹದೇವ ನಾಯಕ, ಮಣಿ, ನಾರಾಯಣ, ಪ್ರದೀಪ್, ನಾಗೇಶ್ ರಾಜ್ ಸೇರಿದಂತೆ ಇತರರಿದ್ದರು.

ಪೋಸ್ಟಲ್ ಬ್ಯಾಲೆಟ್ ಪೇಪರ್ ತರಬೇತಿ ಕಾರ್ಯಾಗಾರ



ಜಯಪುರ, ಏ.1– ಇಲ್ಲಿನ ಗ್ರಾಪಂ ಆವರಣದಲ್ಲಿ ಶನಿವಾರ ಪೋಸ್ಟಲ್ ಬ್ಯಾಲೆಟ್ ಪೇಪರ್ ತರಬೇತಿ ಕಾರ್ಯಾಗಾರ ನಡೆಯಿತು.

ಜಯಪುರ ಹೋಬಳಿ ವ್ಯಾಪ್ತಿಯ ಒಟ್ಟು 84 ಬೂತ್‌ಗಳ ಬಿಎಲ್‌ಒಗಳು, ಚುನಾವಣಾ ನೋಡಲ್ ಅಧಿಕಾರಿಗಳು, ಶಾಲಾ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತರು ಹಾಗೂ ವಿವಿಧ ಸರ್ಕಾರಿ ಇಲಾಖಾ ಸಿಬ್ಬಂದಿ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. 80 ವರ್ಷ ಮೇಲ್ಪಟ್ಟವರಿಗೆ ಪೋಸ್ಟಲ್ ಬ್ಯಾಲೆಟ್ ಪೇಪರ್ ಮೂಲಕ ಮನೆ ಮನೆಗೆ ತೆರಳಿ ಮತದಾನ ಮಾಡಿಸುವ ಕುರಿತು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ನೋಡಲ್ ಅಧಿಕಾರಿ ಡಿ.ಆರ್.ವಿನಯ್ ಸಿಬ್ಬಂದಿಗಳಿಗೆ ತರಬೇತಿ ನೀಡಿದರು. ನೋಡಲ್ ಅಧಿಕಾರಿಗಳಾದ ಡಾ.ಗಿರೀಶ್, ಡಾ.ರವೀಂದ್ರ, ಜಯಪುರ ಹೋಬಳಿ ಉಪ ತಹಸೀಲ್ದಾರ್ ಎನ್.ಎಂ.ನಿಂಗಪ್ಪ, ರಾಜಸ್ವ ನೀರಿಕ್ಷಕ ಲೋಹಿತ್ ಮತ್ತು ಗ್ರಾಮ ಲೆಕ್ಕಿಗರಿದ್ದರು.

ವಾರಾಂತ್ಯಕ್ಕೆ ಬಿಜೆಪಿ ಅಭ್ಯರ್ಥಿಗಳ ಮೊದಲ ಪಟ್ಟಿ ಪ್ರಕಟ



ಬೆಂಗಳೂರು: ಬಿಜೆಪಿ ಅಭ್ಯರ್ಥಿಗಳ ಆಯ್ಕೆಗೆ ಮತದಾನ ನಡೆಸಿದ ಬೆನ್ನಲ್ಲೇ ಎಲ್ಲ ಸಂಘಟನಾ ಜಿಲ್ಲೆಗಳ ಪ್ರಮುಖರ ಜತೆ ಪಕ್ಷದ ರಾಜ್ಯ 'ಪ್ರಮುಖರ ಸಮಿತಿ' (ಕೋರ್ ಕಮಿಟಿ) ಸದಸ್ಯರು ಸಮಾಲೋಚನೆ ನಡೆಸಿ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಮುಂದಿನ ವಾರಾಂತ್ಯದಲ್ಲೇ ಮೊದಲ ಪಟ್ಟಿ ಪ್ರಕಟವಾಗುವ ಸಾಧ್ಯತೆ ಇದೆ.

ರೆಸಾರ್ಟ್ ಒಂದರಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸಚಿವ ಮನ್‌ಸುಖ್‌ಮಾಂಡವೀಯ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್‌ಕುಮಾರ್ ಕಟೀಲ್, ಪಕ್ಷದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಶಾಸಕ ಜಗದೀಶ ಶೆಟ್ಟರ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಶುಕ್ರವಾರ ಎಲ್ಲ ಕ್ಷೇತ್ರಗಳಲ್ಲೂ ಮತದಾನದ ಮೂಲಕ ಅಭಿಪ್ರಾಯ ಸಂಗ್ರಹಿಸಲಾಗಿತ್ತು. ಮತ ಪತ್ರಗಳನ್ನು ಬೆಂಗಳೂರಿಗೆ ತಂದಿದ್ದು, ಎಣಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಜಿಲ್ಲಾ ಘಟಕಗಳ ಅಧ್ಯಕ್ಷರು, ಮಂಡಲ ಸಮಿತಿಗಳ ಅಧ್ಯಕ್ಷರು ಸೇರಿದಂತೆ ಆಯಾ ಜಿಲ್ಲೆಯಲ್ಲಿನ ಪ್ರಮುಖರ ಜತೆ ಪ್ರತ್ಯೇಕವಾಗಿ ಸಭೆ ನಡೆಸಿದ್ದು, ಅಭ್ಯರ್ಥಿಗಳ ಆಯ್ಕೆ ಕುರಿತು ಸಮಾಲೋಚನೆ ನಡೆಸಲಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಮತ ಎಣಿಕೆ ವರದಿ ಭಾನುವಾರ ಬೆಳಿಗ್ಗೆ ಲಭಿಸುವ ಸಾಧ್ಯತೆ ಇದೆ. ಅಂದೂ ಪ್ರಮುಖರ ಸಮಿತಿ ಸಭೆ ನಡೆಯಲಿದೆ. ಎಲ್ಲ ಕ್ಷೇತ್ರಗಳ ಟಿಕೆಟ್ ಆಕಾಂಕ್ಷಿಗಳ ಜತೆ ಸಮಾಲೋಚನೆ ನಡೆಸುವ ಸಾಧ್ಯತೆ ಇದೆ. ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಬುಧವಾರದ (ಏಪ್ರಿಲ್5) ಒಳಗೆ ದೆಹಲಿಗೆ ರವಾನೆಯಾಗಲಿದೆ. ಪಕ್ಷದ ಸಂಸದೀಯ ಮಂಡಳಿಯ ಅನುಮೋದನೆ ಬಳಿಕ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಗುರುವಾರ ಅಥವಾ ಶುಕ್ರವಾರ 150ರಿಂದ 170 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗುವ ಸಂಭವವಿದೆ ಎಂದು ಮೂಲಗಳು ಹೇಳಿವೆ.

ಸಂಧಾನಕ್ಕೆ ಕಸರತ್ತು: ವಿಧಾನಪರಿಷತ್ ಸದಸ್ಯ ಆರ್. ಶಂಕರ್, ರಾಣೆಬೆನ್ನೂರು ಕ್ಷೇತ್ರದಲ್ಲಿ ತಮಗೆ ಸ್ಪರ್ಧಿಸಲು ಅವಕಾಶ ನೀಡುವಂತೆ ಸಭೆಯಲ್ಲಿ ಮನವಿ ಮಾಡಿದ್ದಾರೆ. ಹಾಲಿ ಶಾಸಕ ಅರುಣ್ ಕುಮಾರ್ ಪೂಜಾರ ಮತ್ತು ಶಂಕರ್ ನಡುವೆ ಸಂಧಾನಕ್ಕೆ ವರಿಷ್ಠರು ಪ್ರಯತ್ನಿಸುತ್ತಿದ್ದಾರೆ. ಹೊಸದುರ್ಗ ಕ್ಷೇತ್ರದ ಶಾಸಕ ಗೂಳಿಹಟ್ಟಿ ಶೇಖರ್ ವಿರುದ್ಧ ಕೆಲವು ಸ್ಥಳೀಯ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಪ್ರತಿ ಜಿಲ್ಲೆಯ ರಾಜಕೀಯ ಸ್ಥಿತಿಗತಿ ಕುರಿತು ಪ್ರಮುಖರ ಸಮಿತಿ ಹಾಗೂ ಕೇಂದ್ರದಿಂದ ಬಂದಿರುವ ನಾಯಕರು ವಿಸ್ತೃತವಾಗಿ ಮಾಹಿತಿ ಪಡೆದಿದ್ದಾರೆ. ಎದುರಾಳಿಗಳ ಬಲಾಬಲ, ಬಿಜೆಪಿಯಲ್ಲಿರುವ ಆಕಾಂಕ್ಷಿಗಳ ಸಂಖ್ಯೆ, ಹೆಚ್ಚಿನ ಪೈಪೋಟಿ ಇರುವ ಕ್ಷೇತ್ರಗಳ ಕುರಿತು ವಿವರವಾಗಿ ಚರ್ಚಿಸಿದ್ದಾರೆ. ಸ್ಥಳೀಯವಾಗಿ ಆಕಾಂಕ್ಷಿಗಳ ಮಧ್ಯೆ ಸಹಮತ ಮೂಡಿಸುವ ಪ್ರಯತ್ನವೂ ನಡೆಯುತ್ತಿದೆ ಎಂದು ಮುಖಂಡರೊಬ್ಬರು ತಿಳಿಸಿದರು.

ಜೈಲಿನಿಂದ ಹೊರ ಬಂದ ನವಜೋತ್ ಸಿಂಗ್ ಸಿಧು

ಚಂಡೀಗಡ, ಏ.1– ರಸ್ತೆಯಲ್ಲಿ ರೋಷಾವೇಶ ತೋರಿದ ಪ್ರಕರಣದಲ್ಲಿ ಕಳೆದ 10 ತಿಂಗಳಿಂದ ಪಾಟಿಯಾಲ ಜೈಲಿನಲ್ಲಿ ಸೆರೆವಾಸ ಅನುಭವಿಸುತ್ತಿದ್ದ ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಸನ್ನಡತೆಯ ಆಧಾರದಲ್ಲಿ ಶನಿವಾರ (ಏ.1) ಬಿಡುಗಡೆಯಾದರು.




ಜೈಲಿನಿಂದ ಹೊರ ಬಂದ ಬಳಿಕ ಮಾತನಾಡಿದ ಸಿಧು, ನನ್ನನ್ನು ಮಧ್ಯಾಹ್ನದ ಸುಮಾರಿಗೆ ಬಿಡುಗಡೆ ಮಾಡಬೇಕಿತ್ತು. ಆದರೆ ಜೈಲು ಅಧಿಕಾರಿಗಳು ತಡಮಾಡಿದ್ದಾರೆ. ಮಾಧ್ಯಮಗಳು ಹೊರಹೋಗಲೆಂದು ಅವರು ಕಾಯುತ್ತಿದ್ದರು ಎಂದು ಆರೋಪಿಸಿದರು. ಶನಿವಾರ ಮಧ್ಯಾಹ್ನದ ಹೊತ್ತಿಗೆ ಬಿಡುಗಡೆಯಾಗಲಿದ್ದು, ಜೈಲಿನ ಹೊರಗೆ ಮಾಧ್ಯಮಗೋಷ್ಠಿ ನಡೆಸುವುದಾಗಿ ಸಿಧು ಶುಕ್ರವಾರ ಟ್ವೀಟ್ ಮಾಡಿ ಹೇಳಿದ್ದರು. ಈ ದೇಶದಲ್ಲಿ ಸರ್ವಾಧಿಕಾರ ಬಂದಾಗಲೆಲ್ಲಾ ಒಂದು ಕ್ರಾಂತಿಯೂ ಬಂದಿದೆ. ಈ ಬಾರಿ ರಾಹುಲ್ ಗಾಂಧಿ ಅವರ ರೂಪದಲ್ಲಿ ಕ್ರಾಂತಿ ಬಂದಿದೆ. ಅವರು ಸರ್ಕಾರವನ್ನು ಸಮರ್ಥವಾಗಿ ಎದುರಿಸಲಿದ್ದಾರೆ ಎಂದು ಹೇಳಿದರು.

ಸಿಧು 1988ರಲ್ಲಿ ನಡೆಸಿದ್ದ ಹಲ್ಲೆಯಲ್ಲಿ 65 ವರ್ಷದ ಗುರ್ನಾಮ್ ಸಿಂಗ್ ಎಂಬುವವರು ಮೃತಪಟ್ಟಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಸಿಧು ಅವರಿಗೆ ಒಂದು ವರ್ಷ ಕಾರಾಗೃಹ ಶಿಕ್ಷೆ ನೀಡಿತ್ತು. ಇದರ ಅನುಸಾರ ಸಿಧು ಅವರು ಕಳೆದ ವರ್ಷ ಮೇ 20ರಂದು ಪಟಿಯಾಲ ನ್ಯಾಯಾಲಯಕ್ಕೆ ಶರಣಾಗಿದ್ದರು.

ಹಾಸನ ಟಿಕೆಟ್‌ಗೆ ಒತ್ತಡ ತರಬೇಡಿ, ನಾವು ಕೊಡುವ ಅಭ್ಯರ್ಥಿ ಪರ ಕೆಲಸ ಮಾಡಿ: ದೇವೇಗೌಡರ ಕಿವಿಮಾತು

ಬೆಂಗಳೂರು, ಏ.1– ಹಾಸನ ಕ್ಷೇತ್ರದ ಟಿಕೆಟ್ ಗೊಂದಲ ಇನ್ನೂ ಕಗ್ಗಂಟಾಗಿದೆ. ಇಂದು ದೇವೇಗೌಡರ ನಿವಾಸದಲ್ಲಿ ಹಾಸನದ ಮುಖಂಡರ ಸಭೆಯನ್ನು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ನಡೆಸಿದರು.



ಸಭೆಯಲ್ಲಿ ಕೆಲವು ಮುಖಂಡರು ಭವಾನಿ ರೇವಣ್ಣಗೆ ಟಿಕೆಟ್ ಕೊಡುವಂತೆ ಒತ್ತಾಯ ಮಾಡಿದರು. ಭವಾನಿ ರೇವಣ್ಣಗೆ ಕೊಡದೇ ಹೋದರೂ ರೇವಣ್ಣರನ್ನೆ ಹಾಸನದಿಂದ ನಿಲ್ಲಿಸಿ ಎಂದು ಮುಖಂಡರು ಒತ್ತಾಯ ಮಾಡಿದರು.

ಹಾಸನ ಕ್ಷೇತ್ರದಲ್ಲಿ ಪರಿಶೀಲನೆ ಮಾಡಿಯೇ ಟಿಕೆಟ್ ನೀಡುತ್ತೇವೆ. ಹೆಚ್.ಡಿ ರೇವಣ್ಣ ಹೊಳೆನರಸೀಪುರದಿಂದ ಸ್ಪರ್ಧಿಸುತ್ತಾರೆ. ಎರಡೂ ಕ್ಷೇತ್ರದಲ್ಲಿ ರೇವಣ್ಣ ಚುನಾವಣೆಗೆ ನಿಲ್ಲುವುದಿಲ್ಲ. ನಮಗೆ ಹಾಸನ ಕ್ಷೇತ್ರ ಉಳಿಸಿಕೊಳ್ಳುವುದಷ್ಟೇ ಗುರಿ. ಹಾಸನ ಕ್ಷೇತ್ರಕ್ಕೆ ಟಿಕೆಟ್ ಯಾರಿಗೆ ಕೊಡಬೇಕು ಎನ್ನುವುದನ್ನು ನಿರ್ಧಾರ ಮಾಡುತ್ತೇನೆ. ಎಲ್ಲರೂ ಬೆಂಬಲಿಸುವಂತೆ ಸಭೆಯಲ್ಲಿ ಮನವಿ ಮಾಡಿದರು. ಹಾಸನ ರಾಜಕಾರಣ ನನಗೆ 40 ವರ್ಷದಿಂದ ಗೊತ್ತಿದೆ. ಗೆಲ್ಲುವ ಅಭ್ಯರ್ಥಿ ಹಾಗೂ ಕಾರ್ಯಕರ್ತರಿಗೆ ಟಿಕೆಟ್ ಕೊಡುತ್ತೇವೆ. ದಯವಿಟ್ಟು ಒತ್ತಡ ತರಬೇಡಿ ಎಂದು ಮಾಜಿ ಪ್ರಧಾನಿ ದೇವೇಗೌಡರು ಮನವಿ ಮಾಡಿದರು.

ಸಭೆ ಬಳಿಕ ಮಾತನಾಡಿದ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ, ಪಕ್ಷದ ಕೆಲ ಮುಖಂಡರು ತಮ್ಮ ಅಭಿಪ್ರಾಯ ಹೇಳಿದ್ದಾರೆ. ಗೌಡರಿಗೆ ಆರೋಗ್ಯ ಸರಿಯಿಲ್ಲ. ಬೆಂಬಲಿಗರು ಬೇಡಿಕೆ ಇಟ್ಟಿದ್ದಾರೆ. ಸೂಕ್ತ ನಿರ್ಣಯ ಆಗುತ್ತದೆ. ಆದರೆ ಇಂತಹದ್ದೆ ನಿರ್ಣಯ ಆಗುತ್ತೆ ಎಂದು ಹೇಳುವುದಕ್ಕೆ ಆಗಲ್ಲ ಎಂದರು. ಹಾಸನ ಟಿಕೆಟ್ ವಿಚಾರ ಇನ್ನೂ ಚರ್ಚೆಯ ಹಂತದಲ್ಲೇ ಇದೆ. ಎಲ್ಲರೂ ಒಗ್ಗೂಡಿ ಒಂದೇ ತೀರ್ಮಾನ ಆಗಿರುತ್ತದೆ. ಅದಕ್ಕೆ ಎಲ್ಲರೂ ಬದ್ಧ. ಈಗ ನಡೆದ ಸಭೆಯಲ್ಲಿ ಯಾವುದೇ ತೀರ್ಮಾನ ಆಗಿಲ್ಲ. ಎರಡು ದಿನ ಕಾದು ನೋಡೋಣ ಎಂದು ಹೇಳಿದರು.

ಸ್ವರೂಪ್ ಹಾಸನ ಅಭ್ಯರ್ಥಿ?

ಹಾಸನ: ಹಾಸನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜೆಡಿಎಸ್ ವರಿಷ್ಠ ಹೆಚ್.ಡಿ.ದೇವೇಗೌಡರ ಕುಟುಂಬ ಸದಸ್ಯರ ನಡುವಿನ ಶೀತಲ ಸಮರ ರಾಜ್ಯದ ಗಮನ ಸೆಳೆದಿತ್ತು. ಹಾಸನ ಕ್ಷೇತ್ರದ ಅಭ್ಯರ್ಥಿ ಆಯ್ಕೆ ಕಗ್ಗಂಟು ಕ್ಲೈಮ್ಯಾಕ್ಸ್ ಹಂತಕ್ಕೆ ತಲುಪಿದೆ.



ಪ್ರಮುಖ ಬೆಳವಣಿಗೆಯೊಂದರಲ್ಲಿ ಎಚ್.ಡಿ ದೇವೇಗೌಡ ಅವರು ತಮ್ಮ ಪುತ್ರ ಎಚ್.ಡಿ.ರೇವಣ್ಣಗೆ ದೊಡ್ಡ ಶಾಕ್ ನೀಡಿದ್ದು, ಹಾಸನ ಕ್ಷೇತ್ರಕ್ಕೆ ಸಾಮಾನ್ಯ ಕಾರ್ಯಕರ್ತರಿಗೆ ಟಿಕೆಟ್ ನೀಡುವ ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರ ನಿರ್ಧಾರವನ್ನು ಎತ್ತಿ ಹಿಡಿದಿದ್ದಾರೆ.

ಹಾಸನ ಕ್ಷೇತ್ರದ ಕುರಿತು ಚರ್ಚಿಸಲು ಬೆಂಗಳೂರಿನಲ್ಲಿ ಹೆಚ್.ಡಿ ರೇವಣ್ಣ ಮತ್ತು ಭವಾನಿ ಅವರ ಅನುಯಾಯಿಗಳು ಭೇಟಿಯಾದ ಬಳಿಕ ಹೆಚ್.ಡಿ ದೇವೇಗೌಡ ಅವರು ಈ ಮೂಲಕ ಪುತ್ರ ಹೆಚ್.ಡಿ. ರೇವಣ್ಣ, ಸೊಸೆ ಭವಾನಿ ಮತ್ತು ಮೊಮ್ಮಕ್ಕಳಿಗೆ ಸ್ಪಷ್ಟ ಸಂದೇಶವನ್ನು ರವಾನಿಸಿದರು.

ಹಾಸನ ಕ್ಷೇತ್ರವನ್ನು ಪ್ರತಿಷ್ಠೆಯಾಗಿ ಪರಿಗಣಿಸಿ ಪತ್ನಿ ಭವಾನಿ ಪರವಾಗಿ ಸವಾಲೆಸೆದಿದ್ದ ಹೆಚ್.ಡಿ ರೇವಣ್ಣ ಅವರಿಗೆ ದೇವೇಗೌಡರ ಈ ನಿರ್ಧಾರದಿಂದ ಭಾರೀ ಹಿನ್ನಡೆಯಾಗಿದೆ ಎನ್ನಲಾಗುತ್ತಿದೆ. ಹಾಸನ ಸೀಟು ವಿವಾದವಾಗಿ ಗೌಡರ ಕುಟುಂಬದಲ್ಲಿ ಭಿನ್ನಾಭಿಪ್ರಾಯಕ್ಕೆ ನಾಂದಿ ಹಾಡಿದ ಬೆನ್ನಲ್ಲೇ ಎಚ್.ಡಿ.ಕುಮಾರಸ್ವಾಮಿ ಹಾಗೂ ಹೆಚ್.ಡಿ.ರೇವಣ್ಣ ನಡುವೆ ವಾಗ್ವಾದ ನಡೆದಿತ್ತು. ಭವಾನಿ ಅಭ್ಯರ್ಥಿಯಾಗುವುದಕ್ಕೆ ಜೆಡಿಎಸ್ ವರಿಷ್ಠರು ತೀವ್ರ ವಿರೋಧ ವ್ಯಕ್ತಪಡಿಸಿದ್ದು, ಹೆಚ್.ಡಿ ರೇವಣ್ಣ ಬೆಂಬಲಿಗರೊಂದಿಗೆ ಹಾಸನ ಕ್ಷೇತ್ರಕ್ಕೆ ಅವರನ್ನು ಕಣಕ್ಕಿಳಿಸುವ ಸಾಧಕ–ಬಾಧಕಗಳನ್ನು ವಿವರಿಸಿದ್ದಾರೆ ಎಂದು ಗೌಡರ ಕುಟುಂಬದ ಆಪ್ತ ಮೂಲಗಳು ತಿಳಿಸಿವೆ.

ರಂಗ ತರಬೇತಿ ಶಿಬಿರದ ಸಮಾರೋಪ

ಮೈಸೂರು, ಏ.1(ಜಿಎ)– ಆತ್ಮಸ್ಥೈರ್ಯ ಜೊತೆಗೆ ವ್ಯಕ್ತಿತ್ವ ವಿಕಸನಗೊಳ್ಳಲು ರಂಗ ತರಬೇತಿಯೂ ಸಹಕಾರಿಯಾಗಲಿದೆ ಎಂದು ಮೈಸೂರು ವಿವಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಡಾ ವಿಜಯ ಕುಮಾರಿ ಎಸ್.ಕರಿಕಲ್ ತಿಳಿಸಿದರು.



ಮೈಸೂರಿನ ವಿಜಯನಗರದಲ್ಲಿರುವ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಕುವೆಂಪು ರಂಗಮಂದಿರದಲ್ಲಿ ಅದಮ್ಯ ರಂಗಶಾಲೆ ವತಿಯಿಂದ ಶನಿವಾರ ಆಯೋಜಿಸಿದ್ದ ರಂಗ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಸಿನಿಮಾಗಳು ಬಂದ ನಂತರ ವೃತ್ತಿ ರಂಗಭೂಮಿ ಮತ್ತು ಹವ್ಯಾಸಿ ರಂಗಭೂಮಿಯೂ ಪ್ರಸಿದ್ಧಿ ಕಡಿಮೆ ಆಯಿತು. ಟಿವಿಗಳು ಬಂದ ನಂತರವಂತೂ ಅದನ್ನು ಕೇಳುವವರೇ ಇಲ್ಲ. ಇದರ ನಡುವೆಯೂ ಮೈಸೂರಿನ ರಂಗಾಯಣ, ಮಂಡ್ಯ ರಮೇಶ್ ಅವರ ನಟನ ರಂಗಶಾಲೆ, ನಿರಂತರ ಫೌಂಡೇಷನ್ ಮತ್ತು ಅದಮ್ಯ ರಂಗಶಾಲೆಗಳು ರಂಗ ತರಬೇತಿ ನೀಡುವ ಮೂಲಕ ರಂಗಭೂಮಿಯ ಅಸ್ತಿತ್ವವನ್ನು ಉಳಿಸುವ ಕಾರ್ಯಕ್ಕೆ ಮುಂದಾಗಿವೆ ಎಂದು ಶ್ಲಾಘಿಸಿದರು.

ಮಹಿಳೆಯರು ಹಿಂದಿನ ಕಾಲದಲ್ಲಿ ರಾತ್ರಿ ವೇಳೆ ನಾಟಕ ನೋಡಬಾರದೆಂದು ತಾಕೀತು ಮಾಡುತ್ತಿದ್ದರು. ಆದರೆ, ಇಂದು ಅದು ಬದಲಾಗಿದ್ದು, ಹಳ್ಳಿಗಳಲ್ಲಿ ನಡೆಯುವ ಜಾತ್ರೆಗಳಲ್ಲಿ ಮಹಿಳೆಯರು ಭಾಗವಹಿಸಿ ಆನಂದವನ್ನು ಸವಿಯುತ್ತಿರುವುದು ಸಂತಸದ ವಿಚಾರವಾಗಿದೆ. ನಾಟಕ ಎಂಬುದು ಪ್ರಾಚೀನ ಕಲೆಯಾಗಿದ್ದು, ಇದನ್ನು ಗ್ರೀಕ್ ದೇಶದಲ್ಲಿ ಕ್ರಿಸ್ತ ಪೂರ್ವದಲ್ಲಿಯೇ ತತ್ವಜ್ಞಾನಿ ಅರಿಸ್ಟಾಟಲ್ ನಾಟಕಗಳ ಬಗ್ಗೆ ಅನೇಕ ಕೃತಿಗಳನ್ನು ಬರೆದಿದ್ದರು ಎಂದರು.

ರಂಗ ತರಬೇತಿಯಲ್ಲಿ ನಟನೆ ಮಾತ್ರವಲ್ಲದೆ ಉಚ್ಚಾರಣೆ ಸ್ಪಷ್ಟವಾಗಿರುತ್ತದೆ. ಧೈರ್ಯ ಬರುತ್ತದೆ. ಜೊತೆಗೆ ಆತ್ಮಸ್ಥೈರ್ಯ ಹೆಚ್ಚುತ್ತದೆ ಹಾಗೂ ವ್ಯಕ್ತಿತ್ವ ವಿಕಸನ ಮಾಡುವ ವೇದಿಕೆಯಾಗಿದ್ದು, ರಂಗ ತರಬೇತಿ ಇಂದು ಉದ್ಯೋಗಕ್ಕೂ ದಾರಿಯೂ ಆಗಲಿದೆ ಎಂದರು. ಶಿಬಿರದಲ್ಲಿ ಪಾಲ್ಗೊಂಡಿದ್ದ ಶಿಬಿರಾರ್ಥಿಗಳು ವಿನೋದ ಸಿ. ಮೈಸೂರು ಅವರ ನಿರ್ದೇಶನದಲ್ಲಿ ಊರು ಸುಟ್ಟರೂ ಹನುಮಪ್ಪ ಹೊರಗ ನಾಟಕ ಪ್ರದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ಪ್ರಗತಿಪರ ಚಿಂತಕ ಡಾ.ಕೆ.ಕಾಳಚನ್ನೇಗೌಡ, ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ, ಅದಮ್ಯ ರಂಗಶಾಲೆಯ ಗೌರವ ಕಾರ್ಯದರ್ಶಿ ಟಿ.ಸತೀಶ್ ಜವರೇಗೌಡ, ಕಾರ್ಯದರ್ಶಿ ಚಂದ್ರು ಮಂಡ್ಯ ಉಪಸ್ಥಿತರಿದ್ದರು.











